ಬೆಂಗಳೂರು ಸಂಪುಟ: 16 ಸಂಚಿಕೆ: 39 ಪುಟ: 06 ಬುಧವಾರ 01-01-2025

Mail:mussanje2010@gmail.com

www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)
Executive Editor: L P Babu
Honourary Editor: Venkatesh



ಸುದೀಪ್‌ಗೆ ನಡೆದಿತ್ತು ಎರಡನೇ ಮದುವೆ!

ಮಾಧುರಿ ಮದುವೆ ಸುದ್ದಿ ಕೇಳಿ ಅತ್ತಿದ್ರು ನಟಿಯ ತಂದೆ

ಲವ್ ಫೆಲ್ಯೂರ್ ಪುಟ 6

## ಸಚಿವ ಪ್ರಿಯಾಂಕ ಖರ್ಗೆಯವರು ರಾಜಿನಾಮೆ ನೀಡುವ ಪ್ರಶ್ನೆ ಇಲ್ಲ : ಮುಖ್ಯಮಂತ್ರಿ ಸಿದ್ದರಾಮಯ್ಯ

# ರಾಜಕೀಯ ಪ್ರೇರಿತ



**ಬೆಂಗಳೂರು :** ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಪ್ರಿಯಾಂಕ ಖರ್ಗೆಯವರು ರಾಜಿನಾಮೆ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಇದು ರಾಜಕೀಯ ದ್ವೇಷದಿಂದ ಮಾಡಿರುವ ಆರೋಪ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.
ವಿಧಾನಸೌಧದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, .

ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಪ್ರಿಯಾಂಕ ಖರ್ಗೆಯವರು ರಾಜಿನಾಮೆ ನೀಡಬೇಕೆಂಬ ಪ್ರತಿಪಕ್ಷಗಳ ಒತ್ತಾಯ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ , ಆತ್ಮಹತ್ಯೆ ಮಾಡಿಕೊಂಡಿರುವ ಬೀದರ್ ನ ಗುತ್ತಿಗೆದಾರನ ಡೆತ್ ನೋಟ್ ನಲ್ಲಿ ಸಚಿವ ಪ್ರಿಯಾಂಕ ಖರ್ಗೆಯವರ ಹೆಸರಿರುವುದಿಲ್ಲ. ಈ ಪ್ರಕರಣದಲ್ಲಿ ಅವರ ಪಾತ್ರವಾಗಲಿ , ಸಾಕ್ಷ್ಯವಾಗಲಿ ಇಲ್ಲ. ಆದ್ದರಿಂದ ರಾಜಿನಾಮೆ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದಾಗ್ಯೂ ಯಾವುದೇ ವಿಚಾರಣೆಗೆ ತಾನು ಸಿದ್ಧವಿರುವುದಾಗಿ ಸಚಿವರು ತಿಳಿಸಿದ್ದಾರೆ.

ಆದರೆ ಇಂತಹದೇ ಪ್ರಕರಣದಲ್ಲಿ ಹಿಂದೆ ಬಿಜೆಪಿಯ ಕೆ.ಎಸ್.ಈಶ್ವರಪ್ಪಅವರ ಹೆಸರನ್ನು ಡೆತ್ ನೋಟ್ ನಲ್ಲಿ ಬರೆಯಲಾಗಿತ್ತು. ಪ್ರಕರಣದ ಸಂಬಂಧ ದಾಖಲಾಗಿರುವ ದೂರಿನ ತನಿಖೆಯುನ್ನು ಸಿಐಡಿ ಗೆ ವಹಿಸಲಾಗಿದ್ದು, ವರದಿ ಬಂದ ನಂತರ ಸೂಕ್ತ ಕ್ರಮಕೈಗೊಳ್ಳಲಾಗುವುದು. ಇದು ರಾಜಕೀಯ ದ್ವೇಷದಿಂದ ಮಾಡಿರುವ ಆರೋಪ ಎಂದು ತಿಳಿಸಿದರು.

**ಸಿಬಿಐಗೆ ವಹಿಸಿಲ್ಲ:** ಬಿಜೆಪಿಯವರು ತನಿಖೆಯನ್ನು ಸಿಬಿಐ ಗೆ ವಹಿಸಬೇಕೆಂದು ಒತ್ತಾಯಿಸುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ರಾಜ್ಯದ ಪೊಲೀಸರ ಬಗ್ಗೆ ಬಿಜೆಪಿಯವರಿಗೆ ನಂಬಿಕೆಯಿಲ್ಲವೇ? ಬಿಜೆಪಿಯವರು ಅಧಿಕಾರದಲ್ಲಿದ್ದಾಗ , ಒಂದು ಪ್ರಕರಣವನ್ನೂ ಸಿಬಿಐಗೆ ವಹಿಸಿರಲಿಲ್ಲ. ಆದ್ದರಿಂದ ಸಿಬಿಐಗೆ ತನಿಖೆ ಪುಟ 2

### ಯುವ ಜನತೆ ನಮ್ಮ ಆಸ್ತಿ

## ಅವರ ಭವಿಷ್ಯ ಹಾಳಾಗದಂತೆ ಎಚ್ಚರ ವಹಿಸಿ

ಬೆಂಗಳೂರು: ರಾಜ್ಯದ ಜನರ ಆರ್ಥಿಕ ಶಕ್ತಿ ಹೆಚ್ಚಿಸಲು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿ, ಪ್ರಾದೇಶಿಕ ಅಸಮತೋಲನ, ಅಸಮಾನತೆ ತೊಡೆಯಲು ನಿಮ್ಮ ಸಹಕಾರ ಹೆಚ್ಚು ಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಐಎಎಸ್- ಐಪಿಎಸ್ ಅಧಿಕಾರಿಗಳಿಗೆ ಕರೆ ನೀಡಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಹಿರಿಯ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಿಗೆ ಹೊಸವರ್ಷದ ಶುಭಾಶಯಗಳನ್ನು ಕೋರಿ ಮಾತನಾಡಿದರು. ಬದುಕಿನಲ್ಲಿ ಏಳು ಬೀಳು ಸಹಜ ಮತ್ತು ನಿರಂತರ. ಪರಿಸ್ಥಿತಿಗಳು ಸದಾ ನಮ್ಮ ಪರವಾಗಿ ಇರುವುದಿಲ್ಲ. ಪುಟ 2






ಆಡಳಿತಾಂಗದ ಸುಧಾರಣೆ ಸಂಬಂಧ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಹಿರಿಯ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚರ್ಚಿಸಿದರು. ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಅತೀಕ್ ಅಹಮದ್, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ ಸೇರಿ ಎಲ್ಲಾ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಕ್ಯಾನ್ಸರ್ ಗೆದ್ದ ಕರುನಾಡ ಚಕ್ರವರ್ತಿ

ಬೆಂಗಳೂರು: ಶಿವರಾಜ್ ಕುಮಾರ್ ದಂಪತಿ ಅಭಿಮಾನಿಗಳಿಗೆ ಹೊಸ ವರ್ಷದಲ್ಲಿ ಒಳ್ಳೆಯ ಸುದ್ದಿ ನೀಡಿದ್ದಾರೆ. ಶಸ್ತ್ರಚಿಕಿತ್ಸೆಗಾಗಿ ಅಮೆರಿಕಕ್ಕೆ ಹೋಗಿದ್ದ ಶಿವಣ್ಣ, ಶಸ್ತ್ರಚಿಕಿತ್ಸೆಯ ಬಳಿಕ ಇದೇ ಮೊದಲ ಬಾರಿಗೆ ಕಾಣಿಸಿಕೊಂಡಿದ್ದಾರೆ.



ಅಭಿಮಾನಿಗಳಿಗಾಗಿ ವಿಶೇಷ ವಿಡಿಯೋ ಒಂದನ್ನು ಶಿವಣ್ಣ ದಂಪತಿ ಹಂಚಿಕೊಂಡಿದ್ದಾರೆ. ಶಿವಣ್ಣನ ಆರೋಗ್ಯ ಹೇಗಿದೆ, ಯಾವಾಗ ಅವರು ವಾಪಸ್ಸಾಗುತ್ತಾರೆ ಎಂಬ ಬಗ್ಗೆ ಶಿವಣ್ಣನವರೇ ಮಾಹಿತಿ ನೀಡಿದ್ದಾರೆ ಅನಾರೋಗ್ಯದಿಂದ ಬಳಲುತ್ತಿದ್ದ ನಟ ಶಿವರಾಜ್ ಕುಮಾರ್ ಕೆಲ ದಿನಗಳ ಹಿಂದೆ ಚಿಕಿತ್ಸೆಗಾಗಿ ಅಮೆರಿಕಕ್ಕೆ ತೆರಳಿದ್ದರು. ಪುಟ 2

## ಯಾವುದೇ ಅಹಿತಕರ ಘಟನೆ ನಡೆದಿಲ್ಲ: ಪರಮೇಶ್ವರ್

**ಬೆಂಗಳೂರು:** ರಾಜ್ಯದಲ್ಲಿ ಹೊಸ ವರ್ಷ ಸಂಭ್ರಮಾಚರಣೆ ಶಾಂತಿಯುತವಾಗಿತ್ತು. ಸಂಭ್ರಮಾಚರಣೆಯ ವೇಳೆ ಯಾವುದೇ ಅಹಿತಕರ ಘಟನೆ ನಡೆದಿಲ್ಲ ಎಂದು ಗೃಹ ಸಚಿವ ಡಾ. ಜಿ ಪರಮೇಶ್ವರ್ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಹಕಾರ ಕೊಟ್ಟ ಜನರಿಗೂ ಧನ್ಯವಾದ ಹೇಳಿದ್ದಾರೆ.

ರಾಜ್ಯದಲ್ಲಿ ಶಾಂತಿಯುತವಾಗಿ ಹೊಸ ವರ್ಷ ಸಂಭ್ರಮಾಚರಣೆ ನಡೆದಿದೆ. ಲಕ್ಷಾಂತರ ಜನರು ಹೊಸ ವರ್ಷದ ಸಂಭ್ರಮದಲ್ಲಿ ಭಾಗಿಯಾಗಿದ್ದರು. ಹೀಗಿದ್ದರೂ ರಾಜ್ಯದಲ್ಲಿ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಪೊಲೀಸ್ ಇಲಾಖೆಯೂ ಸೂಕ್ತ ಕ್ರಮ ಕೈಗೊಂಡಿತ್ತು.



ಜನರೂ ಸಹಕಾರ ನೀಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೊದಲನೇ ಬಾರಿ ಯಶಸ್ವಿಯಾಗಿ ಹೊಸ ವರ್ಷ ಸಂಭ್ರಮಾಚರಣೆ ನಡೆದಿದೆ. ಯಾವುದೇ ಸಮಸ್ಯೆ ಆಗದಂತೆ ಪೊಲೀಸ್ ಇಲಾಖೆಯಿಂದ ಎಲ್ಲಾ ರೀತಿಯಲ್ಲಿ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿತ್ತು. ಜನರು ಪೊಲೀಸರಿಗೆ ಎಲ್ಲಾ ರೀತಿಯಲ್ಲಿ ಸಹಕಾರ ಕೊಟ್ಟಿದ್ದಾರೆ. ಹಾಗಾಗಿ ಜನರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಕಾನೂನು ಸುವ್ಯವಸ್ಥೆ ಕಾಪಾಡಲು ಯುವಕರು ಎಲ್ಲಾ ಸಹಕಾರ ಕೊಟ್ಟಿದ್ದಾರೆ ಎಂದರು. ನೀವೆಲ್ಲೂ ಹೊಸವರ್ಷದ ಸಂಭ್ರಮಾಚರಣೆಗೆ ಹೋಗಿಲ್ಲವೇ? ಎಂಬ ಪ್ರಶ್ನೆಗೆ, ನಾನೂ ಹೋಗೋಕೆ ಹೊರಟಿದ್ದೆ. ಪುಟ 2

## ವರ್ಷಾಚರಣೆ: 513 ಪ್ರಕರಣ ದಾಖಲು

**ಬೆಂಗಳೂರು :** ನ್ಯೂ ಇಯರ್ ಸೆಲಬ್ರೇಷನ್ ಬಳಿಕ ಪಾನಮತ್ತರಾಗಿ ವಾಹನ ಚಲಾಯಿಸುತ್ತಿದ್ದವರಿಗೆ ನಗರ ಸಂಚಾರ ಪೊಲೀಸರು ಬಿಸಿ ಮುಟ್ಟಿಸಿದ್ದಾರೆ.

ತಡರಾತ್ರಿ ನಗರದಾದ್ಯಂತ 28,127ಕ್ಕೂ ಹೆಚ್ಚು ವಾಹನಗಳ ತಪಾಸಣೆ ಕೈಗೊಂಡ ಸಂಚಾರ ಪೊಲೀಸರು, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಒಟ್ಟು 513 ಪ್ರಕರಣಗಳನ್ನ ದಾಖಲಿಸಿಕೊಂಡಿದ್ದಾರೆ. ಪುಟ 2


ಕಳೆದ ವರ್ಷದ ಸಂಭ್ರಮಾಚರಣೆಯ ಸಂದರ್ಭದಲ್ಲಿ 7,620 ವಾಹನಗಳ ಚಾಲಕರನ್ನ ತಪಾಸಣೆಗೊಳಪಡಿಸಿದ್ದ ಪೊಲೀಸರು ಪಾನಮತ್ತನಾಗಿದ್ದ ಪುಟ 2

## ರಾಜೀನಾಮೆ ಪ್ರಶ್ನೆಯೇ ಇಲ್ಲ

ಕಲಬುರುಗಿ: ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ಕೊಡುವ ಪ್ರಶ್ನೆಯೇ ಇಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಆಗ್ರಹಿಸಿದ ಬಿಜೆಪಿಗೆ ತಿರುಗೇಟು ನೀಡಿದ ಸಚಿವ ಶರಣಪ್ರಕಾಶ್ ಪಾಟೀಲ್, ಖರ್ಗೆ ಯಾಕೆ ರಾಜೀನಾಮೆ ಕೊಡಬೇಕು. ಪ್ರಿಯಾಂಕ್ ಖರ್ಗೆಗೂ ಸಚಿನ್ ಆತ್ಮಹತ್ಯೆಗೂ ಏನು ಸಂಬಂಧ? ಬಿಜೆಪಿಯವರಿಗೆ ಪುಟ 2

## ವರ್ಷಾಚರಣೆ: ಭರ್ಜರಿ ಅಬಕಾರಿ ಆದಾಯ

**ಬೆಂಗಳೂರು:** ಹೊಸ ವರ್ಷದ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ರಾಜ್ಯ ಅಬಕಾರಿ ಇಲಾಖೆಗೆ ಭರ್ಜರಿ ಆದಾಯ ಹರಿದು ಬಂದಿದೆ. ಡಿಸೆಂಬರ್ 31 ರ ಮಂಗಳವಾರ ಬೆಳಿಗ್ಗೆಯಿಂದ



ಮಧ್ಯಾಹ್ನ 2 ಗಂಟೆಯವರೆಗೆ ಅರ್ಧ ದಿನದ ಅವಧಿಯಲ್ಲಿ ಕೆಎಸ್‌ಬಿಸಿಎಲ್‌ನಿಂದ ಬರೋಬ್ಬರಿ 308 ಕೋಟಿ ರುಪಾಯಿ ಮದ್ಯ ಮಾರಾಟವಾಗಿದೆ ಎಂಬ ಮಾಹಿತಿ ಬಲ್ಲ ಮೂಲಗಳಿಂದ ಲಭ್ಯವಾಗಿದೆ.

ಅಬಕಾರಿ ಇಲಾಖೆ 250 ಕೋಟಿ ರೂ. ಮೌಲ್ಯದ ಮದ್ಯ ಮಾರಾಟದ ಗುರಿ ಇಟ್ಟುಕೊಂಡಿತ್ತು. ಆದರೆ, ಅದನ್ನೂ ಮೀರಿ ಮಾರಾಟವಾಗಿದೆ. ಕಳೆದ ವರ್ಷ 2023 ರ ಡಿಸೆಂಬರ್ 31 ರಂದು 193 ಕೋಟಿ ರುಪಾಯಿ ಮದ್ಯ ಮಾರಾಟ ಆಗಿತ್ತು. 2024 ಡಿಸೆಂಬರ್ 31 ರಂದು 7,305 ಮದ್ಯ ಮಾರಾಟಗಾರರು ಪುಟ 2

## ರಾಜ್ಯದಲ್ಲಿ ಅಘೋಷಿತ ತುರ್ತು ಪರಿಸ್ಥಿತಿಯಿದೆ



**ಬೆಂಗಳೂರು:** ರಾಜ್ಯದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಇದೆ. ಆದರೆ ನಾವು ಇದನ್ನು ಎದುರಿಸುತ್ತೇವೆ ಎಂದು ರಾಜ್ಯ ಸರ್ಕಾರದ ವಿರುದ್ಧ ವಿಧಾನಪರಿಷತ್ ಸದಸ್ಯ ಸಿಟಿ ರವಿ ವಾಗ್ದಾಳಿ ನಡೆಸಿದ್ದಾರೆ.

ನಗರದಲ್ಲಿ ಬುಧವಾರ ಮಾತನಾಡಿದ ಅವರು, ರಾಜ್ಯದಲ್ಲಿ ಹಾಲಿನಿಂದ ಆಲ್ಕೋಹಾಲ್ ವರೆಗೆ ಬೆಲೆ ಏರಿಕೆ ಆಗಿದೆ. ರಾಜ್ಯದಲ್ಲಿ ಭ್ರಷ್ಟಾಚಾರ ಮುಗಿಲುಮುಟ್ಟಿದೆ. ಮೂಡಾ, ವಾಲ್ಮೀಕಿ, ಅಬಕಾರಿ ಇಲಾಖೆ ಹಗರಣ ರಾಜ್ಯದಲ್ಲಿ ನಡೆದಿದೆ.ಬಾಣಂತಿಯರ ಸರಣಿ ಸಾವು ನಿಂತಿಲ್ಲ. ಜೀವ ರಕ್ಷಕ ಔಷಧಿಗಳ ಕೊರತೆ ಇದೆ. ಇದು ಅಘಾತಕಾರಿ ಎಂದರು. ಪ್ರಾಮಾಣಿಕ ಅಧಿಕಾರಿಗಳಿಗೆ ಆತ್ಮಹತ್ಯೆ ಭಾಗ್ಯ ಸಿಕ್ಕಿದೆ. ಗುತ್ತಿಗೆದಾರರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.

ಮುಖ್ಯಮಂತ್ರಿಗಳ ಆದಿಯಾಗಿ ರಾಜ್ಯ ಸರ್ಕಾರದ ಸಂಪುಟದ ಬಹುತೇಕ ಸಚಿವರ ವಿರುದ್ಧ ಒಂದಲ್ಲಾ ಒಂದು ರೀತಿಯಲ್ಲಿ ಹಗರಣದ ಆರೋಪಗಳು ಇವೆ. ಭ್ರಷ್ಟಾಚಾರದ ಹಗರಣದಲ್ಲಿ ಅವರು ಸಿಲುಕಿಕೊಂಡಿದ್ದಾರೆ ಎಂದು ವಿವರಿಸಿದರು.

ಪ್ರಿಯಾಂಕ್ ಖರ್ಗೆ ಅವರು ಉಳಿದವರಿಗೆ ಹೇಳಲು ಮಾತ್ರ ನಾನಿರುವುದು, ನನಗೆ ಅನ್ವಯ ಆಗಲ್ಲ ಎಂಬುವುದು ಅವರ ನಡವಳಿಕೆ ಆಗಿದೆ. ಪುಟ 2

## ಪ್ರತ್ಯೇಕ ಅಪಘಾತ: ಮೂವರು ಸಾವು

ರಾಮನಗರ : ಹೊಸ ವರ್ಷದ ಮೊದಲ ದಿನದಂದೇ ರಾಮನಗರ ಜಿಲ್ಲೆಯ ಮಾಗಡಿ ಸಮೀಪ ಎರಡು ಪ್ರತ್ಯೇಕ ಅಪಘಾತವಾಗಿದ್ದು, ಮೂವರು ಮೃತಪಟ್ಟಿದ್ದಾರೆ.

ಟೀ ಕುಡಿಯಲು ಹೊರಟಿದ್ದ ಯುವಕರ ಕಾರು ಪಲ್ಟಿಯಾಗಿದ್ದು, ಇಬ್ಬರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಕಾರಿನಲ್ಲಿದ್ದ ಐವರಿಗೆ ಗಾಯವಾಗಿವೆ. ಮಾಗಡಿ ತಾಲೂಕಿನ ಹೊಸಪಾಳ್ಯದ ಜನತಾ ಕಾಲೋನಿ ಬಳಿ ಬೆಳಗಿನ ಜಾವ 3 ಗಂಟೆಗೆ ಘಟನೆ ನಡೆದಿದೆ.

ಮಂಜು (31), ಕಿರಣ್ (30) ಮೃತರು ಎಂದು ಗುರುತಿಸಲಾಗಿದೆ. ಮೂಲತಃ ಮಾಗಡಿ ತಾಲೂಕಿನ ಚೋಳನಾಯಕನಹಳ್ಳಿ ಗ್ರಾಮದವರು. ಗಾಯಾಳುಗಳಿಗೆ ಮಾಗಡಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.ಮತ್ತೊಂದು ಅಪಘಾತದಲ್ಲಿ ಪಾದಚಾರಿಗೆ ಬೈಕ್ ಡಿಕ್ಕಿಯಾಗಿ ಸ್ಥಳದಲ್ಲೆ ಮೃತಪಟ್ಟಿದ್ದಾರೆ. ಪುಟ 2

## ಶಕ್ತಿ ಯೋಜನೆ: ರಾಜ್ಯಕ್ಕೆ ಆಂಧ್ರ ಸರಕಾರಿ ನಿಯೋಗ

**ಬೆಂಗಳೂರು:** ರಾಜ್ಯದಲ್ಲಿ ಜನಪ್ರಿಯ ವಾಗಿರುವ ಶಕ್ತಿ ಯೋಜನೆಯನ್ನು ಆಂಧ್ರ ಪ್ರದೇಶ ಸರ್ಕಾರವು ಜಾರಿಗೊಳಿಸಲು ಮುಂದಾಗಿದೆ. ಈ ನಿಟ್ಟಿನಲ್ಲಿ ಯೋಜನೆಯ ಅಧ್ಯಯನಕ್ಕಾಗಿ ಆಂಧ್ರದ ಸಚಿವರ ಹಾಗೂ ಅಧಿಕಾರಿಗಳ ನಿಯೋಗ ನಗರಕ್ಕೆ ಭೇಟಿ ನೀಡಲಿದೆ.

ರಾಜ್ಯದಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸುವ ಶಕ್ತಿ ಯೋಜನೆ ಜನಮೆಚ್ಚುಗೆ ಗಳಿಸಿದೆ. ಕಳೆದ ಎರಡು ವರ್ಷದಿಂದ ಕಾಂಗ್ರೆಸ್ ಸರ್ಕಾರ ಮಹತ್ವಾಕಾಂಕ್ಷೆಯ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸುತ್ತಿದೆ. ಕಾಂಗ್ರೆಸ್ ಅನುಷ್ಠಾನ ಮಾಡಿರುವ ಪಂಚ ಗ್ಯಾರಂಟಿಗಳ ಪೈಕಿ ಶಕ್ತಿ ಯೋಜನೆ ಜನಪ್ರಿಯ ಗಳಿಸಿರುವ ಯೋಜನೆಯಾಗಿದೆ.




ಈಗಾಗಲೇ ಶಕ್ತಿ ಯೋಜನೆಯಡಿ ಸುಮಾರು 300 ಕೋಟಿ ರೂಪಾಯಿಗೂ ಅಧಿಕ ಮೊತ್ತದ ಟಿಕೆಟ್ ಮಹಿಳೆಯರಿಗೆ ವಿತರಿಸಲಾಗಿದೆ. ಶಕ್ತಿ ಯೋಜನೆಗೆ ಉತ್ತಮ ಸ್ಪಂದನೆ ಸಿಕ್ಕಿದ್ದು, ಮಹಿಳೆಯರ ಮೆಚ್ಚುಗೆಗೆ ಪಾತ್ರವಾಗಿದೆ. ಇದೀಗ ರಾಜ್ಯದ ಶಕ್ತಿ ಯೋಜನೆಯತ್ತ ಸಿಎಂ ಚಂದ್ರಬಾಬು ನಾಯ್ಡು ನೇತೃತ್ವದ ಆಂಧ್ರಪ್ರದೇಶ ಸರ್ಕಾರ ಚಿತ್ತ ನೆಟ್ಟಿದೆ. ಆಂಧ್ರಪ್ರದೇಶ ಸರ್ಕಾರ ಅಲ್ಲಿ ಕರ್ನಾಟಕ ಮಾದರಿಯಲ್ಲೇ ಶಕ್ತಿ ಯೋಜನೆಯನ್ನು ಜಾರಿ ಮಾಡಲು ಒಲವು ಹೊಂದಿದೆ. ಈ ನಿಟ್ಟಿನಲ್ಲಿ ಆಂಧ್ರದ ಸಚಿವರು ಹಾಗೂ ಅಧಿಕಾರಿಗಳ ನಿಯೋಗ ಜ.2ಕ್ಕೆ ರಾಜ್ಯಕ್ಕೆ ಭೇಟಿ ನೀಡಲಿದೆ. ಬೆಂಗಳೂರಿಗೆ ಆಗಮಿಸಿ ಶಕ್ತಿ ಯೋಜನೆ ಬಗ್ಗೆ ಅಧ್ಯಯನ ನಡೆಸಲಿದೆ. ರಾಜ್ಯದ ಶಕ್ತಿ ಯೋಜನೆ ಅನುಷ್ಠಾನ, ಸಾಧಕ ಬಾಧಕಗಳ ಬಗ್ಗೆ ಮಾಹಿತಿ ಸಂಗ್ರಹಿಸಲಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯಕ್ಕೆ ಆಂಧ್ರ ಪ್ರದೇಶದ ಮೂವರು ಸಚಿವರು ಸೇರಿ ಹಿರಿಯ ಅಧಿಕಾರಿಗಳ ಸುಮಾರು 15 ಸದಸ್ಯರ ನಿಯೋಗ ಜ.3ರಂದು ಸಿಎಂ, ಸಾರಿಗೆ ಸಚಿವ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರನ್ನು ಭೇಟಿಯಾಗಿ ಶಕ್ತಿ ಯೋಜನೆಯ ಬಗ್ಗೆ ಮಾಹಿತಿ ಪಡೆಯಲಿದ್ದಾರೆ.

ನಿಯೋಗದಲ್ಲಿ ಆಂಧ್ರದ ಸಾರಿಗೆ ಸಚಿವ ಮಂಡಿಪಲ್ಲಿ ರಾಮಪ್ರಸಾದ್ ಶೆಟ್ಟಿ, ಗೃಹ ಮತ್ತು ವಿಪತ್ತು ನಿರ್ವಹಣೆ ಸಚಿವೆ ವಂಗಲಪುಡಿ ಅನಿತಾ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಗುಮ್ಮಟ್ಟಿ ಸಂಧ್ಯಾರಾಣಿ ಇರಲಿದ್ದಾರೆ. ಪುಟ 2

## ಯಕ್ಷಗಾನ ಕಲಾವಿದ ಸಾವು

**ಮಂಗಳೂರು:** ಉದಯೋನ್ಮುಖ ಯಕ್ಷಗಾನ ಕಲಾವಿದ, ಎಂಎಸ್‌ಡಬ್ಲ್ಯು ವಿದ್ಯಾರ್ಥಿ ಪ್ರವಿತ್ ಆಚಾರ್ಯ(21) ಎಂಬವರು ನಗರದ ಹೊರವಲಯದ ಅರ್ಕುಳದಲ್ಲಿ ನಡೆದ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಮೂಲತಃ ಬೆಳ್ತಂಗಡಿ ತಾಲೂಕಿನ ಗುರುವಾಯನಕೆರೆ ಸಮೀಪದ ಮೇಲಂತಬೆಟ್ಟು ಮುಂಡೂರು ನಿವಾಸಿ ಶೇಖರ ಆಚಾರ್ಯರ ಪುತ್ರನಾದ ಪ್ರವಿತ್ ಆಚಾರ್ಯ ಬಂಟ್ವಾಳ ತಾಲೂಕಿನ ವಿಟ್ಲದ ಸರ್ಕಾರಿ ಕಾಲೇಜಿನಲ್ಲಿ ಪ್ರಥಮ ವರ್ಷದ ಎಂಎಸ್‌ಡಬ್ಲ್ಯು ವಿದ್ಯಾರ್ಥಿ. ಕಾಲೇಜು ವ್ಯಾಸಂಗದ ಉದ್ದೇಶದಿಂದ ಮಂಗಳೂರು ಸಮೀಪ ತನ್ನ ಸಂಬಂಧಿಕರ ಮನೆಯಲ್ಲಿ ವಾಸ್ತವ್ಯವಿದ್ದರು. ಪ್ರವಿತ್ ಆಚಾರ್ಯ ಪಡೀಲ್ ಅಥವಾ ಬಿ.ಸಿ. ರೋಡ್‌ನಲ್ಲಿ ದ್ವಿಚಕ್ರ ವಾಹನ ನಿಲ್ಲಿಸಿ ವಿಟ್ಲಕ್ಕೆ ಕಾಲೇಜಿಗೆ ಹೋಗುತ್ತಿದ್ದರು. ಎಂದಿನಂತೆ ಮಂಗಳವಾರ ಪ್ರವಿತ್ ಸಂಜೆ ಕಾಲೇಜು ಮುಗಿಸಿ ಬಿ.ಸಿ. ರೋಡ್‌ನಲ್ಲಿದ್ದ ಬೈಕ್ ಹತ್ತಿ ಮಂಗಳೂರಿನತ್ತ ಬರುತ್ತಿದ್ದರು. ಅರ್ಕುಳಕ್ಕೆ ಬರುತ್ತಿದ್ದಂತೆ ಬೈಕ್ ಡಿವೈಡರ್‌ಗೆ ಡಿಕ್ಕಿ ಹೊಡೆದು ಅವರು ರಸ್ತೆಗೆಸೆಯಲ್ಪಟ್ಟಿದ್ದಾರೆ. ಈ ವೇಳೆ ಹಿಂಭಾಗದಿಂದ ಬರುತ್ತಿದ್ದ ಐಸ್‌ಕ್ರೀಂ ಸಾಗಣೆಯ ವಾಹನ ಪ್ರವಿತ್ ತಲೆಯ ಮೇಲೆ ಹರಿದ ಪರಿಣಾಮ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಹವ್ಯಾಸಿ ಯಕ್ಷಗಾನ ಕಲಾವಿದನಾಗಿರುವ ಪ್ರವಿತ್ ಆಚಾರ್ಯ, ಸಸಿಹಿತ್ಲು ಯಕ್ಷಗಾನ ಮೇಳದಲ್ಲಿ ಸ್ತ್ರೀವೇಷಧಾರಿಯಾಗಿಯೂ ಯಕ್ಷಗಾನ ಕಲಾಸಕ್ತರ ಗಮನ ಸೆಳೆಯುತ್ತಿದ್ದರು.

# ಬಿಜೆಪಿಯಿಂದ ಶ್ರೀರಾಮ ಮಂದಿರಕ್ಕೆ ಕರೆದುಕೊಂಡು ಹೋಗುವ ಕಾರ್ಯಕ್ರಮ ಇಲ್ಲ

**ಬೆಂಗಳೂರು:** ರಾಜ್ಯದಿಂದ ಅಯೋಧ್ಯೆಗೆ 25 ರೈಲುಗಳು ಹೋಗಲಿವೆ; ಆಸಕ್ತರು ಹೆಸರು ಕೊಡಬೇಕು ಎಂಬ ಮಾಹಿತಿ ಇರುವ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಕಳೆದ ವರ್ಷದ ವಿಡಿಯೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಮರು ಪೋಸ್ಟ್ ಮಾಡುತ್ತಿದ್ದಾರೆ ಎಂದು ಅಯೋಧ್ಯೆ ಶ್ರೀ ರಾಮ ಮಂದಿರ ದರ್ಶನ ಅಭಿಯಾನ ರಾಜ್ಯ ಸಹ ಸಂಚಾಲಕ ಜಗದೀಶ್ ಹಿರೇಮನಿ ಅವರು ತಿಳಿಸಿದ್ದಾರೆ.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ "ಜಗನ್ನಾಥ ಭವನ"ದಲ್ಲಿ ಇಂದು ಮಾಧ್ಯಮದವರ ಜೊತೆ ಮಾತನಾಡಿದ ಅವರು, ಈ ವರ್ಷ ಬಿಜೆಪಿ ವತಿಯಿಂದ ಅಯೋಧ್ಯೆ ಶ್ರೀರಾಮ ಮಂದಿರಕ್ಕೆ ಕರೆದುಕೊಂಡು ಹೋಗುವ ಕಾರ್ಯಕ್ರಮ ಸದ್ಯಕ್ಕೆ ಇಲ್ಲ ಎಂದು ಸ್ಪಷ್ಟಪಡಿಸಿದರು.

ಪಕ್ಷದ ಹಿತೈಷಿಗಳು, ಕಾರ್ಯಕರ್ತರು ಮತ್ತು ಸಾರ್ವಜನಿಕರು ಇದರ ಮಾಹಿತಿಯನ್ನು ತಿಳಿದುಕೊಳ್ಳಬೇಕು ಎಂದು ಮನವಿ ಮಾಡಿದರು. ಈ ವರ್ಷ ಜನವರಿ– ಫೆಬ್ರವರಿಯಲ್ಲಿ ಬಿಜೆಪಿಯಿಂದ ಅಯೋಧ್ಯೆಗೆ ಕರೆದುಕೊಂಡು ಹೋಗುವ ಯೋಜನೆ ಇಲ್ಲ ಎಂದು ವಿವರ ನೀಡಿದರು.

2024 ಜನವರಿ 22ರಂದು ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ಆಗಿತ್ತು. ಪ್ರಧಾನಿ ನರೇಂದ್ರ ಮೋದಿಯವರು ಪ್ರತಿಷ್ಠಾಪನೆ ಮಾಡಿದ್ದ ಅಯೋಧ್ಯೆಗೆ ಇಡೀ ದೇಶಾದ್ಯಂತ ಶ್ರೀ ರಾಮ ಮಂದಿರ ದರ್ಶನ ಅಭಿಯಾನವನ್ನು ನಾವು ಕಳೆದ ವರ್ಷ ಜನವರಿ– ಫೆಬ್ರವರಿಯಲ್ಲಿ ನಡೆಸಿದ್ದೆವು ಎಂದು ವಿವರಿಸಿದರು. 25 ರೈಲುಗಳಲ್ಲಿ 26 ಸಾವಿರ ರಾಮಭಕ್ತರನ್ನು ಅಯೋಧ್ಯೆಗೆ ದರ್ಶನಕ್ಕೆ ಕಳುಹಿಸಿದ್ದೆವು ಎಂದು ತಿಳಿಸಿದರು.



**ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ನಾಗಪುರ ವಾರ್ಡನ ಶಾಸಕರ ಕಚೇರಿಯಲ್ಲಿ ಮಹಾಲಕ್ಷ್ಮಿ ಎಜುಕೇಶನ್ ಟ್ರಸ್ಟ್ ವತಿಯಿಂದ ಪ್ರಧಾನ ಮಂತ್ರಿ ನರೇಂದ್ರ ಮೋದಿಜೀಯವರ ಕನಸಿನಂತೆ ಕ್ಷಯರೋಗ ಮುಕ್ತ ಭಾರತ ಮಾಡಲು ದೇಶಾದ್ಯಂತ ಕರೆ ನೀಡಿದ್ದು ಪ್ರಧಾನಿ ಅವರ ಆಶಯದಂತೆ ಮಾಜಿ ಸಚಿವರು ಹಾಗೂ ಶಾಸಕರಾದ ಕೆ ಗೋಪಾಲಯ್ಯ ಅವರ ಮಾರ್ಗದರ್ಶನದಂತೆ ಕ್ಷೇತ್ರದಲ್ಲಿರುವ ಕ್ಷಯರೋಗಿಗಳಿಗೆ ಪ್ರತಿ ತಿಂಗಳಂತೆ ಪೌಷ್ಠಕಾಂಶ ಇರುವ ಆಹಾರದ ಕಿಟ್ ಇಂದು ಕೂಡ ರೋಗಿಗಳಿಗೆ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಶಾಸಕ ನೆ ಲ ನರೇಂದ್ರಬಾಬು ಬಿಬಿಎಂಪಿ ಮಾಜಿ ಉಪಮೇಯ ಎಸ್ ಹರೀಶ್ ಕ್ಷೇತ್ರದ ಅಧ್ಯಕ್ಷ ರಾಘವೇಂದ್ರ ಶೆಟ್ಟಿ ಟ್ರಸ್ಟ್ ನ ಅಧ್ಯಕ್ಷ ಜಯರಾಮಯ್ಯ ಮುಖಂಡರುಗಳಾದ ವೆಂಕಟೇಶ್,ಜಯಸಿಂಹ, ರಘು ಸೇರಿದಂತೆ ಹಲವರು ಉಪಸ್ಥಿತರಿದ್ದರು.**

## ಎಲ್‌ಪಿಜಿ ದರ ಇಳಿಕೆ

ನವದೆಹಲಿ: ಇಂಡಿಯನ್ ಆಯಿಲ್ ಇತ್ಯಾದಿ ಪ್ರಮುಖ ತೈಲ ಮಾರುಕಟ್ಟೆ ಕಂಪನಿಗಳು ಹೊಸ ವರ್ಷಕ್ಕೆ ಎಲ್‌ಪಿಜಿ ದರಗಳನ್ನು ಇಳಿಸಿವೆ.

ಕಮರ್ಷಿಯಲ್ ಎಲ್‌ಪಿಜಿ ಸಿಲಿಂಡರ್‌ಗಳು ಅಗ್ಗಗೊಂಡಿವೆ. ಕಮರ್ಷಿಯಲ್ 19 ಕಿಲೋ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಬೆಲೆ 14.5 ರೂನಿಂದ 16 ರೂವರೆಗೆ ಇಳಿಕೆ ಆಗಿದೆ. ಬೆಂಗಳೂರಿನಲ್ಲಿ 14.5 ರೂನಷ್ಟು ಇಳಿಕೆ ಆಗಿದೆ. ಇನ್ನು, 47 ಕಿಲೋ ಕಮರ್ಷಿಯಲ್ ಸಿಲಿಂಡರ್‌ಬೆಲೆ 36.50 ರೂನಷ್ಟು ಕಡಿಮೆ ಆಗಿದೆ. ಆದರೆ, ಗೃಹ ಬಳಕೆಯ ಅಡುಗೆ ಅನಿಲ ಸಿಲಿಂಡರ್‌ಗಳ ಬೆಲೆಯಲ್ಲಿ ಬದಲಾವಣೆ ಆಗಿಲ್ಲ.

ಕಮರ್ಷಿಯಲ್ ಸಿಲಿಂಡರ್‌ಗಳ ಬೆಲೆ ಆರು ತಿಂಗಳ ಬಳಿಕ ಮೊದಲ ಬಾರಿಗೆ ಕಡಿಮೆ ಆಗಿದೆ. 14.2 ಕಿಲೋ ಮತ್ತು 5 ಕಿಲೋ ಎಲ್‌ಪಿಜಿ ಸಿಲಿಂಡರ್‌ಗಳು ಗೃಹಬಳಕೆಗೆ ಸೀಮಿತವಾಗಿವೆ. 19 ಕಿಲೋ ಮತ್ತು 47 ಕಿಲೋ ಸಿಲಿಂಡರ್‌ಗಳು ವಾಣಿಜ್ಯ ಬಳಕೆಗೆ ಇವೆ.

ನಗರದಲ್ಲಿ 1,804 ರೂ (14.50 ರೂ ಇಳಿಕೆ), ಮುಂಬೈ: 1,756 ರೂ (15 ರೂ ಇಳಿಕೆ), ಕೋಲ್ಕತಾ: 1,911 ರೂ (16 ರೂ ಇಳಿಕೆ), ಚೆನ್ನೈ: 1,966 ರೂ (14.50 ರೂ ಇಳಿಕೆ), ಬೆಂಗಳೂರಿನಲ್ಲಿ 14.2 ಕಿಲೋ ಗೃಹ ಬಳಕೆ ಎಲ್‌ಪಿಜಿ: 805.50 ರೂ (ಬದಲಾವಣೆ ಇಲ್ಲ), 5 ಕಿಲೋ ಗೃಹಬಳಕೆ ಎಲ್‌ಪಿಜಿ: 300.50 ರೂ (ಬದಲಾವಣೆ ಇಲ್ಲ), 19 ಕಿಲೋ ಕಮರ್ಷಿಯಲ್ ಎಲ್‌ಪಿಜಿ: 1,880.50 ರೂ (14.50 ರೂ ಇಳಿಕೆ), 47.5 ಕಿಲೋ ಕಮರ್ಷಿಯಲ್ ಎಲ್‌ಪಿಜಿ: 4,697.50 ರೂ (36.50 ರೂ ಇಳಿಕೆ)

ಜುಲೈ 1ರ ಬಳಿಕ 19 ಕಿಲೋ ಸಿಲಿಂಡರ್‌ಗಳ ಬೆಲೆ ಮೊದಲ ಬಾರಿಗೆ ಇಳಿಕೆ ಆಗಿದೆ. ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆ ಮಾರ್ಚ್ 1ರಂದು ಇಳಿಕೆ ಆಗಿತ್ತು. ಅದಾದ ಬಳಿಕ ಯಾವ ಬದಲಾವಣೆ ಕಂಡಿಲ್ಲ. ತೈಲ ಮಾರುಕಟ್ಟೆ ಕಂಪನಿಗಳು ಪ್ರತೀ ತಿಂಗಳ ಮೊದಲ ದಿನದಂದು ದರ ಪರಿಷ್ಕರಣೆ ಮಾಡುತ್ತವೆ.

ವಿಮಾನಗಳಿಗೆ ಬಳಸಲಾಗುವ ಎಟಿಎಫ್ ಅಥವಾ ಏವಿಯೇಶನ್ ಟರ್ಬೈನ್ ಫ್ಯುಯಲ್ ಅಥವಾ ಜೆಟ್ ಫ್ಯುಯೆಲ್ ಇಂಧನದ ಬೆಲೆ ಶೇ. 1.54ರಷ್ಟು ಕಡಿಮೆ ಆಗಿದೆ. ಪ್ರತೀ ಕಿಲೋ ಲೀಟರ್‌ಗೆ 1,401.37 ರೂನಷ್ಟು ಬೆಲೆ ಇಳಿಕೆ ಆಗಿದೆ. ದೆಹಲಿಯಲ್ಲಿ ಜೆಟ್ ಫ್ಯುಯೆಲ್ ಬೆಲೆ ಪ್ರತೀ ಕಿಲೋ ಲೀಟರ್‌ಗೆ 90,455.47 ರೂ ಆಗಿದೆ. ಈ ಬೆಲೆ ಇಳಿಕೆಯು ಏವಿಯೇಶನ್ ಸಂಸ್ಥೆಗಳಿಗೆ ತುಸು ನಿರಾಳ ತರುವ ಸಾಧ್ಯತೆ ಇದೆ.

## ಹೂಗುಚ್ಛ; ಸಿಹಿ ತಿನಿಸು ತರದಂತೆ ಮನವಿ

**ಬೆಂಗಳೂರು:** ಕಚೇರಿಗೆ ಶುಭಾಶಯ ಕೋರಲು ಬರುವಂತಹವರು ಹೂಗುಚ್ಛ, ಸಿಹಿ ತಿನಿಸುಗಳನ್ನು ತೆಗೆದುಕೊಂಡು ಬಾರದಂತೆ ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ. ದಯಾನಂದ್ ತಿಳಿಸಿದ್ದಾರೆ. ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಹೊಸ



ವರ್ಷದ ಶುಭಾಶಯಗಳನ್ನು ಕೋರಲು ಬರುವಂತಹ ಸಮಯದಲ್ಲಿ ಯಾವುದೇ ರೀತಿಯ ಹೂಗುಚ್ಛ, ಸಿಹಿ ತಿನಿಸುಗಳನ್ನು ತರಬೇಡಿ ಎಂದು ಸೂಚಿಸಿದ್ದಾರೆ. ಹೂಗುಚ್ಛ ಹಾಗೂ ಸಿಹಿ ತಿನಿಸಿಗಾಗಿ ಹಣ ಖರ್ಚು ಮಾಡುವ ಬಡವರಿಗೆ, ಅನಾಥಶ್ರಮಗಳಲ್ಲಿರುವ ನಿರ್ಗತಿಕರಿಗೆ ನಿಮ್ಮ ಕೈಲಾದ ಸಹಾಯ ಮಾಡಿ ಎಂದು ಹೇಳಿದ್ದಾರೆ. ಹೊಸ ವರ್ಷದ ದಿನವಾದ ಇಂದು ಖುದ್ದು ಆಯುಕ್ತರೇ ಅನಾಥಶ್ರಮದ ಮಕ್ಕಳೊಂದಿಗೆ ಕೇಕ್ ಕತ್ತರಿಸಿ ವರ್ಷಾಚರಣೆ ಮಾಡುವ ಮೂಲಕ ಉಳಿದ ಅಧಿಕಾರಿಗಳಿಗೆ ರೋಲ್ ಮಾಡೆಲ್ ಆಗಿದ್ದಾರೆ.

# ವಂಚನೆ ಆರೋಪ: ಐಶ್ವರ್ಯಾ ದಂಪತಿಗೆ ಹೈಕೋರ್ಟ್ ಜಾಮೀನು

**ಬೆಂಗಳೂರು:** ಮಾಜಿ ಸಂಸದ ಡಿ. ಕೆ. ಸುರೇಶ್ ಅವರ ತಂಗಿ ಎಂಬುದಾಗಿ ನಂಬಿಸಿ ಚಿನ್ನದಂಗಡಿ ಮಾಲಕಿಯಿಂದ ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಸಾಲ ಪಡೆದು ವಂಚನೆ ಆರೋಪ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಐಶ್ವರ್ಯಾ ಗೌಡ ಮತ್ತು ಅವರ ಪತಿ ಕೆ. ಎನ್. ಹರೀಶ್‌ಗೆ ಹೈಕೋರ್ಟ್ ಮಧ್ಯಂತರ ಜಾಮೀನು ಮಂಜೂರು ಮಾಡಿದೆ. ಅಲ್ಲದೇ, ಬಂಧಿತರನ್ನು ತಕ್ಷಣ ಕೂಡಲೇ ಬಿಡುಗಡೆ ಮಾಡುವಂತೆ ಚಂದ್ರಾಲೇಔಟ್ ಠಾಣೆ ಪೊಲೀಸರಿಗೆ ನಿರ್ದೇಶಿಸಿದೆ.

ಪ್ರಕರಣ ಸಂಬಂಧ ತಮ್ಮ ವಿರುದ್ಧ ಚಂದ್ರಾಲೇಔಟ್ ಠಾಣಾ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಐಶ್ವರ್ಯಾ ಗೌಡ ಮತ್ತು ಅವರ ಪತಿ ಕೆ. ಎನ್. ಹರೀಶ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರ ಪೀಠ ಈ ಆದೇಶ ಮಾಡಿದೆ.

ಪ್ರಕರಣದಲ್ಲಿ ಅರ್ಜಿದಾರರು ಪ್ರಕರಣ ಸಂಬಂಧ ಪೊಲೀಸರು ನೀಡಿದ್ದ ನೋಟಿಸ್‌ಗೆ ಪೂರಕವಾಗಿ ಸ್ಪಂದಿಸಿ, ಸ್ವಯಿಚ್ಛೆಯಿಂದ ಠಾಣೆಗೆ ತೆರಳಿ ತನಿಖೆಗೆ ಸಹಕರಿಸಿದ್ದರು. ಆದರೆ, ಪೊಲೀಸರು ಅರ್ಜಿದಾರರನ್ನು ಏಕಾಏಕಿಯಾಗಿ ಬಂಧಿಸಿದ್ದಾರೆ. ಅದಕ್ಕೂ ಮುನ್ನ ಪೊಲೀಸರು ಬಂಧನಕ್ಕೆ ಸಕಾರಣಗಳನ್ನು ಲಿಖಿತವಾಗಿ ಅರ್ಜಿದಾರರಿಗೆ ನೀಡಿಲ್ಲ.

ಇದು ಸುಪ್ರೀಂ ಕೋರ್ಟ್ ತೀರ್ಪಿನ ಸ್ಪಷ್ಟ ಉಲ್ಲಂಘನೆಯಾಗಿದೆ. ಅದರಂತೆ ಅರ್ಜಿದಾರರ ಬಂಧನವು ಕಾನೂನು ಬಾಹಿರವಾಗಿದೆ ಎಂದು ಅಭಿಪ್ರಾಯಪಟ್ಟ ಹೈಕೋರ್ಟ್, ಅರ್ಜಿದಾರರನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಪೊಲೀಸರಿಗೆ ಸೂಚನೆ ನೀಡಿದೆ.

ಅಲ್ಲದೆ, ಆರೋಪಿಗಳು ಪೊಲೀಸರ ತನಿಖೆಗೆ ಸೂಕ್ತವಾಗಿ ಸಹಕರಿಸಬೇಕು ಎಂದು ಷರತ್ತು ವಿಧಿಸಿರುವ ಹೈಕೋರ್ಟ್, ಅರ್ಜಿಯಲ್ಲಿ ಪ್ರತಿವಾದಿಗಳಾಗಿರುವ ಚಂದ್ರಾಲೇಔಟ್ ಠಾಣಾ



ಪೊಲೀಸರು ಮತ್ತು ದೂರುದಾರೆ ವನಿತಾ ಐತಾಳ್ ಅವರಿಗೆ ನೋಟಿಸ್ ಜಾರಿ ಮಾಡಿದೆ.

**ಪ್ರಕರಣದ ಹಿನ್ನೆಲೆ :** ಮಾಜಿ ಸಂಸದ ಡಿ. ಕೆ. ಸುರೇಶ್ ತಂಗಿ ಎಂದು ನಂಬಿಸಿ ಚಿನ್ನದಂಗಡಿ ಮಾಲಕಿಯಾದ ಪ್ರಕರಣದ ದೂರುದಾರೆ ವನಿತಾ ಐತಾಳ್ ಅವರಿಂದ ಕೋಟ್ಯಂತರ ರೂ. ಮೌಲ್ಯದ ಚಿನ್ನಾಭರಣ ಸಾಲ ಪಡೆದು ವಂಚಿಸಿದ ಆರೋಪ ಸಬಂಧ ಐಶ್ವರ್ಯಾ ಗೌಡ ಮತ್ತು ಪತಿ ಹರೀಶ್ ಅವರನ್ನು ಚಂದ್ರಾಲೇಔಟ್ ಠಾಣಾ ಪೊಲೀಸರು ಬಂಧಿಸಿದ್ದರು.

ನ್ಯಾಯಾಲಯವು ಆರೋಪಿಗಳಿಗೆ 14 ದಿನ ನ್ಯಾಯಾಂಗ ಬಂಧನಕ್ಕೆ ವಿಧಿಸಿತ್ತು. ಪ್ರಕರಣ ಸಂಬಂಧ ಹೆಚ್ಚಿನ ವಿಚಾರಣೆಗಾಗಿ ಆರೋಪಿಗಳನ್ನು ವಶಕ್ಕೆ ನೀಡುವಂತೆ ಪೊಲೀಸರು 4ನೇ ಎಸಿಎಂಎಂ ನ್ಯಾಯಾಲಯಕ್ಕೆ ಸೋಮವಾರ ಅರ್ಜಿ ಸಲ್ಲಿಸಿದ್ದರು. ಅದರ ವಿಚಾರಣೆ ನಡೆಸಿದ ನ್ಯಾಯಾಲಯವು ಇಬ್ಬರು ಆರೋಪಿಗಳನ್ನು ಜ.6ರ ವರೆಗೆ ಪೊಲೀಸ್ ಕಸ್ಟಡಿಗೆ ನೀಡಿತ್ತು. ಆರೋಪಿಗಳನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಕರೆತಂದಿದ್ದ ಪೊಲೀಸರು, ವಿಚಾರಣೆಗೆ ಒಳಪಡಿಸಿದ್ದರು.

ಈ ಮಧ್ಯೆ ಎಫ್‌ಐಆರ್ ರದ್ದು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ಐಶ್ವರ್ಯಾ ಗೌಡ ಮತ್ತು ಹರೀಶ್, ಮಧ್ಯಂತರ ಜಾಮೀನು ಮೇಲೆ ತಮ್ಮನ್ನು ಬಿಡುಗಡೆ ಮಾಡುವಂತೆ ಪೊಲೀಸರಿಗೆ ನಿರ್ದೇಶಿಸಬೇಕು ಎಂದು ಕೋರಿದ್ದರು.

ಮೊದಲ ಪುಟದಿಂದ

### ರಾಜಕೀಯ ಪ್ರೇರಿತ

ವಹಿಸಬೇಕೆಂಬ ಬೇಡಿಕೆ ಮುಂದಿರಿಸಲು ಬಿಜೆಪಿಯವರಿಗೆ ನೈತಿಕತೆ ಇಲ್ಲ ಎಂದು ತಿಳಿಸಿದರು.

**ಸಿ.ಟಿ.ರವಿ ಪ್ರಕರಣ ಸಿಐಡಿ ತನಿಖೆ:** ಎಂಎಲ್ ಸಿ ಸಿ.ಟಿರವಿಯವರು ರಾಜ್ಯಪಾಲರಿಗೆ ದೂರು ನೀಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಸಿ.ಟಿ.ರವಿಯವರ ಪ್ರಕರಣವನ್ನೂ ಸಿಐಡಿಗೆ ವಹಿಸಲಾಗಿದೆ. ಅವಾಚ್ಯ ಪದಬಳಕೆ ಆಗಿರುವ ಬಗ್ಗೆ ಎಫ್ ಎಸ್ ಎಲ್ ವರದಿ ಬರಲಿದೆ. ಮಹಿಳಾ ಸಚಿವರಿಗೆ ಅವಹೇಳನ ಮಾಡಿರುವ ಆರೋಪವಿದ್ದು, ಸಿ.ಟಿ.ರವಿಯವರ ಮೇಲೆ ದೂರು ದಾಖಲಾಗಿದೆ ಎಂದರು.

ಹೊಸ ವರ್ಷದ ಸಂದರ್ಭದಲ್ಲಿ ವಿರೋಧ ಪಕ್ಷದವರಿಗೆ ಭಗವಂತ ಸದ್ಬುದ್ಧಿಯನ್ನು ನೀಡಲೆಂದು ಪ್ರಾರ್ಥಿಸುವುದಾಗಿ ತಿಳಿಸಿದ ಮುಖ್ಯಮಂತ್ರಿಗಳು , ಪಕ್ಷದ ವರಿಷ್ಠರೊಂದಿಗೆ ಚರ್ಚಿಸಿ ಸಂಪುಟ ವಿಸ್ತರಣೆ ಬಗ್ಗೆ ಚರ್ಚಿಸಲಾಗುವುದು ಎಂದು ತಿಳಿಸಿದರು

### ಆಂಧ್ರ ಸರಕಾರಿ ನಿಯೋಗ

ಇದರ ಜೊತೆಗೆ ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಹಣಕಾಸು ಇಲಾಖೆಯ ಕಾರ್ಯದರ್ಶಿ ಸೇರಿದಂತೆ ಎಪಿಎಸ್‌ಆರ್‌ಟಿಸಿಯ ಅಧಿಕಾರಿಗಳನ್ನೊಳಗೊಂಡ 15 ಅಧಿಕಾರಿಗಳಿದ್ದಾರೆ

ಈ ಬಗ್ಗೆ ಮಾತನಾಡಿದ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಆಂಧ್ರ ಪ್ರದೇಶ ಸರ್ಕಾರದ ಸಚಿವರ ನೇತೃತ್ವದ ನಿಯೋಗ ಜ.3ಕ್ಕೆ ಭೇಟಿಯಾಗಲಿದ್ದಾರೆ. ಭೇಟಿ ವೇಳೆ ಶಕ್ತಿ ಯೋಜನೆ ಅನುಷ್ಠಾನ, ಹಣಕಾಸು ನಿರ್ವಹಣೆ, ಹೊರೆ, ನಿರ್ವಹಣೆ, ಮಾನದಂಡಗಳ ಬಗ್ಗೆ ಮಾಹಿತಿ ಪಡೆಯಲಿದ್ದಾರೆ. ಶಕ್ತಿ ಯೋಜನೆಯ ಯಶಸ್ಸು, ರಸ್ತೆ ಸಾರಿಗೆ ನಿಗಮ ತೆಗೆದುಕೊಂಡ ಕ್ರಮಗಳ ಬಗ್ಗೆ ನಿಯೋಗಕ್ಕೆ ವಿವರಿಸಲಿದ್ದೇವೆ ಎಂದು ತಿಳಿಸಿದ್ದಾರೆ.

### ಹಾಳಾಗದಂತೆ ಎಚ್ಚರ ವಹಿಸಿ

ಆದರೆ ಆತ್ಮವಿಶ್ವಾಸ ಕಳೆದುಕೊಳ್ಳದೆ ಧೈರ್ಯದಿಂದ ಸಮಸ್ಯೆಗಳನ್ನು, ಸಂದರ್ಭಗಳನ್ನು ನಿರ್ವಹಿಸಿ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ.

ಆಡಳಿತಾಂಗದಲ್ಲಿ ಐಎಎಸ್– ಐಪಿಎಸ್, ಐಆರ್‌ಎಸ್, ಐಎಫ್‌ಎಸ್ ಅಧಿಕಾರಿಗಳ ಜವಾಬ್ದಾರಿ ಹೆಚ್ಚು. ನಾವು ಕಾನೂನುಗಳನ್ನು ರಚಿಸಿ, ಜಾರಿ ಆಗುವ ದಿಕ್ಕಿನಲ್ಲಿ ನಿರಂತರ ನಿಗಾ ವಹಿಸುತ್ತೇವೆ. ಅಧಿಕಾರಿ ವರ್ಗ ಸಮಾಜಕ್ಕೆ ಪೂರಕವಾಗಿ ಕ್ರಿಯಾಶೀಲತೆಯಿಂದ ಕರ್ತವ್ಯ ನಿರ್ವಹಿಸಬೇಕು ಎಂದರು.

ಸಂವಿಧಾನ ಜಾರಿ ಸಂದರ್ಭದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಆಡಿದ ಮಾತುಗಳನ್ನು ಉಲ್ಲೇಖಿಸಿದ ಸಿಎಂ, ಸಮಾಜದ ಎಲ್ಲಾ ವರ್ಗಗಳಿಗೆ ಸಾಮಾಜಿಕ–ಆರ್ಥಿಕ ಸ್ವಾತಂತ್ರ್ಯ ಒದಗಿಸಬೇಕು. ಇಲ್ಲದಿದ್ದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥ ಬರುವುದಿಲ್ಲ ಎಂದರು.

ಭಾರತದ ಆರ್ಥಿಕತೆ ಕುಸಿತ ಕಂಡಿದ್ದಾಗ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಮನಮೋಹನ್ ಸಿಂಗ್ ಅವರು ದೇಶದ ಆರ್ಥಿಕತೆಗೆ ಹೊಸ ಚೈತನ್ಯ ನೀಡಿದರು. ದೇಶದ ಆರ್ಥಿಕ ಬೆಳವಣಿಗೆ ಆಗಿ ಇದರ ಲಾಭ ದೇಶದ ಜನರಿಗೆ ಲಭಿಸುವಂತೆ ಮಾಡಿದರು. ಸಂವಿಧಾನದ ನಿರ್ದೇಶಕ ತತ್ವಗಳಾದ ಸಮಾನತೆ, ಜಾತ್ಯತೀತತೆ, ಸಾಮಾಜಿಕ ನ್ಯಾಯದ ಮೌಲ್ಯಗಳನ್ನು ದೇಶದ ಜನರ ಮೂಲಭೂತ ಹಕ್ಕುಗಳನ್ನಾಗಿ ಮಾಡಿದರು. ಮಾಹಿತಿ ಹಕ್ಕು, ಆಹಾರದ ಹಕ್ಕು, ಶಿಕ್ಷಣದ ಹಕ್ಕುಗಳನ್ನು ಕಡ್ಡಾಯ ಮಾಡಿದರು. ಆ ಮೂಲಕ ಸಮಾನತೆಯೆಡೆಗೆ ದೇಶವನ್ನು ಮುನ್ನಡೆಸಿದರು ಎಂದು ವಿವರಿಸಿದರು. ಸಮಾನ ಅವಕಾಶಗಳು ಸಿಕ್ಕಾಗ ಸಮಾನತೆ ದಿಕ್ಕಿಗೆ ನಾವು ಸಾಗಬಹುದು ಎನ್ನುವ ಕಾರಣದಿಂದಲೇ ನಾವು ಐದು ಗ್ಯಾರಂಟಿಗಳನ್ನು ಜಾರಿ ಮಾಡಿದೆವು. ಜನರ ಕೈಯಲ್ಲಿ ಕಾಸು ಇರಬೇಕು, ಜನರ ಕೊಳ್ಳುವ ಶಕ್ತಿ ಹೆಚ್ಚಾಗಬೇಕು. ಇದಕ್ಕೆ ತಕ್ಕಂತೆ ರಾಜ್ಯದ ಜನರ ಜೇಬಲ್ಲಿ ಹಣ ಇರುವ ಗ್ಯಾರಂಟಿಗಳನ್ನು ನಾವು ಜಾರಿ ಮಾಡಿದೆವು. ಮಧ್ಯವರ್ತಿಗಳ ಹಾವಳಿ ಇಲ್ಲದಂತೆ ನೇರ ಜನರಿಗೆ ಹಣ ತಲುಪಿಸುತ್ತಿದ್ದೇವೆ. ಇದು ಇನ್ನಷ್ಟು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುವ ಜವಾಬ್ದಾರಿ ನಿಮ್ಮೆಲ್ಲರ ಮೇಲಿದೆ ಎಂದರು.

ಇಲ್ಲಿಯವರೆಗೂ 35 ಸಾವಿರ ಕೋಟಿ ರೂಪಾಯಿಗಳನ್ನು ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಖರ್ಚು ಮಾಡಿದ್ದೇವೆ. ಈಗಲಾದರೂ ನಂಜುಂಡಪ್ಪ ಅವರ ವರದಿಯಲ್ಲಿನ ಪ್ರಾದೇಶಿಕ ಅಸಮಾನತೆ ಕಡಿಮೆಯಾಗಿದೆಯಾ ಎನ್ನುವುದನ್ನು ಅಧ್ಯಯನ ನಡೆಸಿ ವರದಿ ನೀಡಿಲು ಗೋವಿಂದರಾವ್ ಅವರ ಸಮಿತಿ ರಚಿಸಲಾಗಿದೆ. ಏಕೆ ಉತ್ತರ ಕರ್ನಾಟಕದ ಅಸಮಾನತೆ ಕಡಿಮೆ ಆಗಿಲ್ಲ ಎನ್ನುವ ಬಗ್ಗೆಯೂ ಬೆಳಗಾವಿ ಅಧಿವೇಶನದಲ್ಲೂ ಚರ್ಚಿಸಿದ್ದೇವೆ. ಇದನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ನೀವೂ ಅಷ್ಟೆ ಗಂಭೀರವಾಗಿ ಪರಿಗಣಿಸಿ ಪ್ರಾದೇಶಿಕ ಅಸಮತೋಲನ ತೊಡೆದು ಹಾಕಲು ಶ್ರಮಿಸಬೇಕು ಎಂದರು.

**ಯುವ ಜನತೆ ನಮ್ಮ ಆಸ್ತಿ:** ಯುವ ಜನತೆ ನಮ್ಮ ಸಮಾಜದ ಆಸ್ತಿ. ಇವರ ಭವಿಷ್ಯ ಹಾಳಾಗದಂತೆ ಎಚ್ಚರ ವಹಿಸುವ ಸವಾಲನ್ನು ಖಡಾಖಂಡಿತವಾಗಿ ಅಧಿಕಾರಿಗಳು ಸ್ವೀಕರಿಸಬೇಕು. ಡ್ರಗ್ಸ್ ಹಾವಳಿ, ಅಪರಾಧಿಕ ಜಗತ್ತಿನ ಕಡೆಗೆ ಯುವ ಜನತೆ ಆಕರ್ಷಿತರಾಗದಂತೆ ಎಚ್ಚರ ವಹಿಸಿ. ತಂತ್ರಜ್ಞಾನ ಮತ್ತು ವಿಜ್ಞಾನದ ಪ್ರಗತಿ ಆಗುತ್ತಿದೆ. ಈ ಪ್ರಗತಿ ಅಪರಾಧಗಳಿಗೆ ಬಳಕೆ ಆಗದೆ ಯುವ ಜನರ ಭವಿಷ್ಯ ರೂಪಿಸಲು ಸಹಕಾರಿ ಆಗುವಂತೆ ಕರ್ತವ್ಯ ನಿರ್ವಹಿಸಿ ಎಂದು ಸಲಹೆ ನೀಡಿದರು.

ನೀವು ಅಧಿಕಾರಿ ವರ್ಗ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದರೆ ರಾಜ್ಯದಲ್ಲಿ ಅದ್ಭುತ ಬದಲಾವಣೆ, ಸುಧಾರಣೆಗಳನ್ನು ತರಲು ಸಾಧ್ಯವಿದೆ. ಇದಕ್ಕಾಗಿ ನಿಮ್ಮ ಕಾರ್ಯಕ್ಷಮತೆ ಬಳಕೆಯಾಗಲಿ ಎಂದರು.

ಅಧಿಕಾರಿ ವರ್ಗಕ್ಕೆ ನಮ್ಮ ಸಲಹೆಯ ಅಗತ್ಯ ಇಲ್ಲ. ನೀವು ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಂಡರೆ ಸಾಕು. ಭ್ರಷ್ಟಾಚಾರ ವ್ಯವಸ್ಥೆ ಕಡಿಮೆ ಆಗುವ ಬದಲಿಗೆ ಹೆಚ್ಚಾಗುತ್ತಿರುವುದು ದುರಂತ. ಆದ್ದರಿಂದ ನಾವೆಲ್ಲರೂ ನಮ್ಮ ಆತ್ಮಸಾಕ್ಷಿಗೆ ತಕ್ಕಂತೆ ಪ್ರಾಮಾಣಿಕವಾಗಿ ನಡೆದುಕೊಳ್ಳೋಣ ಎಂದು ಕರೆ ನೀಡಿದರು.

ನಮ್ಮ–ನಿಮ್ಮ ಉದ್ದೇಶ ಒಂದೇ. ಸಮಾಜದ ಪ್ರಗತಿ ಮತ್ತು ಆರೋಗ್ಯಕರ ಬದಲಾವಣೆ. ಇದಕ್ಕಾಗಿ ನಮ್ಮ ನಮ್ಮ ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳೋಣ ಎಂದು ಕರೆ ನೀಡಿದರು.

ಅಭಿವೃದ್ಧಿಗೆ ಹಣ ಇಲ್ಲ ಎನ್ನುವ ಸುಳ್ಳನ್ನು ಪದೇ ಪದೇ ಹರಡಿಸುತ್ತಿದ್ದಾರೆ. ಇದು ಸುಳ್ಳು ಎನ್ನುವುದು ನಿಮಗೇ ಗೊತ್ತಿದೆ. ಹಿಂದಿನ ಸರ್ಕಾರ ಬಜೆಟ್ ಒಪ್ಪಿಗೆ ಪಡೆಯದೆ ಯದ್ವಾತದ್ವಾ ಟೆಂಡರ್ ಕರೆದು ಹಾನಿ ಮಾಡಿತ್ತು. ಸುಮಾರು 39 ಸಾವಿರ ಕೋಟಿ ಬಿಲ್ ಬಾಕಿ ಉಳಿಸಿ ಹೋಗಿದ್ದರು. ಜೊತೆಗೆ ಕೇಂದ್ರ ಸರ್ಕಾರದಿಂದ ನಮಗೆ ಅನ್ಯಾಯ ಮುಂದುವರೆದಿದೆ. ಇದೆಲ್ಲವನ್ನೂ ಸರಿದೂಗಿಸಿಕೊಂಡು ಅಭಿವೃದ್ಧಿಗೂ ಹಣ ಒದಗಿಸುತ್ತಿದ್ದೇವೆ. ಆದ್ದರಿಂದ ಇಲಾಖೆಗಳಲ್ಲಿರುವ ಹಣ ಹೆಚ್ಚು ಸೋರಿಕೆ ಆಗದಂತೆ ತಡೆಯುವ ಜವಾಬ್ದಾರಿ ಮತ್ತು ಕರ್ತವ್ಯ ನಿಮ್ಮ ಮೇಲಿದೆ ಎಂದರು.

ಹಣ ಸಂಗ್ರಹಿಸುವ ಇಲಾಖೆಗಳು ಮತ್ತು ಹಣ ಖರ್ಚು ಮಾಡುವ ಇಲಾಖೆಗಳೆರಡೂ ಸಮತೂಕದಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಕರೆ ನೀಡಿದರು.

ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಅತೀಕ್ ಅಹಮದ್, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ ಸೇರಿ ಎಲ್ಲಾ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

### ಕ್ಯಾನ್ಸರ್ ಗೆದ್ದ ಚಕ್ರವರ್ತಿ

ಕೆಲ ದಿನಗಳ ಹಿಂದೆ ಶಿವಣ್ಣನಿಗೆ ಶಸ್ತ್ರಚಿಕಿತ್ಸೆ ಸಹ ನಡೆಯಿತು. ಆ ದಿನ ರಾಜ್ಯಾದ್ಯಂತ ಅಭಿಮಾನಿಗಳು ಶಿವಣ್ಣನ ಹೆಸರಲ್ಲಿ ವಿಶೇಷ ಪೂಜೆ, ಮೃತ್ಯುಂಜಯ ಹೋಮ, ಅನ್ನಸಂತರ್ಪಣೆಗಳನ್ನು ಮಾಡಿದರು. ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆದಿದೆ ಎಂದು ಆ ಬಳಿಕ ಗೀತಾ ಶಿವರಾಜ್ ಕುಮಾರ್, ನಿವೇದಿತಾ ಅವರುಗಳು ಮಾಹಿತಿ ಹಂಚಿಕೊಂಡಿದ್ದರು. ಇದೀಗ ಹೊಸ ವರ್ಷದಂದು ಸ್ವತಃ ಶಿವಣ್ಣ ಅಭಿಮಾನಿಗಳಿಗೆಂದು ವಿಡಿಯೋ ಮಾಡಿ ಹಂಚಿಕೊಂಡಿದ್ದು ತಮ್ಮ ಆರೋಗ್ಯದ ಬಗ್ಗೆ ಸ್ವತಃ ಮಾಹಿತಿ ನೀಡಿದ್ದಾರೆ.

ವಿಡಿಯೋನಲ್ಲಿ ಮೊದಲು ಮಾತನಾಡಿರುವ ಗೀತಾ ಶಿವರಾಜ್ ಕುಮಾರ್ ಅವರು, ಶಿವರಾಜ್ ಕುಮಾರ್ ಅವರ ಆರೋಗ್ಯಕ್ಕಾಗಿ ಪ್ರಾರ್ಥಿಸಿದ ಎಲ್ಲರಿಗೂ ಧನ್ಯವಾದ ಹೇಳಿದರು. ಶಿವರಾಜ್ ಕುಮಾರ್ ಅವರ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆದಿದ್ದು, ಎಲ್ಲ ವರದಿಗಳು ನೆಗೆಟಿವ್ ಬಂದಿದೆ. ಫೆತಾಲಜಿ ರಿಪೋರ್ಟ್ ಬರುವವರೆಗೆ ಸ್ವಲ್ಪ ಆತಂಕ ಇತ್ತು, ಆದರೆ ಈಗ ಆ ವರದಿಯೂ ಬಂದಿದ್ದು ಎಲ್ಲವೂ ನೆಗೆಟಿವ್ ಆಗಿವೆ. ನೀವುಗಳು ಮಾಡಿರುವ ಪ್ರಾರ್ಥನೆ ತೋರಿದ ಪ್ರೀತಿ ಮತ್ತು ಬೆಂಬಲವನ್ನು ಜೀವನ ಇರುವವರೆಗೆ ಮರೆಯುವುದಿಲ್ಲ ಎಂದು ಭಾವುಕರಾಗಿ ನುಡಿದಿದ್ದಾರೆ.

ಬಳಿಕ ಮಾತನಾಡಿದ ಶಿವಣ್ಣ, ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳನ್ನು ಕೋರಿದರು. ಬಳಿಕ ಮಾತನಾಡಿ, 'ಅನಾರೋಗ್ಯದ ನಡುವೆಯೇ ಯಾವುದೋ ಜೋಶ್‌ನಲ್ಲಿ ಶೂಟಿಂಗ್‌ನಲ್ಲಿ ಭಾಗವಹಿಸಿಬಿಟ್ಟೆ. ಎಲ್ಲರೂ ಜೊತೆಗೆ ಇದ್ದರು ಕೀಮೋ ಮಾಡಿಸುತ್ತಿರಬೇಕಾದರೆ '45' ಸಿನಿಮಾದ ಫೈಟ್ ಸೀನ್‌ನಲ್ಲಿ ಭಾಗವಹಿಸಿದ್ದೆ,

ಅದರ ಶ್ರೇಯ ರವಿವರ್ಮಗೆ ಸಲ್ಲಬೇಕು. ಆದರೆ ಶಸ್ತ್ರಚಿಕಿತ್ಸೆ ದಿನ ಹತ್ತಿರ ಬಂದಂತೆ ತುಸು ಆತಂಕ ಇತ್ತು. ಆದರೆ ಅಭಿಮಾನಿಗಳು, ಗೆಳೆಯರು, ಸಹ ನಟರು, ಬಾಲ್ಯದ ಗೆಳೆಯರು ನೀಡಿದ ಬೆಂಬಲ ಧೈರ್ಯ ತುಂಬಿತು ಇಲ್ಲಿನ ವೈದ್ಯರು, ನರ್ಸ್‌ಗಳು ಬಹಳ ಚೆನ್ನಾಗಿ ಕಾಳಜಿ ಮಾಡಿದರು' ಎಂದರು. ಹಲವರ ಹೆಸರು ಹೇಳಿ ಧನ್ಯವಾದಗಳನ್ನು ಹೇಳಿದರು. ಪತ್ನಿ ಗೀತಾ ಬಗ್ಗೆ ನೀಡಿದ ಬೆಂಬಲವನ್ನು ವಿಶೇಷವಾಗಿ ಕೊಂಡಾಡಿದ್ದಾರೆ.

ಕೆಲವರೆಲ್ಲ ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಅಂತೆಲ್ಲಾ ಅಂದುಕೊಂಡಿದ್ದಾರೆ ಅದು ಹಾಗೆ ಆಗಿಲ್ಲ. ಮೂತ್ರಕೋಶವನ್ನು ತೆಗೆದು ಹೊಸದಾಗಿ ಜೋಡಿಸಲಾಗಿದೆ ಅಷ್ಟೆ. ನಾವು ಇಷ್ಟು ದಿನ ಅದರ ಬಗ್ಗೆ ವಿವರವಾಗಿ ಹೇಳಿರಲಿಲ್ಲ, ವಿವರಗಳನ್ನು ಹೇಳಿದರೆ ಆತಂಕ ಪಡುತ್ತಾರೆ ಎಂಬ ಕಾರಣಕ್ಕೆ ಅದನ್ನು ಹೇಳಿರಲಿಲ್ಲ. ನೀವು ಇಲ್ಲಿವರೆಗೆ ನೀಡಿರುವ ಪ್ರೀತಿ, ಗೌರವಕ್ಕೆ ಸದಾ ಋಣಿ. ವೈದ್ಯರು ಹೇಳಿದ್ದಾರೆ ಮೊದಲ ಕೆಲ ತಿಂಗಳು ವಿಶ್ರಾಂತಿ ಪಡೆಯಿರಿ ಆ ನಂತರ ಬೇಕಾದರೆ ನೀವು ಮೊದಲಿನಂತೆ ಜೋಶ್‌ನಲ್ಲಿ ಮುನ್ನುಗ್ಗಿ ಎಂದಿದ್ದಾರೆ. ನಾನು ಅಷ್ಟೆ ಮೊದಲಿಗಿಂತಲೂ ಹೆಚ್ಚಿನ ಜೋಶ್‌ನಲ್ಲಿ ವಾಪಸ್ ಬರ್ತೀನಿ, ಡ್ಯಾನ್ಸ್, ಫೈಟ್ ಮೂಲಕ ನಿಮ್ಮನ್ನು ರಂಜಿಸುತ್ತೀನಿ, ನಾನು ಹೊಸ ವರ್ಷದಲ್ಲಿ ಹೊಸದಾಗಿ ಬರಲು ಕಾಯುತ್ತಿದ್ದೀನಿ' ಎಂದಿದ್ದಾರೆ ಶಿವರಾಜ್ ಕುಮಾರ್.

### ಅಹಿತಕರ ಘಟನೆ ನಡೆದಿಲ್ಲ

ಆದರೆ ನಾನೂ ಎಲ್ಲೂ ಹೋಗಿಲ್ಲ, ಮನೆಯಲ್ಲೇ ಇದ್ದೆ ಎಂದರು.

ಚಿನ್ನದಂಗಡಿ ವ್ಯಾಪಾರಿಗೆ ವಂಚನೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಐಶ್ವರ್ಯ ಗೌಡ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾತನಾಡಿ, ಡಿಕೆ ಸುರೇಶ್ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ಎಫ್ಐ ಆರ್ ಆಗಿದೆ. ಸರ್ಕಾರ ಈ ವಿಚಾರವಾಗಿ ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ. ಸಣ್ಣ ವಿಚಾರಕ್ಕೆ ಸರ್ಕಾರವನ್ನು ಎಳೆತರುವುದು ಸರಿಯಲ್ಲ ಎಂದರು.

ರಾಜ್ಯದ ಅಭಿವೃದ್ಧಿಗೆ ಹಾಗೂ ರಾಜ್ಯವನ್ನು ಸರ್ವ ಜನಾಂಗದ ಶಾಂತಿಯ ತೋಟ ಮಾಡಲು ವಿರೋಧ ಪಕ್ಷಗಳು ಸಹಕಾರ ಕೊಡಬೇಕು. ಟೀಕೆ ಮಾಡಿ, ಆದರೆ ಸಕಾರಾತ್ಮಕ ಇರಲಿ. ಸರ್ಕಾರಕ್ಕೆ ಸಲಹೆ ಸೂಚನೆ ಕೊಡಲಿ ಎಂದು ಪರಮೇಶ್ವರ್ ಹೇಳಿದರು. ರಾಜ್ಯ ರಾಜಕೀಯದ ಬೆಳವಣಿಗೆ ನನಗೆ ಏನೂ ಗೊತ್ತಿಲ್ಲ. ಪಕ್ಷ ಯಾವುದೇ ಜವಾಬ್ದಾರಿ ಕೊಟ್ಟರೂ ಯಶಸ್ವಿ ಆಗಿ ನಿಭಾಯಿಸಿದ್ದೇನೆ. ಪಕ್ಷಕ್ಕೆ ಸೇರ್ಪಡೆ ಆದ ಬಳಿಕ ಯಾವುದೇ ಜವಾಬ್ದಾರಿ ನೀಡಿದಾಗಲೂ ನಿರ್ವಹಣೆ ಮಾಡಿದ್ದೇನೆ ಎಂದು ಇದೇ ವೇಳೆ ಹೇಳಿದರು.

ಪೆಟ್ರೋಲ್ ಜಿಎಸ್‌ಟಿ ವ್ಯಾಪ್ತಿಗೆ ತರುವ ವಿಚಾರ, ಜಿಎಸ್‌ಟಿ ಗೊಂದಲ ಬಗೆಹರಿಸುವ ನಿಟ್ಟಿನಲ್ಲಿ ಸರ್ಕಾರ ಏನು ಕ್ರಮ ಕೈಗೊಳ್ಳಬೇಕು ಅದನ್ನು ಕೈಗೊಳ್ಳುತ್ತದೆ. ನಮಗೆ ಅನುಕೂಲ ಆಗುವುದಾದರೆ ತೆಗೆದುಕೊಳ್ಳುತ್ತದೆ. ನಮ್ಮ ಬಜೆಟ್‌ನಲ್ಲಿ ಲೆಕ್ಕಾಚಾರ ಮಾಡಿ ತೀರ್ಮಾನ ಮಾಡಬೇಕಾಗುತ್ತದೆ ಎಂದು ತಿಳಿಸಿದರು. ಪ್ರಿಯಾಂಕ್ ಖರ್ಗೆ ನನ್ನ ಪಾತ್ರ ಇಲ್ಲ ಅಂದಿದ್ದಾರೆ. ಈಗಾಗಲೇ ಸಿಐಡಿಗೆ ಆದೇಶ ಮಾಡಿದ್ದೇನೆ. ತನಿಖೆಯಲ್ಲಿ ಏನು ಬರುತ್ತದೆ ನೋಡೋಣ. ತನಿಖೆಯ ವರದಿ ಬಂದ ಬಳಿಕ ಗೊತ್ತಾಗಲಿದೆ ಎಂದು ತಿಳಿಸಿದರು.

### 513 ಪ್ರಕರಣ ದಾಖಲು

330 ಜನರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದರು.

ಪಾನಮತ್ತರಾಗಿ ವಾಹನ ಚಲಾಯಿಸುವವರ ವಿರುದ್ಧ ಒಂದು ವಾರಕ್ಕೂ ಮೊದಲೇ ಕಾರ್ಯಾಚರಣೆ ಚುರುಕುಗೊಳಿಸಿದ್ದ ಸಂಚಾರ ಪೊಲೀಸರು, ಕಳೆದ ವಾರ 95,179 ವಾಹನ ಚಾಲಕರನ್ನು ತಪಾಸಣೆಗೊಳಪಡಿಸಿ 1,187 ಪ್ರಕರಣ ದಾಖಲಿಸಿಕೊಂಡಿದ್ದರು.

ನಗರದಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡುವ ಹಾಗೂ ವ್ಹೀಲಿಂಗ್/ಡ್ರ್ಯಾಗ್ ರೇಸ್‌ನಲ್ಲಿ ಭಾಗಿಯಾಗುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ನಗರ ಸಂಚಾರ ವಿಭಾಗದ ಜಂಟಿ ಆಯುಕ್ತ ಎಂ. ಎನ್. ಅನುಚೇತ್ ತಿಳಿಸಿದ್ದರು

### ಪ್ರಶ್ನೆಯೇ ಇಲ್ಲ

ಪ್ರಿಯಾಂಕ್ ಖರ್ಗೆ ಟಾರ್ಗೆಟ್. ಪ್ರಿಯಾಂಕ್ ಖರ್ಗೆ ರಾಜೀನಾಮೆ ಪ್ರಶ್ನೆಯೇ ಇಲ್ಲ ಎಂದರು.

ಬಿಜೆಪಿಗರಿಗೆ ಸಾರ್ವಜನಿಕ ಹಿತಾಸಕ್ತಿ ಇದೆಯಾ? ಬಿಜೆಪಿಯಷ್ಟು ಭ್ರಷ್ಟ ಸರ್ಕಾರ ಇನ್ನೊಂದಿಲ್ಲ. ಭ್ರಷ್ಟ ಬಿಜೆಪಿ ನಮಗೆ ಪಾಠ ಮಾಡಲು ಬರೋದು ವಿಪರ್ಯಾಸ. ವಿರೋಧ ಪಕ್ಷವಾಗಿ ಬಿಜೆಪಿ ವಿಫಲವಾಗಿದೆ ಎಂದು ಶರಣ ಪ್ರಕಾಶ್ ಪಾಟೀಲ್ ಕಿಡಿಕಾರಿದರು.

### ಮೂವರು ಸಾವು

ಸಿದ್ದಪ್ಪ (45) ಮೃತ ವ್ಯಕ್ತಿ. ಮಾಗಡಿ ಹೊಸ ಪೇಟೆ ಸರ್ಕಲ್ ಬಳಿ ಘಟನೆ ನಡೆದಿದೆ. ಮಧ್ಯರಾತ್ರಿ 12.30 ರ ಸಮಯದಲ್ಲಿ ಘಟನೆ ನಡೆದಿದೆ. ದ್ವಿಚಕ್ರ ಸವಾರ ಮೋಹನ್ ಎಂಬಾತನಿಗೆ ಗಾಯಗಳಾಗಿದ್ದು, ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಾಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ತುರ್ತು ಪರಿಸ್ಥಿತಿಯಿದೆ

ಈಶ್ವರಪ್ಪ ಪ್ರಕರಣದಲ್ಲಿ ಯಾವ ರೀತಿಯಲ್ಲಿ ಹೇಳಿಕೆ ಕೊಟ್ರಿ, ಈಗ ಸಚಿನ್ ಪಾಂಚಾಳ್ ಸಾವಿಗೆ ನೀವು ಏಕೆ ಹೊಣೆ ಆಗುವುದಿಲ್ಲ ಎಂದು ಪ್ರಶ್ನಿಸಿದರು.ಕಲಬುರಗಿ ರಿಪಬ್ಲಿಕ್, ಬೆಳಗಾವಿ ರಿಪಬ್ಲಿಕ್ ಹಾಗೂ ಕನಕಪುರ ರಿಪಬ್ಲಿಕ್ ಇದೆ. 2025 ರಲ್ಲಿ ಕಾನೂನು ಎಲ್ಲರಿಗೂ ಸಮಾನವಾಗಲಿ, ಸಂವಿಧಾನ ಎಲ್ಲರಿಗೂ ಅನ್ವಯಿಸಲಿ. ಬನಾನ ರಿಪಬ್ಲಿಕ್ ಆಗದಿರಲಿ ಎಂದು ಆಶಯ ವ್ಯಕ್ತಪಡಿಸುತ್ತೇನೆ ಎಂದರು.

ಸದನದ ಒಳಗಡೆ ನಡೆದ ಘಟನೆಗೆ ಏನೇ ನಿರ್ಧಾರ ಕೈಗೊಳ್ಳಲು ವಿಧಾನಸಭೆ ಸಭಾಧ್ಯಕ್ಷರು ಹಾಗೂ ಪರಿಷತ್ ಸಭಾಪತಿಗೆ ಅಧಿಕಾರ ಇರುವುದು. ಏನೇ ನಿರ್ಣಯ ಆದರೂ ಸಭಾಪತಿಗಳು ತೆಗೆದುಕೊಳ್ಳಬೇಕು. ಆದರೆ ನನ್ನನ್ನು ಹತ್ಯೆ ಮಾಡಲು ಪ್ರಯತ್ನ ನಡೆಸಿದ್ದರು. ಪೊಲೀಸರು ಸುಪಾರಿ ಕಿಲ್ಲರ್ ತರ ವರ್ತಿಸಿದ್ದಾರೆ. ನಾನು ಕೊಟ್ಟ ದೂರು ಈವರೆಗೆ ಎಫ್‌ಐಆರ್ ಆಗಿಲ್ಲ ಎಂದು ದೂರಿದರು.

ನಾನು ಕೊಟ್ಟ ದೂರು ಪೊಲೀಸರ ಗಮನಕ್ಕೆ ಬಂದಿಲ್ಲವಂತೆ. ಕಾನೂನು ಲಕ್ಷ್ಮೀ ಹೆಬ್ಬಾಳ್ಕರ್‌ಗೆ ಒಂದು ನನಗೆ ಒಂದು ಎಂದು ಅಂದುಕೊಂಡಿರಲಿಲ್ಲ. ಆದರೆ ಕಾಂಗ್ರೆಸ್ ಸರ್ಕಾರದಲ್ಲಿ ಹೀಗಾಗಿದೆ. ಡಿಜಿಪಿ ಐಜಿ ಯನ್ನು ಭೇಟಿಯಾದಾಗ ನಾನು ದೂರು ಕೊಟ್ಟ ವಿಚಾರದ ಬಗ್ಗೆ ಮಾಹಿತಿ ಇಲ್ಲ ಎಂದರು ಎಂದಿದ್ದಾರೆ

### ಭರ್ಜರಿ ಅಬಕಾರಿ ಆದಾಯ

ಕೆಎಸ್‌ಬಿಸಿಎಲ್‌ನಿಂದ ಮದ್ಯ ಖರೀದಿ ಮಾಡಿದ್ದಾರೆ. ಐಎಂಎಲ್ 4,83,715 ಲಕ್ಷ ಬಾಕ್ಸ್ ಮಾರಾಟದಿಂದ 250.25 ಕೋಟಿ ಆದಾಯ ಸಂಗ್ರಹವಾಗಿದೆ. ಬಿಯರ್– 2,92,339 ಲಕ್ಷ ಬಾಕ್ಸ್ ಮಾರಾಟದಿಂದ 57,75 ಕೋಟಿ ಆದಾಯ ಸಂಗ್ರಹವಾಗಿದೆ. ಒಟ್ಟು 7,76,042 ಲಕ್ಷ ಬಾಕ್ಸ್ ಮದ್ಯ ಮಾರಾಟದಿಂದ ಒಟ್ಟು 308 ಕೋಟಿ ರುಪಾಯಿ ಆದಾಯ ಸಂಗ್ರಹವಾಗಿದೆ ಎನ್ನಲಾಗಿದೆ.

# ಚಾಮರಾಜನಗರ ಜಿಲ್ಲೆ ಬಂದ್ ಯಶಸ್ವಿ

**ಚಾಮರಾಜನಗರ:** ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಕುರಿತು ರಾಜ್ಯ ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ್ದ ಹೇಳಿಕೆ ಖಂಡಿಸಿ ದಲಿತ ಹಾಗೂ ಪ್ರಗತಿಪರ ಸಂಘಟನೆಗಳು ಕರೆ ನೀಡಿದ್ದ ಚಾಮರಾಜನಗರ ಬಂದ್ ಯಶಸ್ವಿಯಾಯಿತು.

ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲೂ ಬೆಳಗ್ಗೆಯಿಂದಲೇ ಪ್ರತಿಭಟನೆ ಆರಂಭಿಸಿದ ವಿವಿಧ ಸಂಘಟನೆಗಳ ಪದಾಧಿಕಾರಿಗಳು ನಗರದ ಪಚ್ಚಪ್ಪ ವೃತ್ತದಲ್ಲಿ ಜಮಾಯಿಸಿ ಕೆಲಕಾಲ ಪ್ರತಿಭಟನೆ ನಡೆಸಿದರು.

ಅಂಬೇಡ್ಕರ್ ಪ್ರತಿಮೆ, ಭಾವಚಿತ್ರ ಇರಿಸಿ ಧರಣಿ ನಡೆಸಿದರು. ಬೈಕ್ ರ್‍ಯಾಲಿ, ಪಾದಯಾತ್ರೆ, ರಸ್ತೆ ತಡೆ ನಡೆಸಿ ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಪಚ್ಚಪ್ಪ ಸರ್ಕಲ್‌ನಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಡಿವಿಯೇಷನ್ ರಸ್ತೆ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಗುಂಡ್ಲುಪೇಟೆ ಸರ್ಕಲ್, ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ಸರ್ಕಲ್, ಡಿವಿಯೇಷನ್ ರಸ್ತೆ ಮೂಲಕ ಪಚ್ಚಪ್ಪ ಸರ್ಕಲ್‌ನಲ್ಲಿ ಅಂತ್ಯಗೊಂಡಿತು.




ಪಚ್ಚಪ್ಪ ಸರ್ಕಲ್‌ನಲ್ಲಿ ಮೈಸೂರಿನ ಉರಿಲಿಂಗಿಪೆದ್ದಿ ಮಠದ ಜ್ಞಾನ ಪ್ರಕಾಶ್ ಸ್ವಾಮೀಜಿ, ಮುಖಂಡ ವೆಂಕಟರಮಣಸ್ವಾಮಿ(ಪಾಪು) ಸೇರಿದಂತೆ ಇತರೆ ಹಲವು ಸಂಘಟನೆಗಳ ಮುಖಂಡರು, ಪದಾಧಿಕಾರಿಗಳು ಧರಣಿಯಲ್ಲಿ ಪಾಲ್ಗೊಂಡರು. ಪಚ್ಚಪ್ಪ ಸರ್ಕಲ್‌ನಲ್ಲಿ ವಾಹನಗಳ ಸಂಚಾರವನ್ನು ಬಂದ್ ಮಾಡಲಾಗಿತ್ತು.

**ಮುಚ್ಚಿದ್ದ ಅಂಗಡಿ ಮುಂಗಟ್ಟುಗಳು:** ಸರ್ಕಾರಿ ಕಚೇರಿಗಳು,

ಆಸ್ಪತ್ರೆ, ಮೆಡಿಕಲ್ ಶಾಪ್, ಹಾಲಿನ ಡೇರಿ, ಬ್ಯಾಂಕ್‌ಗಳನ್ನು ಹೊರತುಪಡಿಸಿ ಉಳಿದಂತೆ ದಿನಸಿ ಅಂಗಡಿಗಳು, ಬಟ್ಟೆ ಅಂಗಡಿಗಳು ಸೇರಿದಂತೆ ಇತರೆ ಅಂಗಡಿಗಳು ಬಂದ್ ಆಗಿದ್ದವು. ಇದರಿಂದಾಗಿ ಸದಾ ಜನರಿಂದ ಗಿಜುಗುಡುತ್ತಿದ್ದ ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸತ್ತಿ ರಸ್ತೆ, ಬಿ.ರಾಚಯ್ಯ ಜೋಡಿರಸ್ತೆ ಬಿಕೋ ಎನ್ನುತ್ತಿದ್ದವು.

ಕೆಎಸ್‌ಆರ್‌ಟಿಸಿ ಬಸ್, ಖಾಸಗಿ ಬಸ್ ಸಂಪೂರ್ಣ ಬಂದ್ ಆಗಿತ್ತು. ಉಳಿದಂತೆ ಆಟೋ ಸಂಚಾರ ವಿರಳವಾಗಿತ್ತು.

## ತಾತ್ಕಾಲಿಕವಾಗಿ ಸಾರಿಗೆ ಬಸ್ ಸಂಚಾರ ಸ್ಥಗಿತ



ಚಾಮರಾಜನಗರ ಬಂದ್ ಹಿನ್ನೆಲೆಯಲ್ಲಿ ಖಾಸಗಿ ಬಸ್‌ಗಳ ಸಂಚಾರ ಸಂಪೂರ್ಣವಾಗಿ ಸ್ಥಗಿತವಾಗಿತ್ತು. ಆದರೆ, ಬೆಳಗ್ಗೆಯಿಂದ ಮೈಸೂರು, ಕೊಳ್ಳೇಗಾಲ, ತಮಿಳುನಾಡು ಕಡೆ ಕೆಎಸ್‌ಆರ್‌ಟಿಸಿ ಬಸ್‌ಗಳ ಓಡಾಟ ಇತ್ತು. ಇದರಿಂದ ರೊಚ್ಚಿಗೆದ್ದ ಪ್ರತಿಭಟನಾಕಾರರು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ತೆರಳಿಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರಲ್ಲದೇ ಬಸ್‌ಗಳ ಸಂಚಾರ ಸ್ಥಗಿತಗೊಳಿಸುವಂತೆ ಪ್ರತಿಭಟನೆ ನಡೆಸಿದರು. ಇದರಿಂದಾಗಿ ಕೆಎಸ್‌ಆರ್‌ಟಿಸಿ ವಿಭಾಗದ ಅಧಿಕಾರಿಗಳು ತಾತ್ಕಾಲಿಕವಾಗಿ ಬಸ್‌ಗಳ ಸಂಚಾರವನ್ನು ಸ್ಥಗಿತಗೊಳಿಸಿದರು. ಇದರಿಂದ ಕೆಎಸ್‌ಆರ್‌ಟಿಸಿ ಬಸ್‌ಗಳು ಬಸ್ ನಿಲ್ದಾಣದಲ್ಲಿಯೇ ನಿಂತವು. ಜನರು, ವಿದ್ಯಾರ್ಥಿಗಳ ಪರದಾಟ ಚಾಮರಾಜನಗರ ಬಂದ್ ಹಿನ್ನೆಲೆಯಲ್ಲಿ ಸಾರಿಗೆ ಬಸ್ ಹಾಗೂ ಖಾಸಗಿ ಬಸ್‌ಗಳ ಸಂಚಾರ ಸ್ಥಗಿತಗೊಂಡಿತ್ತು. ಆದರೆ, ಶಾಲಾ, ಕಾಲೇಜುಗಳು ಎಂದಿನಂತೆ ಇದ್ದಿದ್ದರಿಂದ ವಿದ್ಯಾರ್ಥಿಗಳು ಶಾಲಾ, ಕಾಲೇಜುಗಳಿಗೆ ಆಗಮಿಸಿದ್ದರು. ಅಲ್ಲದೇ ಬೆಳಗ್ಗೆ ಬಸ್‌ಗಳು ಓಡಾಡುತ್ತಿದ್ದ ಪರಿಣಾಮ ಜನರು ಕೂಡ ಚಾಮರಾಜನಗರಕ್ಕೆ ಆಗಮಿಸಿದ್ದರು. ಆದರೆ, ಆ ನಂತರ ಬಸ್‌ಗಳ ಸಂಚಾರ ಸ್ಥಗಿತಗೊಂಡಿದ್ದರಿಂದ ಚಾಮರಾಜನಗರಕ್ಕೆ ಬಂದಿದ್ದ ಹಾಗೂ ಬೇರೆ ಕಡೆ ತೆರಳಬೇಕಿದ್ದ ಜನರು ಹಾಗೂ ವಿದ್ಯಾರ್ಥಿಗಳು ಬಸ್‌ಗಳಿಲ್ಲದೇ ಪರದಾಡಿದರು. ಕೆಲವರು ಆಟೋಗಳ ಮೂಲಕ ತಮ್ಮ ಊರುಗಳಿಗೆ ತೆರಳಿದ ದೃಶ್ಯ ಕಂಡುಬಂದಿತು. ಬಸ್ ನಿಲ್ದಾಣದಲ್ಲಿಯೇ ಜನರು ಬಸ್‌ಗಾಗಿ ಕಾದು ಕುಳಿತಿದರು.

# 12 ನಿರ್ದೇಶಕರ ಅವಿರೋಧ ಆಯ್ಕೆ

**ಶಿಡ್ಲಘಟ್ಟ:** ತಾಲ್ಲೂಕಿನ ಆನೆಮಡಗು ವ್ಯವಸಾಯ ಸೇವಾ ಸಹಕಾರ ಸಂಘದ ಆಡಳಿತ ಮಂಡಳಿಯ ಎಲ್ಲಾ 12 ನಿರ್ದೇಶಕರು ಅವಿರೋಧವಾಗಿಆಯ್ಕೆಯಾಗಿದ್ದಾರೆ.

ಸಂಘದ ಆಡಳಿತ ಮಂಡಳಿಗೆ 2025 ರ ಜನವರಿ 5 ರಂದು ಚುನಾವಣೆ ನಿಗದಿಯಾಗಿತ್ತು. ಡಿ.30ರಂದು ನಾಮಪತ್ರ ಹಿಂಪಡೆಯಲು ಕಡೆಯ ದಿನವಾಗಿತ್ತು, 12 ನಿರ್ದೇಶಕರ ಸ್ಥಾನಗಳಿಗೆ ಕೇವಲ 12 ನಾಮಪತ್ರಗಳು ಮಾತ್ರ ಸಲ್ಲಿಕೆಯಾಗಿದ್ದರಿಂದ ಚುನಾವಣಾಧಿಕಾರಿ ಎಂ.ಮಂಜುನಾಥ್ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸದಾಶಿವರೆಡ್ಡಿ ಸಹಾಯಕರಾಗಿ ಕಾರ್ಯ ನಿರ್ವಹಿಸಿದರು.

ಆಯ್ಕೆಯಾದವರು ಆನೆಮಡುಗು ಠೇವಣಿ ದಾರರ ಕ್ಷೇತ್ರದಿಂದ ಎ.ಎಂ.ಜಯರಾಮರೆಡ್ಡಿ, ದೊಡ್ಡತೇಕಹಳ್ಳಿ, ಸಾಲಗಾರರಲ್ಲದ ಕ್ಷೇತ್ರದಿಂದ ಟಿ.ಎನ್. ಆಂಜನೇಯರೆಡ್ಡಿ, ಕನ್ನಪ್ಪನಹಳ್ಳಿ ಹಿಂದುಳಿದ ವರ್ಗ ಬಿ ಮೀಸಲು ಕ್ಷೇತ್ರದಿಂದ ಕೆ.ಬೈರಾರೆಡ್ಡಿ, ಬಿನ್ನಮಂಗಲ ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರದಿಂದ ನರಸಿಂಹಪ್ಪ,ದೊಡ್ಡತೇಹಳ್ಳಿ ಸಾಮಾನ್ಯ ಕ್ಷೇತ್ರದಿಂದ ನರಸಿಂಹಪ್ಪ, ಚಿಕ್ಕತೇಕಹಳ್ಳಿ ಸಾಮಾನ್ಯ ಕ್ಷೇತ್ರದಿಂದ ಸಿ.ವೆಂಕಟೇಶಪ್ಪ, ಕನ್ನಪನಹಳ್ಳಿ ಮಹಿಳಾ ಮೀಸಲು ಕ್ಷೇತ್ರದಿಂದ ಸುಶೀಲಮ್ಮ, ಆನೆಮಡುಗು ಸಾಮಾನ್ಯ ಕ್ಷೇತ್ರದಿಂದ ಎ.ಎನ್.ಲಕ್ಷ್ಮೀನಾರಾಯಣ, ಆನೆಮಡುಗು ಹಿಂದುಳಿದ ವರ್ಗ ಎ ಮೀಸಲು ಕ್ಷೇತ್ರದಿಂದ ಕೆ.ನರಸಿಂಹಮೂರ್ತಿ, ಆನೆಮಡುಗು ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಲಕ್ಷ್ಮಯ್ಯ, ಪಲಿಚೇರ್ಲು ಸಾಮಾನ್ಯ ಕ್ಷೇತ್ರದಿಂದ ಪಿ.ವಿ.ಸೋಮಶೇಖರರೆಡ್ಡಿ, ಆನೆಮಡುಗು ಮಹಿಳಾ ಮೀಸಲು ಕ್ಷೇತ್ರದಿಂದ ಕೆ.ಚಂದ್ರಕಲಾ ಆಯ್ಕೆಯಾಗಿದ್ದಾರೆ.

**ಕಳೆದ 48 ವರ್ಷಗಳ (20/05/1977) ಹಿಂದೆ ಆರಂಭಗೊಂಡ ಆನೆಮಡುಗು ವ್ಯವಸಾಯ ಸೇವಾ ಸಹಕಾರ ಸಂಘದ ಆಡಳಿತ ಮಂಡಳಿಗೆ ಇದುವರೆಗೂ ಚುನಾವಣೆಯೇ ನಡೆದಿಲ್ಲ. ಪ್ರತಿ ಐದು ವರ್ಷಕ್ಕೊಮ್ಮೆ ಸಂಘದ ನಿರ್ದೇಶಕರನ್ನು ಅವಿರೋಧವಾಗಿಯೇ ಆಯ್ಕೆ ಮಾಡುವುದು ಇಲ್ಲಿನ ವಿಶೇಷ. ಮಾಜಿ ಶಾಸಕ ದಿವಂಗತ ಎಸ್.ಮುನಿಶಾಮಪ್ಪ ಅವರು ಸಂಘದ ಪ್ರಪ್ರಥಮ ಅಧ್ಯಕ್ಷರಾಗಿದ್ದರು,ಅವರ ಆಶಯದಂತೆ 48 ವರ್ಷ ಕಳೆದರೂ ಸಂಘದ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆಸಲು ಯಾವುದೇ ಪಕ್ಷದ ಮುಖಂಡರು ಮುಂದಾಗದೇ ಅವರಿಗೆ ಗೌರವ ಸಲ್ಲಿಸುತ್ತಿರುವುದು ಸಾರ್ವಜನಿಕ ವಲಯದಲ್ಲಿ ಶ್ಲಾಘನೀಯ ಮಾತುಗಳು ಹರಿದಾಡುತ್ತಿವೆ.**



# ಕೃಷಿಕ ಸಮಾಜದ ಅಧ್ಯಕ್ಷರಾಗಿ ಗೌಡಹಳ್ಳಿ ರವಿ ಆಯ್ಕೆ

**ಯಳಂದೂರು:** ತಾಲೂಕು ಕೃಷಿಕ ಸಮಾಜದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಗೌಡಹಳ್ಳಿ ರವಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೃಷಿಕ ಸಮಾಜದ ತಾಲೂಕು ಮಟ್ಟದಕಾರ್ಯಕಾರಿ ಸಮಿತಿಗೆ ಈಗಾಗಲೇ 15 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದರು. ಇದರಲ್ಲಿ ಸೋಮವಾರ ಅಧ್ಯಕ್ಷ ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಖಜಾಂಚಿ ಮತ್ತು ಜಿಲ್ಲಾ ಪ್ರತಿನಿಧಿಗಳ ಆಯ್ಕೆಗೆ ಚುನಾವಣೆ ನಿಗಧಿಯಾಗಿತ್ತು.

ಕೃಷಿ ಇಲಾಖೆಯ ಕಚೇರಿಯಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಎಲ್ಲಾ ಸ್ಥಾನಗಳಿಗೂ ಒಬ್ಬೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿಯಾಗಿದ್ದ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಎನ್.ಜಿ. ಅಮೃತೇಶ್ವರ್ ಅಧ್ಯಕ್ಷರಾಗಿ ಗೌಡಹಳ್ಳಿ ರವಿ, ಉಪಾಧ್ಯಕ್ಷರಾಗಿ ಮಲ್ಲಿಕಾರ್ಜುನಸ್ವಾಮಿ, ಪ್ರಧಾನ ಕಾರ್ಯದರ್ಶಿಯಾಗಿ ವೈ.ವಿ. ಉಮಾಶಂಕರ್, ಪ್ರಧಾನ ಕಾರ್ಯದರ್ಶಿಯಾಗಿ ರಾಜು ಹಾಗೂ ಜಿಲ್ಲಾ ಪ್ರತಿನಿಧಿಯಾಗಿ ಮದ್ದೂರು ಶ್ರೀಕಂಠಮೂರ್ತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಅಧಿಕೃತವಾಗಿ ಘೋಷಣೆ ಮಾಡಿದರು.



ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಗೌಡಹಳ್ಳಿ ರವಿ ಮಾತನಾಡಿ, ಕೃಷಿಕ ಸಮಾಜದ ಎಲ್ಲಾ ಪದಾಧಿಕಾರಿಗಳನ್ನು ಈ ಬಾರಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಇದಕ್ಕೆ ಕಾರಣರಾದ ಎಲ್ಲಾ ಪದಾಧಿಕಾರಿಗಳಿಗೆ ಹಾಗೂ ಸದಸ್ಯರಿಗೆ ಹಾಗೂ ಕ್ಷೇತ್ರದ ಶಾಸಕರಾದ ಎ.ಆರ್. ಕೃಷ್ಣಮೂರ್ತಿರವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾಲೂಕಿನ ಕೃಷಿಕರು, ರೈತರ ಪರವಾಗಿ ನಾನು ಪ್ರಾಮಾಣಿಕವಾಗಿ ಕೆಲಸವನ್ನು ಮಾಡುತ್ತೇನೆ. ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ನಿಷ್ಠೆಯಿಂದ ಕೆಲಸವನ್ನು ಮಾಡುತ್ತೇನೆ. ಎಲ್ಲಾ ರೈತರ ಪರವಾಗಿ ನಾನು ಅವರ ಸಮಸ್ಯೆಗಳಿಗೆ ಧ್ವನಿಯಾಗಿ ನಿಲ್ಲುವ ಜೊತೆಗೆ ಎಲ್ಲಾ ನಿರ್ದೇಶಕರ ಸಹಕಾರ, ಸಹಯೋಗದೊಂದಿಗೆ ಉತ್ತಮವಾಗಿ ಕೆಲಸ ನಿರ್ವಹಿಸಲು ಪ್ರಯತ್ನಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಕೃಷಿಕ ಸಮಾಜದ ನಿರ್ದೇಶಕರಾದ ಬಿ.ಪಿ. ನಾಗೇಂದ್ರಸ್ವಾಮಿ, ಬಸವಣ್ಣ, ಎಂ.ಪಿ. ಪ್ರಭುಸ್ವಾಮಿ, ಕೆ. ಶಾಂತಮೂರ್ತಿ, ಆರ್. ಸಿದ್ಧರಾಜು,ಎಂ. ಪ್ರಸನ್ನ, ನಟರಾಜು, ಎಂ. ರಾಜೇಂದ್ರಮೂರ್ತಿ, ಎ.ಬಿ. ಜಯಶಂಕರ್, ಆರ್. ಗೋವಿಂದನಾಯಕ್ ಕೃಷಿ ಅಧಿಕಾರಿ ವೆಂಕಟರಂಗಶೆಟ್ಟಿ, ಮುಖಂಡರಾದ ಕಿನಕಹಳ್ಳಿ ಪ್ರಭುಪ್ರಸಾದ್, ಪುಟ್ಟಸುಬ್ಬಪ್ಪ, ರಾಜಣ್ಣ, ಮಂಜು, ಗೌಡಹಳ್ಳಿ ಶಂಭುಲಿಂಗಪ್ಪ, ಗೌಡಹಳ್ಳಿಮನು, ಸಂತೆಮರಹಳ್ಳಿ ಮಾದಪ್ಪ, ಕೊಮರಾನಪುರ ಪುಟ್ಟರಾಜು ಸೇರಿದಂತೆ ಅನೇಕರು ಇದ್ದರು.

# 'ವರ್ತೂರ್ ಸಂತೋಷ್ ಹೇಳಿಕೆ ಖಂಡನೀಯ'

**ಮಾಲೂರು:** ಇತಿಹಾಸ ಪ್ರಸಿದ್ಧ ತೋರ್ನನಹಳ್ಳಿ ಗ್ರಾಮನ ಸಫಲಾಂಭ ಮತ್ತು ಪ್ರಸನ್ನ ಭೀಮೇಶ್ವರ ಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಅರ್ಚಕರ ಶಾಸ್ತ್ರದಂತೆ ಮುಜರಾಯಿ ಇಲಾಖೆ ಹಾಗೂ ತಾಲೂಕು ಆಡಳಿತ ಜಾತ್ರೆ ದಿನಾಂಕವನ್ನು ನಿಗದಿ ಪಡಿಸಿದ್ದು, ಪ್ರಸಕ್ತ ವರ್ಷ ಜನವರಿ 11 ರಿಂದ 20 ರವರೆಗೆ ನಡೆಯಲಿದೆ ಆದರೆ ವರ್ತೂರ್ ಸಂತೋಷ್ ಎಂಬವರು ಜನವರಿ 8 ರಿಂದ ಜಾತ್ರೆ ಪ್ರಾರಂಭವಾಗಿ ಬೇಗ ಮುಗಿಸೋಣ ಎಂದು ಹೇಳಿಕೆ ನೀಡಿರುವುದು ಖಂಡನೀಯವಾದದು ಎಂದು ಕರ್ನಾಟಕ ಜಾನುವಾರುಗಳ ಸಾಕಾಣಿಕೆದಾರರ ಒಕ್ಕೂಟದ ತಾಲೂಕು ಅಧ್ಯಕ್ಷ ನೀಲಕಂಠ ಅಗ್ರಹಾರ ಶಾಮಣ್ಣ ಆರೋಪಿಸಿದ್ದಾರೆ.

ತೊರ್ನಹಳ್ಳಿ ಗ್ರಾಮದ ಶ್ರೀ ಸಫಲಾಂಬ ಮತ್ತು ಶ್ರೀ ಪ್ರಸನ್ನ ಭೀಮೇಶ್ವರ ರಾಸುಗಳ ಜಾತ್ರಾ ಮಹೋತ್ಸವಕ್ಕೆ ಸುಮಾರು 300 ರಿಂದ 400 ವರ್ಷಗಳ ಇತಿಹಾಸವಿದ್ದು ಈ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಕಿಲಾರಿ ತಳಿಯ ಎತ್ತುಗಳನ್ನು ಸಾಕಾಣಿಕೆ ಮಾಡುತ್ತಿದ್ದರು ಅದೇ ರೀತಿ ಜಾತ್ರೆಗೆ ಕಿಲಾರಿ ಎತ್ತುಗಳೆ ಜಾತ್ರೆಗೆ ಆಗಮಿಸುತ್ತಿದ್ದವು ಆದರೆ ಇತ್ತೀಚಿನ ದಿನಗಳಲ್ಲಿ ಕಿಲಾರಿ ಜಾತಿಯ ತಳಿಯ ಎತ್ತುಗಳು ಕಡಿಮೆಯಾಗಿದ್ದು ಜಾತ್ರೆಯಲ್ಲಿ ಕೆಲವರು ವ್ಯವಸಾಯಕ್ಕೆ ಎತ್ತುಗಳನ್ನು ಬಳಸದೆ ಶೋಕಿಗಾಗಿ ಹಳ್ಳಿಕಾರ್ ಎತ್ತುಗಳನ್ನು ಸಾಕಾಣಿಕೆ ಮಾಡುತ್ತಿದ್ದಾರೆ ಇದು ಒಳ್ಳೆಯ ಬೆಳವಣಿಗೆಯಲ್ಲ ಕಿಲಾರಿ ಎತ್ತುಗಳು ನಮ್ಮ ರಾಜ್ಯದ ಹಿಂದಿನ ತಳಿಯ ಎತ್ತುಗಳು ಆಗಿದ್ದು ಆ ಜಾತಿಯ ಎತ್ತುಗಳ ಸಂತತಿಯನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ತೋರ್ನಹಳ್ಳಿ ಜಾತ್ರೆಯು ತಾಲೂಕು ಆಡಳಿತ ಹಾಗೂ ಮುಜರಾಯಿ ಇಲಾಖೆ ಅಧಿಕಾರಿಗಳು ಅರ್ಚಕರ ಶಾಸ್ತ್ರದ ಅನ್ವಯ ದಿನಾಂಕವನ್ನು ನಿಗದಿಪಡಿಸುತ್ತಾರೆ ಆದರೆ ವರ್ತೂರ್ ಸಂತೋಷ ಎಂಬುವವರು ಅವರೇ ಜಾತ್ರೆಯ ದಿನಾಂಕವನ್ನು ನಿಗದಿಪಡಿಸಿರುವುದು ಸರಿಯಲ್ಲ ಹಸುಗಳನ್ನು ಕರೆತರುವ ರೈತರು ಮುಜರಾಯಿ ಇಲಾಖೆ ನಿಗದಿಪಡಿಸಿದ ದಿನಾಂಕಕ್ಕೂ ಮೊದಲೇ ಜಾತ್ರೆಗೆ ಆಗಮಿಸಿದರೆ ಮೂಲಭೂತ ಸೌಲತ್ತುಗಳನ್ನು ಒದಗಿಸಲು ಕಷ್ಟಕರವಾಗುತ್ತದೆ. ಆದ್ದರಿಂದ ಜನವರಿ 11ಕ್ಕೆ ಜಾತ್ರೆಗೆ ತಮ್ಮ ರಾಸುಗಳನ್ನು ಕರೆತಂದು 20ರವರೆಗೆ ಜಾತ್ರೆಯಲ್ಲಿ ಉಳಿದುಕೊಳ್ಳಲು ಮುಜರಾಯಿ ಹಾಗೂ ತಾಲೂಕು ಆಡಳಿತ ವಿವಿಧ ರೀತಿಯ ಮೂಲಭೂತ ಸವಲತ್ತುಗಳನ್ನು ಒದಗಿಸಲು ಅನುಕೂಲವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಕರ್ನಾಟಕ ಜಾನುವಾರುಗಳ ಸಾಕಾಣಿಕೆದಾರರ ಒಕ್ಕೂಟದ ಸದಸ್ಯರಾದ ಮಂಜುನಾಥ್, ರವಿ , ಮಾದೇಶ್, ಮುನಿಯಪ್ಪ ಹಾಜರಿದ್ದರು

# ಚಳಿ ಲೆಕ್ಕಿಸದೆ ಜನರ ಸಮಸ್ಯೆ ಆಲಿಸಿದ ಶಾಸಕ ಪ್ರದೀಪ್ ಈಶ್ವರ್

**ಚಿಕ್ಕಬಳ್ಳಾಪುರ:** ಶಾಸಕ ಪ್ರದೀಪ್ ಈಶ್ವರ್ ಕ್ಷೇತ್ರದಾದ್ಯಂತ ವಿವಿಧ ಗ್ರಾಮಗಳಿಗೆ "ನಮ್ಮೂರಿಗೆ ನಮ್ಮ ಶಾಸಕ' ಕಾರ್ಯಕ್ರಮದಡಿ ಭೇಟಿ ನೀಡಿ ಜನರ ಸಮಸ್ಯೆಗಳನ್ನು ಆಲಿಸುತ್ತಿದ್ದು, ಇಂದು ಬೆಳ್ಳಂಬೆಳಗ್ಗೆ ಚಳಿಯನ್ನು ಲೆಕ್ಕಿಸದೆ ರೇಣುಮಾಕಲಹಳಿ ,ಉಪ್ಪಗೊಟ್ಟಹಳ್ಳಿ ಗ್ರಾಮಗಳಲ್ಲಿ ಅಧಿಕಾರಿಗಳ ಜೊತೆ ಸಂಚರಿಸಿ ಜನಸಾಮಾನ್ಯರ ಜೊತೆ ಸಾಮಾನ್ಯರಂತೆ ಬೆರೆತು ಅವರ ಕಷ್ಟ ಸುಖ ಮತ್ತು ಸಮಸ್ಯೆಗಳನ್ನು ಕೇಳಿ ಪರಿಹಾರ ನೀಡುವ ಭರವಸೆ ನೀಡಿದರು. ರಸ್ತೆ ಸಂಪರ್ಕ, ಜಾಗದ ಒತ್ತುವರಿ ತೆರವು, ಪಿಂಚಣಿ ವ್ಯವಸ್ಥೆ, ಬಸ್ ವ್ಯವಸ್ಥೆ, ಚರಂಡಿ ನಿರ್ಮಾಣ,ನೈರ್ಮಲ್ಯ ಹಾಗೂ ಆರೋಗ್ಯ ಸಮಸ್ಯೆಗಳು ಒಳಗೊಂಡಂತೆ ಹಲವಾರು ಸಮಸ್ಯೆಗಳನ್ನು ಜನರುಶಾಸಕರ ಬಳಿ ಹೇಳಿಕೊಂಡರು. ಇದೇ ವೇಳೆ ಅಲ್ಲಿ ನೆರೆದಿದ್ದ ಅಧಿಕಾರಿಗಳನ್ನು ಆದಷ್ಟು ಬೇಗ ಜನರಿಗೆ ಸ್ಪಂದಿಸುವುದಾಗಿ ಶಾಸಕರು ತಿಳಿಸಿದರು. ಸುದ್ದಿಗಾರ ರೊಂದಿಗೆ ಮಾತನಾಡಿದಶಾಸಕ ಪ್ರದೀಪ್ ಈಶ್ವರ್, ಗ್ರಾಮಗಳ ಅಭಿವೃದ್ಧಿಗೆ ಬೇಕಾಗಿರುವ ಅನುದಾನ ಬಿಡುಗಡೆಗೆ ಖುದ್ದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ರವರ ಗಮನಕ್ಕೆ ತಂದಿದ್ದು ಅವರು ಅನುದಾನ ಬಿಡುಗಡೆ ಮಾಡುತ್ತಿದ್ದುಅವರು ನನ್ನ ಮೇಲೆ ಇಟ್ಟಿರುವ ಪ್ರೀತಿಗೆ ಅಭಾರಿಯಾಗಿರುತ್ತೇನೆ. ಸಿ.ಟಿ.ರವಿ ಬಗ್ಗೆ ಮಾತನಾಡಿದ ಅವರು ಒಂದು ಕಡೆ ಸಂಸ್ಕೃತಿ ನಮಗೆ ಇರೊದು ಅಂತ ಬಿಜೆಪಿಗರು ದೊಡ್ಡ ಬಿಲ್ಡಪ್ ಕೂಡ್ತಾರೆ, ಈಗ ಬಿಜೆಪಿಯ ಪರಿಷತ್ ಸದಸ್ಯ ಸಿ.ಟಿ.ರವಿ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕ ವಿರುದ್ಧ ಅವಾಚ್ಯ ಪದ ಬಳಕೆ ಮಾಡಿದ್ದಾರೆ ಇದು ಸರಿಯಲ್ಲ ಸಿ.ಟಿ.ರವಿಗೆ ಶಿಕ್ಷೆಯಾಗಬೇಕು. ಪೋಲಿಸರ ಮೇಲೆ ಆರೋಪ ಮಾಡುವುದು ಸರಿಯಲ್ಲ ನಿಮ್ಮ ಜೀವಕ್ಕೆ ನಾನು ಗ್ಯಾರಂಟಿ ಆತಂಕಕ್ಕೆ ಒಳಗಾಗ ಬೇಡಿ,ಹಿಂದೆ ನನಗೂ ಕೂಡ ಇದೇ ರೀತಿ ಚದಲಾಪುರ ಬಳಿ ಸುತ್ತಾಡಿಸಿ ಠಾಣೆಗೆ ಕರೆದುಕೊಂಡುಹೋಗಿದ್ದರು. ಎಲ್ಲರಿಗೂ ಹೊಸವರ್ಷದ ಶು ಭಾಶಯಗಳನ್ನುಸಲ್ಲಿಸುತ್ತಿದ್ದೇನೆ ಎಂದರು.ಈ ಸಂಧರ್ಭದಲ್ಲಿ ತಹಶೀಲ್ದಾರ್ ಅನಿಲ್,ಇಓ ಮಂಜುನಾಥ್, ಪೆರೆಸಂದ್ರರಮೇಶ್, ನಾಗಭೂಷಣ್, ಪಿಡಿಓ ಮದ್ದಾರೆಡ್ಡಿ ಎಸ್.ಪಿ.ಶ್ರೀನಿವಾಸ್, ಚೇತನ್, ಅರವಿಂದ್, ರಾಮಸ್ವಾಮಿ, ಶಂಕರ ಮತ್ತು ಇತರರು ಉಪಸ್ಥಿತರಿದ್ದರು.



# ವಸತಿ ಮತ್ತು ಭೂಮಿ ವಂಚಿತರಿಂದ ಅಹೋರಾತ್ರಿ ಧರಣೆಯ ಎಚ್ಚರಿಕೆ


**ಕೊರಟಗೆರೆ:** ಸರ್ಕಾರದ ಸುತ್ತೋಲೆ ಹಾಗೂ ನ್ಯಾಯಾಲಯದಆದೇಶದಂತೆತಾಲ್ಲೂಕಿನ ವ್ಯಾಪ್ತಿಗೆ ಒಳ ಪಡುವ ಭೂಮಿ ವಸತಿ ಸಮಸ್ಯೆಗಳನ್ನು ವಿಳಂಬ ಮಾಡದೇತುರ್ತಾಗಿ ಬಗೆಹರಿಸಿಕೊಡಬೇಕೆಂದು ಒತ್ತಾಯಿಸಿ ಜಿಲ್ಲಾ ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿಸಂಚಾಲಕ ಹಂದ್ರಾಳು ನಾಗಭೂಷಣ್‌ಸೋಮವಾರ ಪಟ್ಟಣದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ತಹಶೀಲ್ದಾರ್ ಕೆ. ಮಂಜುನಾಥ್‌ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಪಟ್ಟಣದಸರ್ಕಾರಿ ಬಸ್ ನಿಲ್ದಾಣದಲ್ಲಿ ಸಮಾವೇಶಗೊಂಡಕಾರ್ಯಕರ್ತರು ಪಟ್ಟಣದ ಮುಖ್ಯರಸ್ತೆಯಲ್ಲಿ ಪ್ರತಿಭಟನಾ ಮೆರವಣಿಗೆ ಮೂಲಕ ತಾಲ್ಲೂಕುಕಚೇರಿಗೆ ತೆರಳಿ ಧರಣಿ ಕುಳಿತು ಸಾಂಕೇತಿಕ ಪ್ರತಿಭಟನೆ ನಡೆಸಿ ವಸತಿ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿದರು.

ಭೂಮಿ ಮತ್ತು ವಸತಿ ವಂಚಿತರ ಹಕ್ಕು ಹೋರಾಟ ಸಮಿತಿತುಮಕೂರುಜಿಲ್ಲಾ ಸಂಚಾಲಕ ಹಂದ್ರಾಳು ನಾಗಭೂಷಣ್ ಮಾತನಾಡಿಕೊರಟಗೆರೆ ತಾಲ್ಲೂಕಿನಲ್ಲಿಈವರೆಗೆ ವಸತಿ ಸಮಸ್ಯೆ ಬಗೆ ಹರಿಸುವಲ್ಲಿಜನಪ್ರತಿನಿದಿಗಳು ಹಾಗೂ ಅಧಿಕಾರಿಗಳು ಯಾವುದೇರೀತಿಕ್ರಮ ವಹಿಸುತ್ತಿಲ್ಲ. ವಸತಿ ಹೀನರನ್ನು ವಸತಿರಹಿತರಾಗೆ ಉಳಿಸುವ ಕೆಲಸ ಆಗುತ್ತಿದೆ. ಸಾಗುವಳಿ ಹಕ್ಕು ಪತ್ರ ನೀಡುವುದು ಸೇರಿದಂತೆ ವಸತಿರಹಿತರಿಗೆ ವಸತಿಯೋಜನೆ ಮೂಲಕ ವಸತಿಕಲ್ಪಿಸುವ ಕೆಲಸ ತೀವ್ರ ವಿಳಂಬವಾಗುತ್ತಿದೆ.ಸಂಬಂಧ ಪಟ್ಟವರುಕೂಡಲೇಇದನ್ನುಕೈಗೆತ್ತಿಕೊಂಡು ಫೆಬ್ರವರಿ ತಿಂಗಳ ಒಳಗಾಗಿ ಸ್ಥಳದಲ್ಲೆ ಸಮಸ್ಯೆ ಬಗೆ ಹರಿಸದೇ ಹೋದರೆ ಮಾರ್ಚ್15ರ ನಂತರಜಿಲ್ಲಾಧಿಕಾರಿಕಚೇರಿಎದುರು ಅಹೋ ರಾತ್ರಿಧರಣಿ ನಡೆಸುವುದಾಗಿ ಸಂಚಾಲಕ ಹಂದ್ರಾಳು ನಾಗಭೂಷಣ್ ಎಚ್ಚರಿಸಿದರು.

ಮನವಿ ಪತ್ರ ಸ್ವೀಕರಿಸಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದತಾಲ್ಲೂಕು ದಂಡಾದಿಕಾರಿಗಳಾದ ಕೆ ಮಂಜುನಾಥ್ ಮಾತನಾಡಿತಾಲ್ಲೂಕುಕಂದಾಯ ಇಲಾಖೆ ಸಭೆಗಳಲ್ಲಿ ತೆಗೆದುಕೊಂಡ ತೀರ್ಮಾನದಂತೆತಾಲ್ಲೂಕು ಆಡಳಿತದ ಪರವಾಗಿ ಪಂಚಾಯತ್‌ರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆ, ಸಮಾಜಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ವಿವಿಧ ಹಂತದಲ್ಲಿ ನಡೆದ ಸಭೆಗಳಲ್ಲಿ ಕ್ರಮಕೈಗೊಂಡಂತೆ ಈಗಾಗಲೇ ನೀಲಗೊಂಡನಹಳ್ಳಿ ಸರ್ವೆ ನಂ.27ರ ಆಶ್ರಯಜಮೀನು, ಹೊಳವನಹಳ್ಳಿ ಹೋಬಳಿ ದುಗ್ಗೇನಹಳ್ಳಿ ಬಳಿ ನೀಡಿರುವ ನಿವೇಶನದಅಭಿವೃದ್ಧಿ ಬಗ್ಗೆ, ಕಂದಾಯ, ಅರಣ್ಯ, ಸರ್ವೆ ಇಲಾಖೆ ಸಹಯೋಗದೊಂದಿಗೆ ವಿವಿದೆಡೆಗಳಲ್ಲಿ ಸರ್ವೆಕಾರ್ಯ ಮುಗಿಸಲಾಗಿದೆ. ಶೀಘ್ರವಾಗಿ ಆದ್ಯತೆ ಮೇರೆಗೆ ವಸತಿ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆಎಂದರು,

ಈ ಸಂಧರ್ಭದಲ್ಲಿಹೋರಾಟಗಾರರಾದಮಲ್ಲಿಕಾರ್ಜುನಯ್ಯ, ವೆಂಕಟೇಶ್, ಅರಳಾಪುರ ರಮೇಶ್, ಹಿರೇಹಳ್ಳಿ ಪಾಷಾ, ಶ್ರೀಧರ್, ಮಾರಣ್ಣ, ರತ್ನಮ್ಮ, ಜಬೀನ್‌ತಾಜ್, ಸಲ್ಮಾ, ಅರುಣ್‌ಕುಮಾರ್, ಪ್ರಶಾಂತ್, ಗಣೇಶ ಮೂರ್ತಿ, ಜಗದೀಶ್ ನಾಯ್ಕ್, ತಿಮ್ಮರಾಜು ಇತರರು ಇದ್ದರು.



ಜಿಲ್ಲಾಢಳಿತ ಸೇರಿದಂತೆತಾಲ್ಲೂಕು ಆಡಳಿತ ತಾಲ್ಲೂಕು ಪಂಚಾಯತಿಗ್ರಾಮ ಪಂಚಾಯತಿಗಳಿಗೆ ಈಗಾಗಲೇ ಸಾಕಷ್ಟು ಭಾರಿ ಮನವಿ ಪತ್ರಗಳನ್ನು ನೀಡಿದ್ದರು ಸಹ ತಾ.ಪಂ ಇಓ ರವರುಯಾವಕೆಲಸ ಮಾಡುತ್ತಿದ್ದಾರೆ , ತಾಲ್ಲೂಕಿನಾದ್ಯಂತ ಮುಗ್ದ ಜನರನ್ನು ಪ್ರತಿನಿತ್ಯಅವರ ಕೆಲಸ ಕಾರ್ಯಗಳನನು ಮಾಡದೇ ವಿಳಂಭ ಮಾಡಿಅವರನ್ನು ಕಛೇರಿಗಳಿಗೆ ಅಲೆಸುತ್ತಿದ್ದಾರೆ. ಪ್ರತಿಭಟನೆಯಲ್ಲಿ ತಿಳಿಸಿದಂತೆ ಇನ್ನೆರಡು ತಿಂಗಳಲ್ಲಿ ಇವರ ಕೆಲಸಗಳನ್ನು ಕಾನೂನಾತ್ಮಕವಾಗಿ ನೆರವೇಸಿದಿದ್ದಲ್ಲಿ ಜಿಲ್ಲಾಡಳಿತದ ಮುಂದೆಅಹೋರಾತ್ರಿದರಣಿ ನಡೆಸಲಾಗುವುದು.

**ಮಲ್ಲಿಕಾರ್ಜುನಯ್ಯ** । ಹಿರಿಯ ಹೋರಾಟಗಾರ
ಭೂಮಿ ಮತ್ತು ವಸತಿ ವಂಚಿತರ ಹೋರಾಟ ಸಮಿತಿ

ಈ ಮುಂಚೆ ನಾವು ತೀತಾಕೆರೆಯಲ್ಲಿ ವಾಸವಿದ್ದೇವು, ಅಧಿಕಾರಿಗಳು ಅಲ್ಲಿಂದ ನಮ್ಮ ಕುಟುಂಬಗಳನ್ನು ಹುಲಿಕುಂಟೆಗ್ರಾಮಕ್ಕೆತಂದು ಬಿಟ್ಟಿದ್ದಾರೆ, ನಿವೇಶನ ನೀಡಿ, ಕುಡಿಯೋಕೆ ನೀರು ನೀಡಿದ್ದಾರೆ, ಇಲ್ಲಿ ನಮಗೆ ರಕ್ಷಣೆಇಲ್ಲದಂತೆಆಗಿದೆ . ಸಂಜೆಯಾದರೆ ಕಾಡುಪ್ರಾಣಿಗಳಾದ ಕರಡಿ ಚಿರತೆಗಳು ಗುಡಿಸಲು ಬಳಿ ಬರುತ್ತವೆ. ನಮಗೆ ಸೂರಿಳದ ಕಾರಣ ಮಳೆ ಬಂದರೆಗುಡಿಸಲಿನಲ್ಲಿ ಮಳೆನೀರು ನಿಂತುಕೊಳ್ಳುತ್ತವೆ. ಸುತ್ತಲು ಬೆಟ್ಟಗುಡ್ಡಇದೆದಯವಿಟ್ಟು ನಮಗೆ ಮನೆ ನಿರ್ಮಿಸಿಲು ಅವಕಾಶ ನೀಡಿಇಲ್ಲವಾದರೆ ನಮ್ಮಂತಹ ಬಡಕುಟುಂಬಗಳನ್ನು ಸಾಯಿಸಿಬಿಡಿ, ನೀವು ಅಧಿಕಾರಿಗಳು ಮನೆ ಮೇಲೆ ಮನೆ ಕಟ್ಟಿಕೊಂಡು ಎಸಿ ಮನೆಯಲ್ಲಿ ವಾಸವಿರಿ. ನಮ್ಮ ಕಷ್ಟಗಳನ್ನು ನೀವೇನು ಗಬಹರಿಸುವುದಿಲ್ಲ ಎಂದರು.

**ಯರ್ರಮ್ಮ** । ಮನನೊಂದ ವೃದ್ಧೆ ಹುಲಿಕುಂಟೆ

# ಜಾತ್ರಾ ಮಹೋತ್ಸವ: ಸಕಲ ಸಿದ್ಧತೆಗಳನ್ನು ಕೈಗೊಳ್ಳಲು ಸಲಹೆ

**ಮಾಲೂರು:** ಜನವರಿ 11 ರಿಂದ 20 ರವರೆಗೆ ಇತಿಹಾಸ ಪ್ರಸಿದ್ಧ ಶ್ರೀ ಭೀಮೇಶ್ವರ ಸ್ವಾಮಿ, ಸಪಲಾಂಭ ದೇವಿಯ ರಾಸುಗಳ ಜಾತ್ರಾ ಮಹೋತ್ಸವ ನಡೆಯಲಿದ್ದು ಮುಜರಾಯಿ ಇಲಾಖೆ ಗ್ರಾಮ ಪಂಚಾಯಿತಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಜಾತ್ರಾ ಮಹೋತ್ಸವ ಯಶಸ್ವಿಗೆ ಸಕಲ ಸಿದ್ಧತೆಗಳನ್ನು ಕೈಗೊಳ್ಳುವಂತೆ ಶಾಸಕ ಕೆ.ವೈ.ನಂಜೇಗೌಡ ಹೇಳಿದ್ದಾರೆ.



ತೊರ್ನಹಳ್ಳಿ ಗ್ರಾಮದ ಶ್ರೀ ಭೀಮೇಶ್ವರ ಸ್ವಾಮಿ, ಸಪಲಾಂಭ ದೇವಿಯ ದೇವಾಲಯದ ಆವರಣದಲ್ಲಿ ಜಾತ್ರಾ ಮಹೋತ್ಸವ ಅಂಗವಾಗಿ ತಾಲೂಕು ಆಡಳಿತ ಹಾಗೂ ಮುಜರಾಯಿ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿ ವರ್ಷದಂತೆ ಈ ವರ್ಷವೂ ಸಹ ಇತಿಹಾಸ ಪ್ರಸಿದ್ಧ ತೊರ್ನಹಳ್ಳಿ ಗ್ರಾಮದ ಸಪಲಾಂಭ ದೇವಿಯ ದೇವಾಲಯದ ಆವರಣದಲ್ಲಿ ರಾಸುಗಳ ಜಾತ್ರಾ ಮಹೋತ್ಸವ ನಡೆಯುತ್ತದೆ. ಪಕ್ಷಾತೀತವಾಗಿ ಈ ಭಾಗದ ಸ್ಥಳೀಯ ಮುಖಂಡರು ಜಾತ್ರೆ ಯಶಸ್ವಿಗೆ ಸಹಕಾರ ನೀಡಬೇಕು, ಇತಿಹಾಸ ಪ್ರಸಿದ್ಧ ಜಾತ್ರಾ ಮಹೋತ್ಸವಕ್ಕೆ ರಾಜ್ಯ ಸೇರಿದಂತೆ ಇತರೆ ರಾಜ್ಯಗಳ ಮೂಲೆ ಮೂಲೆಗಳಿಂದ ರಾಸುಗಳು ರೈತರು ವ್ಯಾಪಾರಸ್ಥರು ಜಾತ್ರೆಗೆ ಆಗಮಿಸಲಿದ್ದು, ಜಾತ್ರೆಗೆ ಆಗಮಿಸುವ ರಾಸುಗಳಿಗೆ ಹಾಗೂ ರೈತರಿಗೆ ಮೂಲಭೂತ ಸೌಲತ್ತುಗಳನ್ನು ಒದಗಿಸುವುದು ನಮ್ಮ ಜವಾಬ್ದಾರಿಯಾಗಿದೆ. ಅದರಂತೆ ಮೂಲಭೂತ ಸೌಲತ್ತುಗಳು ಸೇರಿದಂತೆ ಸಕಲ ಸಿದ್ಧತೆಗಳನ್ನು ಒದಗಿಸಲು ಅಧಿಕಾರಿಗಳು ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದರು.

ಮುಜರಾಯಿ ಇಲಾಖೆ ದೇವಾಲಯದ ವತಿಯಿಂದ ದೇವಾಲಯಕ್ಕೆ ದೀಪಾಲಂಕಾರ ಬಣ್ಣ ಬಳಿಯುವುದು, ಜಾತ್ರಾ ಆವರಣ ಸ್ವಚ್ಛತೆ ಸೇರಿದಂತೆ ಹರಾಜು ಪ್ರಕ್ರಿಯೆ ನಡೆಸಲು ಕ್ರಮ ವಹಿಸುವಂತೆ ಹೇಳಿದ ಅವರು ಜಾತ್ರಾ ಮಹೋತ್ಸವದಲ್ಲಿ ಯಾವುದೇ ಗೊಂದಲಗಳು ಅಹಿತಕರ ಘಟನೆಗಳು ಸಂಭವಿಸದಂತೆ ಮಾಲೂರು ಪೊಲೀಸ್ ಠಾಣೆಯ ಅಧಿಕಾರಿಗಳು ಹೊರ ಪೊಲೀಸ್ ಠಾಣೆ ತೆರೆದು ಕಾರ್ಯನಿರ್ವಹಿಸುವಂತೆ ಹೇಳಿದರು.

ಜಾತ್ರೆಗೆ ಆಗಮಿಸುವ ರೈತರು ಹಾಗೂ ಸಾರ್ವಜನಿಕರಿಗೆ ಯಾವುದೇ ರೀತಿಯ ಅನಾರೋಗ್ಯದ ಸಮಸ್ಯೆ ಬಾರದಂತೆ ಆರೋಗ್ಯ ಇಲಾಖೆಯ ಆರೋಗ್ಯ ಅಧಿಕಾರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರ ತೆರೆದು ಇಬ್ಬರು ವೈದ್ಯರು ರಾತ್ರಿಯಾಗಲು ಪಾಳೆಯದಂತೆ ಕೆಲಸ ನಿರ್ವಹಿಸುವಲು ಸೂಚಿಸುವಂತೆ ಹೇಳಿದರು.

ರಾಸುಗಳಿಗೆ ಕುಡಿಯುವ ನೀರು ಟ್ಯಾಂಕರ್ ಮೂಲಕ ಒದಗಿಸಲು ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ, ಬೆಸ್ಕಾಂ ಇಲಾಖೆಯ ಅಧಿಕಾರಿಗಳು ವಿದ್ಯುತ್ ಸಮಸ್ಯೆ ಬಾರದಂತೆ ಮುನ್ನೆಚ್ಚರಿಕೆ ವಹಿಸಿ ಕಾರ್ಯನಿರ್ವಹಿಸಬೇಕು ಎಂದರು.

ಜಾತ್ರೆಯಲ್ಲಿ ಮದ್ಯ ಮಾರಾಟ ಆಗದಂತೆ ಅಬಕಾರಿ ಇಲಾಖೆ ನಿಗಾ ವಹಿಸಬೇಕು, ಕೆಎಸ್ಆರ್‌ಟಿಸಿ ಮಾಲೂರು ಘಟಕದ ಅಧಿಕಾರಿಗಳು ಪಟ್ಟಣ ಸೇರಿದಂತೆ ವಿವಿಧ ಭಾಗಗಳಿಂದ ಜಾತ್ರೆಗೆ ಆಗಮಿಸುವ ಸಾರ್ವಜನಿಕರಿಗೆ ಬಸ್ ವ್ಯವಸ್ಥೆ ಕಲ್ಪಿಸಬೇಕು ಎಂದರು. ಪಶು ಇಲಾಖೆಯವರು ರಾಸುಗಳಿಗೆ ರೋಗರುಜಿನಗಳು ಬಾರದಂತೆ ಪಶು ವೈದ್ಯ ಆಸ್ಪತ್ರೆ ತೆರೆದು ರಾತ್ರಿ–ಹಗಲು ವೈದ್ಯರು ಹಾಜರಿದ್ದು ಪಶುಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಹೇಳಿದರು.

ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಜಾತ್ರೆಗೆ ಸಂಪರ್ಕಿಸುವ ರಸ್ತೆಗಳಿಗೆ ಪ್ಯಾಚ್ ವರ್ಕ್ ಮಾಡುವಂತೆ ಹೇಳಿದರು. ಕೃಷಿ ತೋಟಗಾರಿಕೆ ರೇಷ್ಮೆ ಎಪಿಎಂಸಿ ಇಲಾಖೆ ಅಧಿಕಾರಿಗಳು ಅಂಗಡಿ ಮಳಿಗೆಗಳನ್ನು ತೆರೆದು ಇಲಾಖೆಯ ಯೋಜನೆಗಳು ಹಾಗೂ ಸವಲತ್ತುಗಳ ಬಗ್ಗೆ ಪ್ರಚಾರ ಪಡಿಸಬೇಕು. ಅಲ್ಲದೆ ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಗಳಾದ 5 ಗ್ಯಾರಂಟಿ ಯೋಜನೆಗಳ ಪ್ರಚಾರಪಡಿಸುವ ಅಂಗಡಿ ಮಳಿಗೆಗಳನ್ನು ತೆರಿಯುವಂತೆ ಸೂಚಿಸಿದರು.

ಜಾತ್ರೆಗೆ ಆಗಮಿಸುವ ಉತ್ತಮ ರಾಸುಗಳಿಗೆ ಬಹುಮಾನಗಳನ್ನು ವಿತರಿಸಲು ಪಶು ಇಲಾಖೆಯು ಪಾರದರ್ಶಕವಾಗಿ ಆಯ್ಕೆ ಮಾಡಬೇಕು ಜನವರಿ 16ರಂದು ತಾಲೂಕು ಆಡಳಿತ ಹಾಗೂ ಮುಜರಾಯಿ ಇಲಾಖೆ ವತಿಯಿಂದ ಉತ್ತಮ ರಾಸುಗಳಿಗೆ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಲಿದ್ದು, ಚಾಂಪಿಯನ್ ಬಹುಮಾನಗಳನ್ನು ಮೊದಲ ಬಹುಮಾನ 5 ಗ್ರಾಂ ಚಿನ್ನ, ಎರಡನೇ ಬಹುಮಾನ 3 ಗ್ರಾಂ ಚಿನ್ನಕ್ಕೆ ಸಮನಾದ ಬೆಳ್ಳಿ, ಮೂರನೇ ಬಹುಮಾನ ಎರಡು ಗ್ರಾಂ ಚಿನ್ನಕ್ಕೆ ಸಮ ತೂಕ ಬೆಳ್ಳಿ, ಬಹುಮಾನಗಳನ್ನು ವೈಯಕ್ತಿಕವಾಗಿ ನೀಡಲಾಗುವುದು ಇನ್ನುಳಿದ ಬಹುಮಾನಗಳನ್ನು ಎಪಿಎಂಸಿ ಮುಜರಾಯಿ ಇಲಾಖೆ ವತಿಯಿಂದ ನೀಡಲಾಗುತ್ತಿದೆ. ಜನವರಿ 11 ರಿಂದ 20 ರವರೆಗೆ ನಡೆಯಲಿರುವ ಜಾತ್ರಾ ಮಹೋತ್ಸವದಲ್ಲಿ ರಾಸುಗಳಿಗೆ ರೈತರಿಗೆ ಹಾಗೂ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಮುಜರಾಯಿ ಇಲಾಖೆ ಗ್ರಾಮ ಪಂಚಾಯಿತಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಕಾರ್ಯನಿರ್ವಹಿಸುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ ರಮೇಶ್, ತಾ.ಪಂ ಇಓ ವಿ.ಕೃಷ್ಣಪ್ಪ, ಮುಜರಾಯಿ ಇಲಾಖೆಯ ಇಓ ಸೆಲ್ವಮಣಿ, ಮುಖಂಡರಾದ ಎಸ್ ಕೆ ವೆಂಕಟೇಶ್‌ಗೌಡ್ರು, ನಿವೃತ್ತ ಇಂಜಿನಿಯರ್ ರಾಮಯ್ಯ, ಕೆ.ಮುನಿಸ್ವಾಮಿ, ಗೇರುಪುರ ಆಂಜಿನಪ್ಪ.ಕೆ, ಗ್ರಾ.ಪಂ.ಸದಸ್ಯರಾದ ಮುನಿಯಪ್ಪ, ವೆಂಕಟರಮಣಪ್ಪ, ನಾಗರಾಜ್, ತಿಮ್ಮರಾಯಪ್ಪ, ಗೋಪಿನಾಥ್, ಲೋಕೇಶ್, ಅರ್ಚಕ ಮುನಿಯಪ್ಪ, ವಿವಿಧ ಇಲಾಖೆಯ ಆರೋಗ್ಯ ಇಲಾಖೆಯ ರಮೇಶ್ ಬಾಬು, ಸಿಡಿಪಿಓ ಬೈರೆಗೌಡ, ಪಶು ಇಲಾಖೆಯ ವೀಣಾ, ತೋಟಗಾರಿಕೆ ಇಲಾಖೆಯ ದಿವ್ಯ, ಅಬಕಾರಿ ಇಲಾಖೆಯ ಶಶಿಕಲಾ, ಕುಡಿಯುವ ನೀರು ನೈರ್ಮಲ್ಯ ವಿಭಾಗದ ಜಬಿವುಲ್ಲಾ, ಇಂಜಿನಿಯರಿಂಗ್ ಉಪ ವಿಭಾಗದ ವಿಶ್ವನಾಥ್, ಲೋಕೋಪಯೋಗಿ ಇಲಾಖೆಯ ರಾಜು, ಬೆಸ್ಕಾಂ ಎಇಇ ಆನ್ಸರ್ ಪಾಷ, ಡಾ.ವಿನುತ, ಪಿಡಿಓ ಚಂಗಲರಾಯಗೌಡ, ಇನ್ನಿತರರು ಹಾಜರಿದ್ದರು.




# ‘ರೈತರ ಮತ್ತು ಸಾರ್ವಜನಿಕರು ಸಮೃದ್ಧಿಯಿಂದ ಬಾಳಲಿ’



**ಮುಳಬಾಗಿಲು:** ತಾಲೂಕಿನಲ್ಲಿ 2025ರ ಹೊಸ ವರ್ಷದಲ್ಲಿ ನಾಡಿನ ಸಮಸ್ತ ಜನತೆಗೆ ಶುಭವಾಗಲಿ ರೈತಾಪಿ ವರ್ಗದವರಿಗೆ ಒಳ್ಳೆಯ ಮಳೆ ಮತ್ತು ಬೆಳೆಯಾಗಲಿ ರೈತರ ಮತ್ತು ಸಾರ್ವಜನಿಕರು ಸಮೃದ್ಧಿಯಿಂದ ಬಾಳಲಿ ಎಂದು ಹೊಸ ವರ್ಷದ ಅಂಗವಾಗಿ ತಾಲೂಕಿನ ಜನತೆಗೆ ಶಾಸಕರಾದ ಸಮೃದ್ಧಿ ವಿ.ಮಂಜುನಾಥ್ ಶುಭ ಹಾರೈಸಿದರು.

ನಗರದ ಹೊರವಲಯದ ಶಾಸಕರ ತೋಟದ ಮನೆಯಲ್ಲಿ ಹಮ್ಮಿಕೊಂಡಿದ್ದ ಮುಖಂಡರ ಸಭೆ ಹಾಗೂ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶಾಸಕರು ಈ ವರ್ಷ 35 ಸಾವಿರ ಜನ ಓಂ ಶಕ್ತಿ ಮಾಲಾದಾರಿಯನ್ನು ಧರಿಸಿದ್ದು ಮಾಲಾಧಾರಿಗಳಿಗೆ ಓಂ ಶಕ್ತಿ ದರ್ಶನ ಮಾಡಲು ಓಂ ಶಕ್ತಿ ತಾಯಂದಿರಿಗೆ ನಾನು ಕೊಟ್ಟ ಮಾತಿನಂತೆ ಉಚಿತ ಬಸ್ ವ್ಯವಸ್ಥೆ ಮಾಡಿದ್ದು, ಯಾವುದೇ ಅವಗಡ ಸಂಭವಿಸಿದಂತೆ ಎಚ್ಚರವಾಗಿ ಓಂ ಶಕ್ತಿ ದರ್ಶನವನ್ನು ಪಡೆದು ನಿಮ್ಮ ಪ್ರಯಾಣ ಸುಖಕರವಾಗಲಿ ಎಂದು ಹಾರೈಸಿದರು. ಓಂ ಶಕ್ತಿ ಮಾಲಾಧಾರಿಗಳು ಯಾವುದೇ ಕಾರಣಕ್ಕೂ ಸಮುದ್ರದಲ್ಲಿ ಈಜಲು ಹೋಗಬಾರದು ಎಂದು ಅಲೆಗಳು ಹೆಚ್ಚು ಬರುವ ಸಂಭವ ಇದೆ ಎಂದು ಮಾಲಾದಾರಿಗಳಿಗೆ ಮನವಿ ಮಾಡಿದರು.

ಮುಂದಿನ ದಿನಗಳಲ್ಲಿ ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆ ಬರಲಿದ್ದು ನಮ್ಮ ಜೆಡಿಎಸ್ ಪಕ್ಷದ ಮೂಲಕ ಜನರನ್ನು ಸಂಘಟನೆ ಮಾಡುತ್ತಾ ನಮ್ಮ ಜೆಡಿಎಸ್ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವಲ್ಲಿ ನಾನು ಮತ್ತು ನಮ್ಮ ನಾಯಕರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ ಎಂದು ಜೆಡಿಎಸ್ ಕಾರ್ಯಕರ್ತರಿಗೆ ಮುಖಂಡರಿಗೆ ಭರವಸೆ ನೀಡಿದರು.

ಜೆಡಿಎಸ್ ಪಕ್ಷದ ಮುಖಂಡರು ಮತ್ತು ನಾಯಕರು ತಮ್ಮ ತಮ್ಮ ಪಂಚಾಯಿತಿಗಳಲ್ಲಿ ಹಾಗೂ ಗ್ರಾಮಗಳಲ್ಲಿ ನೀವೇ ಜವಾಬ್ದಾರಿ ವಹಿಸಿ ಓಂ ಶಕ್ತಿ ಮಾಲಾಧಾರಿಗಳಿಗೆ ಬಸ್ಸುಗಳನ್ನು ವ್ಯವಸ್ಥೆ ಮಾಡಿ ಅವರ ಸುಖಕರ ಪ್ರಯಣಕ್ಕೆ ಅನುಕೂಲ ಮಾಡಿ ಕೆಲಸ ಮಾಡಬೇಕೆಂದು ಜೆಡಿಎಸ್ ಕಾರ್ಯಕರ್ತರಿಗೆ ಮತ್ತು ಮುಖಂಡರಿಗೆ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ತಾಲೂಕಿನ ಜೆಡಿಎಸ್ ಅಧ್ಯಕ್ಷರಾದ ಕಾಡೇನಹಳ್ಳಿ ನಾಗರಾಜ್, ಪ್ರಧಾನ ಕಾರ್ಯದರ್ಶಿಗಳಾದ ನಲ್ಲೂರು ರಘುಪತಿರೆಡ್ಡಿ , ವಕ್ತರರಾದ ಎಂ.ಎಸ್ ಶ್ರೀನಿವಾಸ ರೆಡ್ಡಿ, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರಾದ ಸ್ವಾಮೇಗೌಡ, ಡಾಕ್ಟರ್ ಪ್ರಕಾಶ್, ಎಂ.ಗೊಲ್ಲಹಳ್ಳಿ ಪ್ರಭಾಕರ್ , ನಗವಾರ ಸತ್ಯಣ್ಣ, ಅಮರಾವತಿ ಕೇಶವರೆಡ್ಡಿ, ಶ್ರೀನಿವಾಸ್, ನಾಗಮಂಗಲ ಶಂಕರಪ್ಪ, ಕಾಡೇನಹಳ್ಳಿ ಅಶೋಕ್ ಕುಮಾರ್ , ನಂಗಲಿ ಶ್ರೀಧರ್, ಯಡಹಳ್ಳಿ ಸೋಮಶೇಖರ್, ಪೆದ್ದೂರು ವರದಪ್ಪ, ಹಾಗೂ ಅನೇಕ ಜೆಡಿಎಸ್ ಕಾರ್ಯಕರ್ತರು ಮತ್ತು ಮುಖಂಡರು ಭಾಗವಹಿಸಿದ್ದರು.

# ‘ಮಡಿವಾಳ ಸಮುದಾಯ ಶೈಕ್ಷಣಿಕವಾಗಿ ಹಿಂದುಳಿದಿದೆ’

**ಶಿಡ್ಲಘಟ್ಟ:** ಮಡಿವಾಳ ಸಮುದಾಯವು ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಮುಖ್ಯವಾಗಿ ಶೈಕ್ಷಣಿಕವಾಗಿ ಬಹಳ ಹಿಂದುಳಿದಿದ್ದು ಇವೆಲ್ಲವೂ ನಮ್ಮ ಹಕ್ಕು ಇವುಗಳ ಬಗ್ಗೆ ನಾವು ನಮ್ಮ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಲಿದ್ದೇವೆ ಎಂದು ಮಡಿವಾಳ ಮಾಚಿದೇವರ ಸಂಘದ ರಾಜ್ಯ ಉಪಾಧ್ಯಕ್ಷರಾದ ಆರ್.ವಿ.ರಾಜಣ್ಣ ತಿಳಿಸಿದರು.

ತಾಲ್ಲೂಕು ಮಡಿವಾಳ ಮಾಚಿದೇವರ ಯುವಕರ ಸಂಘದಿಂದ ಹೊರ ತಂದಿರುವ ಹಲವು ರೀತಿಯ ಮಾಹಿತಿಯುಳ್ಳ ದಿನಚರಿ ಕ್ಯಾಲೆಂಡರನ್ನು ಮಡಿವಾಳ ಮಾಚಿದೇವರ ಸಂಘದ ಕಚೇರಿಯಲ್ಲಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸಮುದಾಯದ ಪ್ರತಿ ಮನೆಗೂ ಈ ದಿನಚರಿಯನ್ನು ತಲುಪಿಸಲಿದ್ದು ಈ ಮೂಲಕ ಸಮುದಾಯದ ಅಭಿವೃದ್ದಿಗೆ ಸರಕಾರದಿಂದ ಸಿಗುವ ಯೋಜನೆ, ಸವಲತ್ತುಗಳು ಹಾಗೂ ನಾವು ಮಾಡಬೇಕಾದ ಕರ್ತವ್ಯಗಳ ಬಗ್ಗೆ ಮಾಹಿತಿಯನ್ನು ನೀಡುವ ಕೆಲಸ ಮಾಡಲಿದ್ದೇವೆ ಎಂದರು.

ಮಡಿವಾಳ ಮಾಚಿದೇವರ ಸಂಘದ ತಾಲ್ಲೂಕು ಅಧ್ಯಕ್ಷ ಡಿ.ವಿ.ಕಷ್ಣಪ್ಪ ಮಾತನಾಡಿ ಯಾವುದೇ ಸಮುದಾಯವಾಗಲಿ ಶೈಕ್ಷಣಿಕವಾಗಿ ಮುಂಚೂಣಿಯಲ್ಲಿದ್ದರೆ ಮಾತ್ರ ಸಾಧ್ಯ ಇನ್ನುಳಿದ ಯಾವ ಕ್ಷೇತ್ರದಲ್ಲೂ ಅಭಿವೃದ್ಧಿ ಸಾಧಿಸಲು ಸಾಧ್ಯವಿಲ್ಲ ಹಾಗಾಗಿ ನಮ್ಮ ಸಂಘದಿಂದ ಶೈಕ್ಷಣಿಕವಾಗಿ ಜಾಗೃತಿ ಮೂಡಿಸುವ ಕೆಲಸವನ್ನು ನಾನಾ ರೀತಿಯಲ್ಲಿ ಕೈಗೊಂಡಿದ್ದು ಈ ದಿನಚರಿಯಲ್ಲೂ ಅನೇಕ ರೀತಿಯ ಮಾಹಿತಿಯನ್ನು ಒದಗಿಸುತ್ತಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಮಡಿವಾಳ ಮಾಚಿದೇವರ ಸಂಘದ ತಾಲ್ಲೂಕು ಉಪಾಧ್ಯಕ್ಷ ಎನ್. ಹರೀಶ್, ಪ್ರಧಾನ ಕಾರ್ಯದರ್ಶಿ ಎಚ್.ಎಂ.ಮುನಿರಾಜು, ಖಜಾಂಚಿ ಎಂ.ದೇವರಾಜ್, ಕೊರಿಯರ್ ರಾಜು,ಚಂದ್ರಪ್ಪ, ಶಂಕರಪ್ಪ, ಟೈಲರ್ ನಾರಾಯಣಸ್ವಾಮಿ, ವೆಂಕಟಗಿರಿಯಪ್ಪ ಮತ್ತಿತರರು ಹಾಜರಿದ್ದರು.



# ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ

**ಶಿಡ್ಲಘಟ್ಟ:** ತಾಲ್ಲೂಕಿನ ಗಂಜಿಗುಂಟೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನಡೆದ 13 ಸದಸ್ಯರ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ 10 ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದು, ಅಧ್ಯಕ್ಷರಾಗಿ ಪಾರ್ವತಮ್ಮ ಮುನಿಶಾಮರೆಡ್ಡಿ ಮತ್ತು ಉಪಾಧ್ಯಕ್ಷರಾಗಿ ದೊಡ್ಡನರಸಿಂಹಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶಾಸಕರಾದ ಬಿ.ಎನ್.ರವಿಕುಮಾರ್ ಅವರು ಅವರ ಸ್ವಗೃಹದಲ್ಲಿ ಜಯಗಳಿಸಿದ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಹಾಗು ಸದಸ್ಯರುಗಳನ್ನು ಅಭಿನಂದನೆ ಸಲ್ಲಿಸಿ , ಸನ್ಮಾನಿಸಿದರು.

ಶಾಸಕ ಬಿ.ಎನ್.ರವಿಕುಮಾರ್ ಮಾತನಾಡಿ, ಸಹಕಾರ ಸಂಘವನ್ನು ಉತ್ತಮ ರೀತಿಯಲ್ಲಿ ಅಭಿವೃದ್ಧಿ ಪಡಿಸಿ ಹಾಲು ಉತ್ಪಾದಕರಿಗೆ ನೆರವಾಗುವ ಜತೆಗೆ ಪಕ್ಷಾತೀತವಾಗಿ ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋಗಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿನೂತನ ನಿರ್ದೇಶಕರುಗಳಾದ ಬಿ.ಎಂ.ಶಂಕರ್ ರೆಡ್ಡಿ, ವೈ.ಕೃಷ್ಣಪ್ಪ, ಲೋಕೇಶಪ್ಪ, ಮಂಜುಳಮ್ಮ, ಕೇಶವಣ್ಣ, ಆನ್ಸರ್, ದೇವರಾಜ್ ಹಾಗೂ ಗ್ರಾಮ ಪಂಚಾಯತಿ ಅಧ್ಯಕ್ಷ ಜಿ.ಎನ್.ನರಸಿಂಹಮೂರ್ತಿ, ಸದಸ್ಯರಾದ ಅಂಬರೀಶ್, ಪಾಪಿರೆಡ್ಡಿ, ಗ್ಯಾಸ್ ರಮೇಶ್, ಮುಖಂಡರಾದ ನರಸಿಂಹರೆಡ್ಡಿ, ಶ್ರೀರಾಮರೆಡ್ಡಿ, ಉಸ್ಮಾನ್ ಮತ್ತು ಜೆಡಿಎಸ್ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.



# ಬಿಜೆಪಿಗರ ಆರೋಪಕ್ಕೆ ಕುಡಗುಂಟಿ ತಿರುಗೇಟು

**ಕುಕನೂರು:** ಶಾಸಕ ಬಸವರಾಜ್ ರಾಯರಡ್ಡಿ ಅವರ ಮೇಲೆ ಬಿಜೆಪಿ ಮುಖಂಡರ ಅಧಿಕಾರ ದುರುಪಯೋಗದ ಆರೋಪಕ್ಕೆ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಈರಪ್ಪ ಕುಡಗುಂಟಿ ತಿರುಗೇಟು ಕೊಟ್ಟಿದ್ದಾರೆ.

ಮಾಜಿ ಸಚಿವ ಹಾಲಪ್ಪ ಆಚಾರ್ ಆರ್ಥಿಕ ಸಲಹೆಗಾರ ರಾಯರಡ್ಡಿ ಅವರ ಮೇಲೆ ಮಾಡಿರುವ ಆರೋಪ ನಿರಾಧಾರ, ವಾಸ್ತವಕ್ಕೆ ದೂರವಾಗಿವೆ. ರಾಜಿಕೀಯ ಜೀವನದಲ್ಲಿ ಯಾರ ಮೇಲೂ ದ್ವೇಷ ಸಾಧಿಸಿಲ್ಲ, ರಾಜಕೀಯ ಒತ್ತಡ ತಂದಿಲ್ಲ, ಕೃಷಿ ಪತ್ತಿನ ಚುನಾವಣೆ ಫಲಿತಾಂಶಕ್ಕೂ ರಾಯರಡ್ಡಿ ಅವರಿಗೂ ಯಾವುದೇ ಸಂಬಂಧವಿಲ್ಲ, ಆದರೂ ಕೂಡಾ ಎಪಿಎಂಸಿ ಆವರಣದಲ್ಲಿ ಪ್ರತಿಭಟನೆ ವೇಳೆ ಶಾಸಕ ರಾಯರಡ್ಡಿ ಬಗ್ಗೆ ಬಿಜೆಪಿ, ಜೆಡಿಎಸ್ ಮುಖಂಡರು ಹಗುರವಾಗಿ ಮಾತಾಡಿದ್ದು ಖಂಡನೀಯ. ರಾಯರಡ್ಡಿ ಅವರು ಅಭಿವೃದ್ಧಿ ರಾಜಕಾರಣ ಮಾಡುತ್ತಾರೆ ಬಿಜೆಪಿ ಪಕ್ಷದವರಂತೆ ಸಣ್ಣತನಕ್ಕೆ ಇಳಿಯುವುದಿಲ್ಲ ಎಂದು ಈರಪ್ಪ ಕುಡಗುಂಟಿ ಹೇಳಿದ್ದಾರೆ.



# ಯುವನಿಧಿ ಯೋಜನೆ ನೊಂದಣಿ ಪ್ರಕ್ರಿಯೆಗೆ ಜಿಲ್ಲಾಧಿಕಾರಿ ಚಾಲನೆ

**ಚಾಮರಾಜನಗರ:** ಯುವಜನರ ಉಜ್ವಲ ಭವಿಷ್ಯಕ್ಕಾಗಿ ಸರ್ಕಾರ ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ‘ಯುವನಿಧಿ’ ಯೋಜನೆಯ 2024ನೇ ಸಾಲಿನ ನೊಂದಣಿ ಪ್ರಕ್ರಿಯೆಗೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಚಾಮರಾಜ ನಗರದಲ್ಲಿ ಚಾಲನೆ ನೀಡಿದರು.

ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಜೀವನೋಪಾಯ ಇಲಾಖೆ ಹಾಗೂ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ‘ಯುವನಿಧಿ ನೊಂದಣಿ ಪ್ರಕ್ರಿಯೆ ಆರಂಭ’ ಕುರಿತ ಪೋಸ್ಟರ್ ಅನ್ನು ಜಿಲ್ಲಾಧಿಕಾರಿಯವರು ಬಿಡುಗಡೆಗೊಳಿಸಿದರು.



ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ವಿದ್ಯಾಭ್ಯಾಸ ಮುಗಿಸಿರುವ ಪದವಿ ಹಾಗೂ ಸ್ನಾತಕೋತ್ತರ ಪದವಿಧರರು ಹಾಗೂ ಡಿಪ್ಲೋಮಾ ತೇರ್ಗಡೆಯಾಗಿರುವ ನಿರುದ್ಯೋಗಿಗಳಿಗೆ ನೆರವಾಗುವ ನಿಟ್ಟಿನಲ್ಲಿ ಜಾರಿಯಾಗಿರುವ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಲ್ಲಿ ಯುವನಿಧಿ ಯೋಜನೆ ಒಂದಾಗಿದೆ. ಯೋಜನೆಯ ಸದ್ಬಳಕೆ ಹಾಗೂ ಯಶಸ್ವಿಗಾಗಿ ನೊಂದಣಿ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಜಿಲ್ಲೆಯ ಎಲ್ಲಾ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೋಮಾ ಕಾಲೇಜಿನ ಪ್ರಾಂಶುಪಾಲರು, ಮುಖ್ಯಸ್ಥರು ಸಹಕರಿಸಿ ನಿರುದ್ಯೋಗಿ ಅಭ್ಯರ್ಥಿಗಳನ್ನು ಪ್ರೇರೇಪಿಸಬೇಕು ಎಂದರು.

2023 ಮತ್ತು 2024ರಲ್ಲಿ ಪದವಿ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ಉತ್ತೀರ್ಣರಾಗಿ ಕನಿಷ್ಠ 6 ತಿಂಗಳವರೆಗೆ ಸರ್ಕಾರಿ ಅಥವಾ ಖಾಸಗಿ ಉದ್ಯೋಗ ಹೊಂದಿಲ್ಲದವರು, ಸ್ವಯಂ ಉದ್ಯೋಗ ಹೊಂದಿಲ್ಲದವರು, ಉನ್ನತ ವಿದ್ಯಾಭ್ಯಾಸ ಮುಂದುವರಿಸದೇ ಇರುವವರು ಹಾಗೂ ಕರ್ನಾಟಕದಲ್ಲಿ ವಾಸವಿದ್ದು, ಕನಿಷ್ಠ 6 ವರ್ಷಗಳವರೆಗೆ ಅಧ್ಯಯನ ಮಾಡಿರುವ ಅಭ್ಯರ್ಥಿಗಳು ಸೇವಾಸಿಂಧು ಪೋರ್ಟಲ್ ಮೂಲಕ ನೊಂದಾಯಿಸಿಕೊಳ್ಳಬಹುದು. ಕರ್ನಾಟಕ ಒನ್, ಗ್ರಾಮ ಒನ್ ಹಾಗೂ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಉಚಿತವಾಗಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು.

ಎಸ್.ಎಸ್.ಎಲ್.ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ಉತ್ತೀರ್ಣವಾಗಿರುವ ಬಗ್ಗೆ ಪ್ರಮಾಣಪತ್ರ ನೊಂದಣಿಗೆ ಅಗತ್ಯವಾಗಿರುವ ದಾಖಲಾತಿಗಳಾಗಿವೆ. ಅಲ್ಲದೆ ಪ್ರತಿ ಮಾಹೆ ದಿನಾಂಕ 1ರಿಂದ 25ರೊಳಗೆ ಮಾಸಿಕ ಸ್ವಯಂ ಘೋಷಣಾ ಪತ್ರ ನೀಡುವುದು ಕಡ್ಡಾಯವಾಗಿದೆ. ಯೋಜನೆಯ ನೊಂದಣಿ ಪ್ರಕ್ರಿಯೆಯಲ್ಲಿ ಆಧಾರ್ ಸೀಡೆಡ್ ಬ್ಯಾಂಕ್ ಖಾತೆ, ಆಧಾರ್ ಕಾರ್ಡ್ ಹಾಗೂ ಆಧಾರ್ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆಯ ವಿವರ ನೀಡಬೇಕು ಎಂದು ಜಿಲ್ಲಾಧಿಕಾರಿಯವರು ಹೇಳಿದರು.

ಪದವಿ ಹಾಗೂ ಸ್ನಾತಕೋತ್ತರ ಪದವೀಧರರಿಗೆ ಪ್ರತಿ ಮಾಹೆ 3 ಸಾವಿರ ರೂ. ಹಾಗೂ ಡಿಪ್ಲೋಮಾ ತೇರ್ಗಡೆಯಾದವರಿಗೆ 1500 ರೂ.ಗಳನ್ನು ನಿರುದ್ಯೋಗ ಭತ್ಯೆಯಾಗಿ ನೊಂದಣಿಯಾಗುವ ಮುಂದಿನ 2 ವರ್ಷಗಳವರೆಗೆ ನೀಡಲಾಗುವುದು. ಅಭ್ಯರ್ಥಿಗಳು ನೊಂದಣಿಗಾಗಿ ಸೇವಾಸಿಂಧು ಪೋರ್ಟಲ್ ಃಣಣಠಿ:// ಜತಘುಟಿಜುಣಠ.ಏಚಿಡಿಟಿಚಿಣಚಿಞಚಿ.ರಠತ.ಟಿ ಗೆ ಭೇಟಿ ನೀಡಬಹುದು ಅಥವಾ ಸಹಾಯವಾಣಿ ಸಂಖ್ಯೆ 1800–599–7154 ನ್ನು ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿವಾಹಕ ಅಧಿಕಾರಿ ಮೋನಾ ರೋತ್, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಪಿ. ಲಕ್ಷ್ಮೀ, ಜಿಲ್ಲಾ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಅಧಿಕಾರಿ ಮಹಮ್ಮದ್ ಅಕ್ಬರ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಎಂ.ವಿ. ಸುಧಾ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಮಂಜುನಾಥ ಪ್ರಸನ್ನ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ರಾಮಚಂದ್ರರಾಜೇ ಅರಸ್, ಕೌಶಲ್ಯಾಭಿವೃದ್ಧಿ ನಿಗಮದ ಸಹಾಯಕ ನಿರ್ದೇಶಕರಾದ ಮಲ್ಲೇಶ್, ಆಪ್ತ ಸಮಾಲೋಚಕರು ಹಾಗೂ ತರಬೇತುದಾರರಾದ ಮಹದೇವಸ್ವಾಮಿ, ಉದ್ಯೋಗಾಭಿವೃದ್ಧಿ ನಿರ್ವಾಹಕರಾದ ಮೋಯಿನ್ ಖಾನ್, ಇತರರು ಇದೇ ಸಂದರ್ಭದಲ್ಲಿ ಇದ್ದರು.

# ಕಿರಿಬಾಟಿ ಮೊಟ್ಟಮೊದಲು ಹೊಸ ವರ್ಷ ಸ್ವಾಗತಿಸುವ ದೇಶ



**ಮೆಲ್ಬರ್ನ್:** 2025ರ ಹೊಸ ವರ್ಷವನ್ನು ಜಗತ್ತಿನ ಎಲ್ಲಾ ದೇಶಗಳು ಒಮ್ಮಲೇ ಸ್ವಾಗತಿಸುವುದಿಲ್ಲ. ಹಲವು ದೇಶಗಳು ಮೊದಲು ಹೊಸ ವರ್ಷಾಚರಣೆ ನಡೆಸಲಿವೆ. ಜಗತ್ತಿನಲ್ಲಿ ಆ ಒಂದು ದ್ವೀಪ ಎಲ್ಲ ದೇಶಗಳಿಗಿಂತ ಮೊದಲು ಹೊಸ ವರ್ಷವನ್ನು ಸ್ವಾಗತಿಸುತ್ತದೆ.

ಮಧ್ಯ ಪೆಸಿಫಿಕ್ ಮಹಾಸಾಗರದಲ್ಲಿ ನೆಲೆಗೊಂಡಿರುವ ಕಿರಿಬಾಟಿ ರಿಪಬ್ಲಿಕ್ ದೇಶದ ಕಿರಿಟಿಮತಿ ದ್ವೀಪವೇ ಮೊದಲು ಹೊಸ ವರ್ಷವನ್ನು ಆಚರಿಸುತ್ತದೆ. ಭಾರತ ಹೊಸ ವರ್ಷಾಚರಣೆ ಮಾಡುವ 8.5 ಗಂಟೆ ಮೊದಲೇ ಇಲ್ಲಿ ಹೊಸ ವರ್ಷವನ್ನು ಆಚರಿಸಲಾಗುತ್ತದೆ. ಇದೇ ಕಾರಣಕ್ಕೆ ಇದನ್ನು ಕ್ರಿಸ್ಮಸ್ ದ್ವೀಪ ಎನ್ನುತ್ತಾರೆ.

ಈ ದ್ವೀಪ ಗ್ರೀನ್ವಿಚ್ ಮೀನ್ ಟೈಮ್ಗಿಂತ 14 ಗಂಟೆಗಳು ಮುಂದಿದೆ. ಅಂದರೆ ಭಾರತಕ್ಕಿಂತ 8.5 ಗಂಟೆ ಮುಂದೆ ಇರುತ್ತದೆ. ಭಾರತದಲ್ಲಿ ಡಿಸೆಂಬರ್ 31 ರಂದು ಮಧ್ಯಾಹ್ನ 3.30 ಆಗಿರುವಾಗಲೇ ಕಿರೀಟಿಮತಿ ದ್ವೀಪದಲ್ಲಿ ಜನವರಿ 1, 2025 ರ ಮಧ್ಯರಾತ್ರಿ 12 ಗಂಟೆಯಾಗಲಿದ್ದು ಹೊಸ ವರ್ಷಾಚರಣೆ ನಡೆದಿದೆ. ಕಿರೀಟಿಮತಿ ಪ್ರದೇಶದ ಜನ ಪಟಾಕಿ, ಸಂಗೀತ, ಸಂಭ್ರಮದಿಂದ ಹೊಸ ವರ್ಷವನ್ನು ಸ್ವಾಗತಿಸಿದ್ದಾರೆ.

ಕಿರಿಬಾಟಿ ದೇಶದಲ್ಲಿ ಮೊದಲು ವರ್ಷ ಆಚರಣೆ ಮಾಡಿದ 15 ನಿಮಿಷಗಳ ಬಳಿಕ ನ್ಯೂಜಿಲೆಂಡ್ ಚಾಥಮ್ ದ್ವೀಪಗಳಲ್ಲಿ ಹೊಸ ವರ್ಷಾಚರಣೆ ನಡೆಯಿತು. ಬಳಿಕ ನ್ಯೂಜೆಲೆಂಡ್ನ ಮುಖ್ಯ ಭೂಭಾಗ ಮತ್ತು ಟೊಕೆಲಾವ್ ಮತ್ತು ಟೊಂಗಾ ಸೇರಿದಂತೆ ಹಲವಾರು ಪೆಸಿಫಿಕ್ ದ್ವೀಪಗಳಲ್ಲಿ ಹೊಸ ವರ್ಷಾಚರಣೆ ಮಾಡಲಾಯಿತು.

ಹವಾಯಿ, ಅಮೇರಿಕನ್ ಸಮೋವಾಮತ್ತು ಕೆಲವು ಯುಎಸ್ನ ಹಲವು ಪ್ರಾಂತ್ಯಗಳು ಎಲ್ಲಾ ದೇಶಗಳಿಗಿಂತ ಕೊನೆಯದಾಗಿ ಹೊಸ ವರ್ಷವನ್ನು ಸ್ವಾಗತಿಸುತ್ತವೆ. ಹಾಗಾದರೆ ಭಾರತಕ್ಕಿಂತ ಮೊದಲು ಹೊಸ ವರ್ಷಾಚರಣೆ ಮಾಡುವ ಮತ್ತು ಭಾರತದ ಬಳಿಕ ಹೊಸ ವರ್ಷ ಆಚರಿಸುವ ದೇಶಗಳ ಪಟ್ಟಿ ಇಲ್ಲಿದೆ. ಭಾರತೀಯ ಕಾಲಮಾನದಲ್ಲಿ ಯಾವ ದೇಶಗಳಲ್ಲಿ ಯಾವ ಸಮಯದಲ್ಲಿ ಹೊಸ ವರ್ಷ ಆಚರಿಸಲಾಗುತ್ತದೆ ಎನ್ನುವ ವಿವರ: ಮಧ್ಯಾಹ್ನ 3.30: ಕಿರಿಬಾಟಿ, ಸಂಜೆ 4.30: ನ್ಯೂಜಿಲೆಂಡ್, ಸಂಜೆ 5.30: ಫಿಜಿ, ರಷ್ಯಾದ ಸಣ್ಣ ಪ್ರದೇಶಗಳು, ಸಂಜೆ 6.30 : ಆಸ್ಟ್ರೇಲಿಯಾದ ಮುಶ್, ರಾತ್ರಿ 8.30: ಜಪಾನ್, ದಕ್ಷಿಣ ಕೊರಿಯಾ, ರಾತ್ರಿ 9.30 : ಚೀನಾ, ಮಲೇಷಿಯಾ, ಸಿಂಗಾಪುರ, ಹಾಂಗ್ ಕಾಂಗ್, ಫಿಲಿಪೈನ್ಸ್, ಭಾರತ, ಶ್ರೀಲಂಕಾ 12 ಗಂಟೆಗೆ, ಬೆಳಗ್ಗೆ 1.30: ಯುಎಇ, ಓಮನ್, ಅಜೆರ್ಬೈಜಾನ್, ಬೆಳಗ್ಗೆ 3.30: ಗ್ರೀಸ್, ದಕ್ಷಿಣ ಆಫ್ರಿಕಾ, ಸೈಪ್ರಸ್, ಈಜಿಪ್ಟ್, ನಮೀಬಿಯಾ, ಬೆಳಗ್ಗೆ 4.30: ಜರ್ಮನಿ, ಫ್ರಾನ್ಸ್, ಇಟಲಿ, ಸ್ವಿಟ್ಜರ್ಲೆಂಡ್, ನೆದರ್ಲ್ಯಾಂಡ್ಸ್, ಮೊರಾಕೊ, ಕಾಂಗೋ, ಮಾಲ್ಟಾ, ಬೆಳಗ್ಗೆ 5.30: ಯುಕೆ, ಐರ್ಲೆಂಡ್, ಪೋರ್ಚುಗಲ್, ಬೆಳಗ್ಗೆ 8.30 : ಬ್ರೆಜಿಲ್, ಅರ್ಜೆಂಟೀನಾ, ಚಿಲಿ, ಬೆಳಿಗ್ಗೆ 9.30 : ಪೋರ್ಟೊ ರಿಕೊ, ಬರ್ಮುಡಾ, ವೆನೆಜುವೆಲಾ, ಯುಎಸ್ ವರ್ಜಿನ್ ದ್ವೀಪಗಳು, ಬ್ರಿಟಿಷ್ ವರ್ಜಿನ್ ದ್ವೀಪಗಳು, ಬೆಳಗ್ಗೆ 10.30: ಯುಎಸ್ ಈಸ್ಟ್ ಕೋಸ್ಟ್ (ನ್ಯೂಯಾರ್ಕ್, ವಾಷಿಂಗ್ಟನ್ ಡಿಸಿ, ಇತ್ಯಾದಿ) ಪೆರು, ಕ್ಯೂಬಾ, ಬಹಾಮಾಸ್, ಬೆಳಗ್ಗೆ 11.30: ಮೆಕ್ಸಿಕೋ, ಕೆನಡಾದ ಕೆಲವು ಭಾಗಗಳು ಮತ್ತು ಯುಎಸ್, ಮಧ್ಯಾಹ್ನ 1.30: ಯುಎಸ್ ವೆಸ್ಟ್ ಕೋಸ್ಟ್ (ಲಾಸ್ ಏಂಜಲೀಸ್, ಸ್ಯಾನ್ ಫ್ರಾನ್ಸಿಸ್ಕೋ, ಇತ್ಯಾದಿ), ಮಧ್ಯಾಹ್ನ 3.30: ಹವಾಯಿ, ಫ್ರೆಂಚ್ ಪಾಲಿನೈಸಾ, ಸಂಜೆ 4.30: ಸಮೋವಾ

# ಆಸ್ಟ್ರೇಲಿಯಾದಲ್ಲಿ ಹೊಸ ವರ್ಷದ ಸಂಭ್ರಮ



**ಸಿಡ್ನಿ:** ಪ್ರಪಂಚದಾದ್ಯಂತ ಹೊಸ ವರ್ಷಾಚರಣೆ ಸಂಭ್ರಮ ಮನೆ ಮಾಡಿದೆ. ಆಸ್ಟ್ರೇಲಿಯಾದಲ್ಲಿ ಭಾರತಕ್ಕಿಂತ ಐದೂವರೆ ಗಂಟೆ ಮೊದಲೇ ನ್ಯೂ ಇಯರ್ ಆಚರಣೆ ನಡೆಯುತ್ತಿದ್ದು, ಇದರ ಭಾಗವಾಗಿ ನಗರದ ಹಾರ್ಬರ್ ಸೇತುವೆಯ ಉದ್ದಕ್ಕೂ ವರ್ಣರಂಜಿತ ಸುಡುಮದ್ದು ಪ್ರದರ್ಶನ (ಪಟಾಕಿಗಳ ಪ್ರದರ್ಶನ) ನಡೆಯಿತು. 9 ಟನ್‌ಗಳಷ್ಟು ಪಟಾಕಿಗಳನ್ನು ಪ್ರದರ್ಶನದಲ್ಲಿ ಸಿಡಿಸಲಾಗಿದ್ದು, 10 ಲಕ್ಷಕ್ಕೂ ಹೆಚ್ಚು ಮಂದಿ ಕಣ್ತುಂಬಿಕೊಂಡರು.

ಹೊಸ ವರ್ಷಕ್ಕೆ ವಾಂಟೇಜ್ ಪಾಯಿಂಟ್‌ಗಳು: ಸಿಡ್ನಿಯಲ್ಲಿ ಹೊಸ ವರ್ಷದ ಆಚರಣೆಯನ್ನು ಆನಂದಿಸಲು ಉತ್ಸಾಹಿಗಳಿಗೆ ಅನುಕೂಲಕರ ಸ್ಥಳಗಳ ವ್ಯವಸ್ಥೆ ಮಾಡಲಾಗಿದೆ. ವಾಂಟೇಜ್ ಪಾಯಿಂಟ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವುದು ಮಿಸೆಸ್ ಮ್ಯಾಕ್ವಾರಿಸ್ ಪಾಯಿಂಟ್. ಇದು ಸಿಡ್ನಿ ಹಾರ್ಬರ್ ಸೇತುವೆ ಮತ್ತು ಸಿಡ್ನಿ ಒಪೆರಾ ಹೌಸ್‌ನ ಅದ್ಭುತ ವಿಹಂಗಮ ನೋಟಕ್ಕೆ ಸೂಕ್ತ ಸ್ಥಳವಾಗಿದೆ.

ಸಿಡ್ನಿ ಒಪೆರಾ ಹೌಸ್: ಮತ್ತೊಂದು ಪ್ರಮುಖ ವಾಂಟೇಜ್ ಪಾಯಿಂಟ್ ಸಿಡ್ನಿ ಒಪೆರಾ ಹೌಸ್. ಇದು ಹಾರ್ಬರ್ ಸೇತುವೆಯ ಮೇಲೆ ನಡೆಯುವ ಪಟಾಕಿಗಳ ಪ್ರದರ್ಶನ ಕಣ್ತುಂಬಿಕೊಳ್ಳಲು ಇರುವ ಅದ್ಭುತ ಸ್ಥಳ.

ಫ್ಲೀಟ್ ಸ್ಟೆಪ್ಸ್: ರಾಯಲ್ ಬೊಟಾನಿಕಲ್ ಗಾರ್ಡನ್ ಒಳಗಿರುವ ಈ ವಾಂಟೇಜ್ ಪಾಯಿಂಟ್ ಸಿಡ್ನಿ ಒಪೆರಾ ಹೌಸ್ ಮತ್ತು ಪಟಾಕಿಗಳ ಪ್ರದರ್ಶನವನ್ನು ಹತ್ತಿರದಿಂದ ನೋಡಲು ಸೂಕ್ತವಾಗಿದೆ.

ಸರ್ಕ್ಯುಲರ್ ಕ್ವೇ ಮತ್ತು ಮಿಸೆಸ್ ಮ್ಯಾಕ್ವಾರಿಸ್ ಪಾಯಿಂಟ್ ನಡುವೆ ಇರುವ ಸಿಡ್ನಿ ಫೈರ್ವರ್ಕ್ಸ್ ವಾಂಟೇಜ್ ಪಾಯಿಂಟ್ ಅನ್ನು ಸೇಂಟ್ ಜೇಮ್ಸ್ ರೈಲ್ವೆ ನಿಲ್ದಾಣದಿಂದ ಮೂಲಕ ಸುಲಭವಾಗಿ ತಲುಪಬಹುದು. ಈ ಎಲ್ಲಾ ಪಾಯಿಂಟ್‌ಗಳು ವರ್ಣರಂಜಿತ ಬಾಣಬಿರುಸು ಪ್ರದರ್ಶನ ವೀಕ್ಷಣೆಗಾಗಿ ಸಂಪೂರ್ಣವಾಗಿ ಬುಕ್ಕಿಂಗ್ ಆಗಿವೆ.

# 2025ರ ಮೊದಲ ದಿನದಿಂದ ದೇಶದ ಆರ್ಥಿಕ ವಲಯದಲ್ಲಿ ಬದಲಾವಣೆ



**ನವದೆಹಲಿ:** ಹೊಸ ವರ್ಷ 2025ರಲ್ಲಿ ಭಾರತದಾದ್ಯಂತ ಹಲವು ಪ್ರಮುಖ ಬದಲಾವಣೆಗಳು ಆಗಲಿವೆ. ಪ್ರಮುಖವಾಗಿ ಬ್ಯಾಂಕಿಂಗ್ ಹಾಗೂ ಆರ್ಥಿಕ ವಲಯದಲ್ಲಿ ಹಲವು ಬದಲಾವಣೆಗಳು ಆಗಲಿವೆ. ವೀಸಾ ಅಪಾಯಿಂಟ್ಮೆಂಟ್, ರೈತರ ಸಾಲ ಹೆಚ್ಚಳ ಹಾಗೂ ಯುಪಿಐ ಮಿತಿ ಸೇರಿದಂತೆ ಹಲವು ಪ್ರಮುಖ ಬದಲಾವಣೆಗಳು ಆಗಲಿವೆ. ಇ– ಬಿಲ್ ಸೇರಿದಂತೆ ಉದ್ಯೋಗಿಗಳ ಭವಿಷ್ಯ ನಿಧಿಯಲ್ಲೂ ಪ್ರಮುಖ ಬದಲಾವಣೆ ಆಗಲಿವೆ. ಮುಖ್ಯವಾಗಿ ಗಕಖ ವಹಿವಾಟು ಮಿತಿಗಳು ಹೆಚ್ಚಾಗಲಿವೆ. ಈಗ ಯುಪಿಐ ಮೂಲಕ 5,000 ಸಾವಿರ ರೂಪಾಯಿ ವರ್ಗಾವಣೆ ಮಾಡುವುದಕ್ಕೆ ಅವಕಾಶವಿದ್ದು. ಇದು 10,000 ಸಾವಿರಕ್ಕೆ ಹೆಚ್ಚಳವಾಗಲಿದೆ.

ಈ ವರ್ಷ ರೈತರಿಗೆ ಸಾಲದ ಮಿತಿ ಹೆಚ್ಚಳವಾಗಲಿದೆ. ಕೃಷಿ ವಲಯಕ್ಕೆ ಹಾಗೂ ರೈತರಿಗೆ ಉತ್ತೇಜನ ಸಿಗಲಿದೆ. 2025ನೇ ಸಾಲಿನ ಜನವರಿ 1ರಿಂದ ಯಾವುದೇ ಗ್ಯಾರಂಟಿ ಇಲ್ಲದೆ 2 ಲಕ್ಷ ರೂಪಾಯಿಯ ವರೆಗೆ ಸಾಲ ಪಡೆಯುವುದಕ್ಕೆ ರೈತರು ಅರ್ಹರಾಗಿರಲಿದ್ದಾರೆ. ಈ ಹಿಂದಿನ 1.6 ಲಕ್ಷ ಮಿತಿಯಿಂದ ಇದೀಗ 2 ಲಕ್ಷ ರೂಪಾಯಿಯ ವರೆಗೆ ಹೆಚ್ಚಳ ಮಾಡಲಾಗಿದೆ. ಕೃಷಿ ವಲಯದಲ್ಲಿ ಅಭಿವೃದ್ಧಿ ಇದರ ಉದ್ದೇಶವಾಗಿದೆ.

ಹೊಸ ವರ್ಷದಲ್ಲಿ ಕೇಂದ್ರ ಸರ್ಕಾರವು ಉದ್ಯೋಗಿಗಳಿಗೆ ಸಿಹಿಸುದ್ದಿ ಕೊಡುತ್ತಿದೆ. 2025ನೇ ಸಾಲಿನ ಜನವರಿ 1ರಿಂದ ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ (ಇಕಈಔ) ಅಡಿಯಲ್ಲಿ ಯಾವುದೇ ಬ್ಯಾಂಕಿನಿಂದ ತಮ್ಮ ಪಿಂಚಣಿ ಮೊತ್ತವನ್ನು ಪಡೆಯುವುದಕ್ಕೆ ಅವಕಾಶ ಇರಲಿದೆ. ಈ ಬದಲಾವಣೆಯು ನಿವೃತ್ತರಾಗಿರುವವರು ತಮ್ಮ ಹಣವನ್ನು ಹಿಂಪಡೆಯುವುದಕ್ಕೆ ಸಹಕಾರಿಯಾಗಿದೆ. ದೇಶದಲ್ಲಿ ವಲಸೆರಹಿತ ವೀಸಾ ಅರ್ಜಿದಾರರು ತಮ್ಮ ಅಪಾಯಿಂಟ್ಮೆಂಟ್ಗಳನ್ನು ಒಂದು ಬಾರಿ ಉಚಿತವಾಗಿ ಮರುಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಅವಕಾಶ ಇರಲಿದೆ. ಆದರೆ, ಇದರಲ್ಲಿ ಹೆಚ್ಚಿನ ಬದಲಾವಣೆ ಅಥವಾ ಎರಡನೇ ಬಾರಿ ಅರ್ಜಿ ಸಲ್ಲಿಸುವುದು ಹಾಗೂ ಶುಲ್ಕ ಪಾವತಿಸಬೇಕಾಗುತ್ತದೆ.

ಊ–1ಃ ವೀಸಾ ಪ್ರಕ್ರಿಯೆಯಲ್ಲಿ ಪ್ರಮುಖ ಬದಲಾವಣೆ ಆಗಲಿದೆ. ಇದರಲ್ಲಿ ಹೊಸ ನಿಯಮಗಳು 2025ನೇ ಸಾಲಿನ ಜನವರಿ 17 ರಿಂದ ಜಾರಿಗೆ ಬರಲಿವೆ. ಈ ಬದಲಾವಣೆಗಳು ಉದ್ಯೋಗ ನೀಡುವವರಿಗೆ ಹೆಚ್ಚಿನ ಆದ್ಯತೆ ಕೊಡಲಿವೆ. ಭಾರತೀಯ ಈ–1 ವೀಸಾ ಹೊಂದಿರುವವರಿಗೆ ಈ ವೀಸಾ ಸುಲಭವಾಗಿ ಸಿಗುವಂತೆ ಮಾಡಲಾಗುತ್ತಿದೆ. ಜನವರಿ 1ರ 2025 ರಿಂದ, ಬಾಂಬೆ ಸ್ಟಾಕ್ ಎಕ್ಸ್ಚೇಂಜ್ ಸೆನ್ಸೆಕ್ಸ್ ಉತ್ಪನ್ನಗಳ ಮುಕ್ತಾಯ ದಿನಾಂಕದಲ್ಲಿ ಬದಲಾವಣೆ ಮಾಡಲಿದೆ. ಇದನ್ನು ಶುಕ್ರವಾರದಿಂದ ಮಂಗಳವಾರಕ್ಕೆ ಬದಲಾಯಿಸಲಾಗುತ್ತದೆ.

ಈ ಹೊಂದಾಣಿಕೆಯು ಷೇರು ಮಾರುಕಟ್ಟೆಯಲ್ಲಿ ಹೂಡಿಕೆದಾರರು ಮತ್ತು ವ್ಯಾಪಾರ ಮಾಡುವವರ ಮೇಲೆ ಪರಿಣಾಮ ಬೀರಲಿದೆ ಎಂದು ನಿರೀಕ್ಷೆ ಮಾಡಲಾಗಿದೆ. ಇದರೊಂದಿಗೆ ಜಿಎಸ್ಟಿ ಹಾಗೂ ಎಲ್ಪಿಜಿ ಗ್ಯಾಸ್ ಸಿಲಿಂಡರ್ ಸೇರಿದಂತೆ ಹಲವು ವಿಷಯಗಳಲ್ಲಿ ಬದಲಾವಣೆಯನ್ನು ನಿರೀಕ್ಷೆ ಮಾಡಲಾಗಿದೆ.

# ಅಂತರಿಕ್ಷದಲ್ಲಿ 16 ಬಾರಿ ಹೊಸ ವರ್ಷಾಚರಣೆಗೆ ಸಾಕ್ಷಿಯಾಗಲಿರುವ ಸುನಿತಾ ವಿಲಿಯಮ್ಸ್



**ಬೆಂಗಳೂರು:** 2024ರ ವರ್ಷ ಕೊನೆಯಾಗಿ 2025ರ ಹೊಸ ವರ್ಷವನ್ನು ಜಗತ್ತು ಅದ್ದೂರಿಯಾಗಿ ಸ್ವಾಗತಿಸುತ್ತಿದೆ. ಭಾರತೀಯ ಕಾಲಮಾನಕ್ಕೆ ಹೋಲಿಕೆ ಮಾಡಿದರೆ ಹಲವು ದೇಶಗಳು ನಮಗಿಂತ ಮೊದಲು ಹೊಸ ವರ್ಷವನ್ನು ಸ್ವಾಗತಿಸಿದರೆ ಇನ್ನೂ ಹಲವು ದೇಶಗಳು ನಮಗಿಂತ ತಡವಾಗಿ ಹೊಸ ವರ್ಷವನ್ನು ಸ್ವಾಗತಿಸುತ್ತವೆ. ಆದರೆ ಬಾಹ್ಯಾಕಾಶ ನಿಲ್ದಾಣದಲ್ಲಿರುವ ಸಿಬ್ಬಂದಿ ಬರೋಬ್ಬರಿ 16 ಬಾರಿ ಹೊಸ ವರ್ಷವನ್ನು ಅನುಭವಿಸಲು ಸಜ್ಜಾಗಿದ್ದಾರೆ. ಭಾರತೀಯ ಮೂಲಕ ಅಮೆರಿಕದ ಗಗನಯಾತ್ರಿ ಸುನೀತ್ ವಿಲಿಯಮ್ಸ್ ಮತ್ತು ಅವರ ಸಿಬ್ಬಂದಿ ಬಾಹ್ಯಾಕಾಶದಲ್ಲಿ 16 ಬಾರಿ ಹೊಸ ವರ್ಷವನ್ನು ಆಚರಿಸಲಿದ್ದಾರೆ. ಬಾಹ್ಯಾಕಾಶ ನೌಕೆ ಭೂಮಿಯ ಸುತ್ತ ಸುತ್ತುತ್ತಿರುವಾಗ 16 ಬಾರಿ ಸೂರ್ಯೋದಯಮತ್ತು ಸೂರ್ಯಾಸ್ತಗಳಿಗೆ ಅವರು ಸಾಕ್ಷಿಯಾಗ ಲಿದ್ದಾರೆ. ಭೂಮಿಯಿಂದ 400 ಕಿಮೀ ಎತ್ತರದಲ್ಲಿ ಅವರು 2025ರ ವರ್ಷವನ್ನು ಸ್ವಾಗತಿಸಲಿದ್ದಾರೆ. ಐಎಸ್ಎಸ್ ಕಮಾಂಡರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಸುನಿತಾ ವಿಲಿಯಮ್ಸ್ 2024ರ ಜೂನ್ ತಿಂಗಳಿನಲ್ಲಿ ಬೋಯಿಂಗ್ನ ಸ್ಟಾರ್ಲೈನರ್ ಬಾಹ್ಯಾಕಾಶ ನೌಕೆಯಲ್ಲಿ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದರು. ಎಂಟು ದಿನಗಳ ಕಾಲ ಅವರು ಬಾಹ್ಯಾಕಾಶ ನೌಕೆಯಲ್ಲಿ ಕಾರ್ಯಾಚರಣೆ ಮಾಡಿ ವಾಪಸ್ ಬರಲು ಯೋಜಿಸಲಾಗಿತ್ತು. ಆದರೆ ಅವರು ವಾಪಸ್ ಬರಲು ತಾಂತ್ರಿಕ ಸಮಸ್ಯೆ ಉಂಟಾದ ಕಾರಣ ಅವರು ಇನ್ನೂ ಬಾಹ್ಯಾಕಾಶದಲ್ಲಿ ಇರಬೇಕಾದ ಅನಿವಾರ್ಯತೆ ಉಂಟಾಗಿದೆ. ಅವರನ್ನು ವಾಪಸ್ ಕರೆತರಲು ನಾಸಾ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಆದರೂ ಅವರು ಮಾರ್ಚ್ 2025ರವರೆಗೆ ಬಾಹ್ಯಾಕಾಶದಲ್ಲಿ ಉಳಿಯುವ ಸಾಧ್ಯತೆ ಇದೆ. ಬಾಹ್ಯಾಕಾಶ ನಿಲ್ದಾಣ ಪ್ರತಿ 90 ನಿಮಿಷಗಳಿಗೆ ಇಂದು ಬಾರಿ ಭೂಮಿಯನ್ನು ಸುತ್ತುಹಾಕುವ ಕಾರಣ 16 ಬಾರಿ ಸೂರ್ಯೋದಯ ಮತ್ತು ಸೂರ್ಯಾಸ್ತಕ್ಕೆ ಸಾಕ್ಷಿಯಾಗಲಿದ್ದಾರೆ.

ಬಾಹ್ಯಾಕಾಶದಲ್ಲೇ ಹೊಸ ವರ್ಷ ಆಚರಣೆ ಮಾಡಲು ಸುನೀತಾ ವಿಲಿಯಮ್ಸ್ ಮತ್ತು ಸಿಬ್ಬಂದಿ ಸಜ್ಜಾಗಿದ್ದಾರೆ. ಭೂಮಿಯಿಂದ ಕಳಿಸಿರುವ ವಿಶೇಷ ಊಟ ಸೇರಿದಂತೆ ಅನೇಕ ಚಟುವಟಿಗಳೊಂದಿಗೆ ಹೊಸ ವರ್ಷಾಚರಣೆ ಮಾಡಲಿದ್ದಾರೆ. ವಿಡಿಯೋ ಕರೆ ಮಾಡುವ ಮೂಲಕ ಕುಟುಂಬಸ್ಥರು ಮತ್ತು ಸ್ನೇಹಿತರ ಜೊತೆ ಸಂಪರ್ಕ ಸಾಧಿಸಲಿದ್ದು ಸಂದೇಶ ವಿನಿಮಯ ಮಾಡಿಕೊಳ್ಳಲಿದ್ದಾರೆ.

ಸುನಿತಾ ವಿಲಿಯಮ್ಸ್ ಇತ್ತೀಚೆಗೆ ಮುಕ್ತಾಯವಾದ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಬಾಹ್ಯಾಕಾಶದಿಂದಲೇ ತಮ್ಮ ಮತ ಚಲಾಯಿಸಿದ್ದು ವಿಶೇಷವಾಗಿತ್ತು.

# ಬ್ರಿಟನ್ ರಾಜಾ ಚಾರ್ಲ್ಸ್ 2025ರ ಗೌರವ ಪಟ್ಟಿ 30 ಮಂದಿ ಭಾರತೀಯ ಮೂಲದವರಿಗೆ ಸ್ಥಾನ



**ಲಂಡನ್:** ಕಿಂಗ್ ಚಾರ್ಲ್ಸ್ 2025ರ ಹೊಸ ವರ್ಷದ ಗೌರವ ಪಟ್ಟಿಯಲ್ಲಿ ಈ ಬಾರಿ 30 ಭಾರತೀಯ ಮೂಲದ ಸಮುದಾಯ ನಾಯಕರು, ಪ್ರಚಾರಕರು ಮತ್ತು ವೈದ್ಯಕೀಯ ವೃತ್ತಿಪರರು ಸೇರಿದಂತೆ ಹಲವರು ಸೇರಿದ್ದಾರೆ.

ಶುಕ್ರವಾರ ಲಂಡನ್‌ನಲ್ಲಿ ಈ ಗೌರವ ನಡೆಯಲಿದ್ದು, ಶ್ರೀಲಂಕಾ ಮತ್ತು ಭಾರತೀಯ ಪರಂಪರೆಯ ಸಂಸತ್‌ನ ಕನ್ಸರ್ವೇಟಿವ್ ಸದಸ್ಯರಾದ ರಾನಿಲ್ ಮಲಕೊಲಮ್ ಮತ್ತು ಇತ್ತೀಚಿಗೆ ಇಂಗ್ಲೆಂಡ್ ಫುಟ್ಬಾಲ್ ತಂಡದ ಮ್ಯಾನೇಜರ್ ಹುದ್ದೆಗೆ ರಾಜೀನಾಮೆ ನೀಡಿದ ಗರೆತ್ ಸೌತ್‌ಗೇಟ್ ಕೂಡ ಇದ್ದಾರೆ.

2025 ಗೌರವ ಪಟ್ಟಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿನ ಸುಮಾರು 1,200 ಮಂದಿಯ ಹೆಸರುಗಳು ಈ ಪಟ್ಟಿಯಲ್ಲಿವೆ. ಕ್ರೀಡೆ, ಆರೋಗ್ಯ ಸೇವೆ, ಶೈಕ್ಷಣಿಕ ಮತ್ತು ಸ್ವಯಂ ಸೇವಕರಿಗೆ ಮಾನ್ಯತೆ ನೀಡಲಾಗಿದೆ.

ಪ್ರತಿ ದಿನ ಸಾಮಾನ್ಯ ಜನರು ಹೊರ ಹೋಗಿ, ತಮ್ಮ ಸಮುದಾಯದವರಿಗೆ ಅದ್ಭುತ ಕೆಲಸವನ್ನು ಮಾಡುತ್ತಿದ್ದಾರೆ. ಅವರು ಯುಕೆಯನ್ನು ಪ್ರತಿನಿಧಿಸಿ ಉತ್ತಮ ಕೆಲಸ ಮಾಡುತ್ತಿದ್ದು, ಅವರ ಸೇವೆ ಮೌಲ್ಯಯುತವಾಗಿದೆ. ಹೊಸ ವರ್ಷದ ಗೌರವಾರ್ಥ ಪಟ್ಟಿಯು ಈ ಅದ್ಭುತ ಹೀರೋಗಳ ಆಚರಣೆಗಿಂತ ಮಿಗಿಲಾಗಿದೆ. ಅವರ ಅಮೋಘ ಕೊಡುಗೆಗೆ ನಾನು ಧನ್ಯವಾದ ತಿಳಿಸುತ್ತೇನೆ ಎಂದು ಯುಕೆ ಪ್ರಧಾನಿ ಕೀರ್ ಸ್ಟಾರ್ಮರ್ ಹೇಳಿದರು.

ಬ್ರಿಟಿಷ್ ರಾಜನ ಹೆಸರಿನಲ್ಲಿ ಕ್ಯಾಬಿನೆಟ್ ಕಚೇರಿಯಿಂದ ಈ ವಾರ್ಷಿಕ ಪಟ್ಟಿಯನ್ನು ಬಿಡುಗಡೆ ಮಾಡಲಾಗುವುದು.

ಈ ಪಟ್ಟಿಯಲ್ಲಿರುವ ಭಾರತೀಯ ಮೂಲದವರೆಂದರೆ ಸಿಬಿಇಯ ಶಿಕ್ಷಣ ಸೇವೆಗಾಗಿ ಸತ್ವಂತ್ ಕೌರ್ ಡಿಯೋಲ್, ಕಾನೂನು ಸೇವೆಯಲ್ಲಿ ಚಾರ್ಲ್ಸ್ ಪ್ರೀತಂ ಸಿಂಗ್ ಧನೊವಾ, ಆರೋಗ್ಯ ಸೇವೆಯಲ್ಲಿ ಸರ್ಜನ್ ಸ್ನೆಹ್ ಖೆಮ್ಕಾ, ಗ್ರಾಹಕ ವಲಯದಲ್ಲಿ ಲೀನಾ ನಾಯರ್, ತಂತ್ರಜ್ಞಾನದಲ್ಲಿ ಬ್ರಿಟಿಷ್ ಕಂಪ್ಯೂಟಿಂಗ್ ಸೊಸೈಟಿ ಅಧ್ಯಕ್ಷ ಮಯಾಂಕ್ ಪ್ರಕಾಶ್, ಶಿಕ್ಷಣದಲ್ಲಿ ನ್ಯಾಷನಲ್ ಡೇ ನರ್ಸರೀಸ್ ಅಸೋಸಿಯೇಷನ್‌ನ ಮುಖ್ಯ ಕಾರ್ಯನಿರ್ವಹಕಾಧಿಕಾರಿ ಪೂರ್ಣಿಮಾ ಮೂರ್ತಿ ತನುಕು ಇದ್ದಾರೆ.

ಹೃದ್ರೋಗ ತಜ್ಞ ಸಂಜಯ್ ಆರ್ಯಾ, ಆಕ್ಸ್‌ಫರ್ಡ್ ಯುನಿವರ್ಸಿಟಿಯ ನಂದಿನಿ ದಾಸ್, ಚಿಲ್ಲರೆ ಮತ್ತು ಸೇವೆಯಲ್ಲಿ ತರ್ಸೆಲ್ ಸಿಂಗ್ ಧಲಿವಾಲ್, ಸಂಗೀತದಲ್ಲಿ ಜಸ್ಮೈನ್ ದೊತಿವಾಲಾ ಸೇರಿದಂತೆ ಹಲವರು ಈ ಪಟ್ಟಿಯಲ್ಲಿದ್ದಾರೆ.

# 20 ಭಾರತೀಯರ ಮೀನುಗಾರರ ಬಿಡುಗಡೆ ಮಾಡಿದ ಶ್ರೀಲಂಕಾ



**ಚೆನ್ನೈ:** ಜೈಲಿನಲ್ಲಿದ್ದ 20 ಭಾರತೀಯ ಮೀನುಗಾರರನ್ನು ಶ್ರೀಲಂಕಾ ಸರ್ಕಾರ ಬಿಡುಗಡೆ ಮಾಡಿದ್ದು, ಅವರು ಹೊಸ ವರ್ಷದಂದೇ ವಿಮಾನದ ಮೂಲಕ ಚೆನ್ನೈಗೆ ಬಂದಿಳಿದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವರ್ಷದ ಹಿಂದೆ ಸಾಗರ ಗಡಿ ದಾಟಿದ ಈ ಮೀನುಗಾರರನ್ನು ಶ್ರೀಲಂಕಾ ನೌಕಾ ಸೇನೆ ಬಂಧಿಸಿತ್ತು. ಇವರೆಲ್ಲ ತಮಿಳುನಾಡಿನ ಪುದುಕೊಟ್ಟೈ, ರಾಮನಾಥಪುರಂ ಮತ್ತು ಟ್ಯುಟಿಕೋರಿನ್ ಮೂಲದವರಾಗಿದ್ದು, ಶ್ರೀಲಂಕಾದಲ್ಲಿ ನ್ಯಾಯಾಲಯ ಬಂಧನದಲ್ಲಿದ್ದರು.

ಭಾರತ ಮತ್ತು ಶ್ರೀಲಂಕಾ ಸರ್ಕಾರದ ಮಾತುಕತೆ ಬಳಿಕ 20 ಮೀನುಗಾರರನ್ನು ಬಿಡುಗಡೆ ಮಾಡಲು ದ್ವೀಪ ರಾಷ್ಟ್ರ ಒಪ್ಪಿತು. ಅವರನ್ನೆಲ್ಲಾ ಶ್ರೀಲಂಕಾದಲ್ಲಿನ ಭಾರತೀಯ ರಾಯಭಾರಿ ಕಚೇರಿಗೆ ಒಪ್ಪಿಸಲಾಯಿತು. ಬಳಿಕ ಅವರಿಗೆ ತಾತ್ಕಾಲಿಕ ನಾಗರಿಕ ಪ್ರಮಾಣಪತ್ರವನ್ನು ನೀಡಲಾಯಿತು. ಬಳಿಕ ಬುಧವಾರ ಅವರು ಕೊಲೊಂಬೊದಿಂದ ಚೆನ್ನೈ ವಿಮಾನ ನಿಲ್ದಾಣಕ್ಕೆ ಬಂದಿಳಿದಿರು.

ಚೆನ್ನೈ ವಿಮಾನ ನಿಲ್ದಾಣಕ್ಕೆ ಬಂದಿಳಿದರು. ಇವರನ್ನೆಲ್ಲಾ ನಾಗರಿಕ ಪ್ರಮಾಣಪತ್ರ ಪರಿಶೀಲನೆ, ಕಸ್ಟಮ್ಸ್ ಪರೀಕ್ಷೆ ಮತ್ತು ಇತರೆ ಔಪಚಾರಿಕ ಪರೀಕ್ಷೆಗೆ ಒಳಪಡಿಸಿ ಬಿಡುಗಡೆ ಮಾಡಲಾಯಿತು.

ಚೆನ್ನೈಗೆ ಬಂದಿಳಿದ ಅವರಿಗೆ ಮೀನುಗಾರಿಕೆ ಇಲಾಖೆ ಅಧಿಕಾರಿಗಳು ಶುಭಾಶಯ ಕೋರಿದರು. ಬಳಿಕ ಅವರನ್ನು ಪ್ರತ್ಯೇಕ ವಾಹನಗಳಲ್ಲಿ ಅವರವರ ಮನೆಗೆ ತಲುಪುವ ವ್ಯವಸ್ಥೆ ಮಾಡಿದರು.

ಕರಾವಳಿ ಜಿಲ್ಲೆಗಳಲ್ಲಿ ರಾಜ್ಯದ ಮೀನುಗಾರರ ನಿಯಮಿತ ಬಂಧನ ಖಂಡಿಸಿ, ತಮಿಳುನಾಡಿನಾದ್ಯಂತ ಮೀನುಗಾರರ ಸಂಸ್ಥೆಗಳು ರಾಜ್ಯದಾದ್ಯಂತ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ನಡೆಸಿದ್ದವು. ಅಲ್ಲದೆ ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು, ಸಾಗರ ಮಧ್ಯೆ ಬಂಧನ ಮತ್ತು ಬೋಟ್‌ಗಳನ್ನು ವಶಕ್ಕೆ ಪಡೆಯುತ್ತಿರುವ ಕುರಿತು ಮಧ್ಯ ಪ್ರವೇಶಿಸಬೇಕು. ಮೀನುಗಾರಿಕೆ ನಮ್ಮ ಜೀವನೋಪಾಯವಾಗಿದ್ದು, ಇದಕ್ಕೆ ಪರಿಹಾರ ಹುಡುಕುವಲ್ಲಿ ಮುಂದಾಗುವಂತೆ ಮನವಿ ಸಲ್ಲಿಸಿದ್ದರು.

ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ್ದ ಶ್ರೀಲಂಕಾ ಅಧ್ಯಕ್ಷ ಅನುರಾ ದಿಸ್ಸಾನಾಯಕೆ ಜೊತೆ ಕೂಡ ವಿದೇಶಾಂಗ ಸಚಿವರಾದ ಎಸ್ ಜೈಶಂಕರ್ ತಮಿಳುನಾಡು ಮೀನುಗಾರರ ಬಂಧನದ ವಿಚಾರ ಚರ್ಚಿಸಿದ್ದರು.

ಕೇಂದ್ರದ ಪ್ರಬಲ ಮಧ್ಯಸ್ಥಿಕೆಯಿಂದ ಭವಿಷ್ಯದಲ್ಲಿ ಮೀನುಗಾರರ ಬಂಧನ ತಪ್ಪಿಸಬಹುದು ಎಂದು ಪಿಎಂಕೆ ಅಧ್ಯಕ್ಷ ಮತ್ತು ಮಾಜಿ ಕೇಂದ್ರ ಸಚಿವ ಅನ್ಬುಮಣಿ ರಾಮದಾಸ್ ತಿಳಿಸಿದ್ದರು.

ಶ್ರೀಲಂಕಾದ ವಶದಲ್ಲಿ ತಮಿಳುನಾಡಿನ 504 ಭಾರತೀಯ ಮೀನುಗಾರರಿದ್ದಾರೆ. ಹಾಗೂ ಸುಮಾರು 48 ಯಂತ್ರಚಾಲಿತ ಮೀನುಗಾರಿಕೆ ಬೋಟ್‌ಗಳು ಇವೆ ಎಂದು ತಿಳಿದು ಬಂದಿದೆ.

# ದೇಶದ ಜನರಿಗೆ ಹೊಸ ವರ್ಷದ ಶುಭಾಶಯ ತಿಳಿಸಿದ ರಾಷ್ಟ್ರಪತಿ, ಪ್ರಧಾನಿ

**ನವದೆಹಲಿ:** ಇಂದು 2025ರ ಹೊಸ ವರ್ಷದ ಮೊದಲ ದಿನ. ಈ ಹಿನ್ನೆಲೆ ದೇಶದ ಜನರಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶುಭಾಶಯ ಕೋರಿದ್ದಾರೆ. ಈ ಕುರಿತು ಎಕ್ಸ್ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ಈ ವರ್ಷವು ಹೊಸ ಅವಕಾಶ, ಯಶಸ್ಸು ಮತ್ತು ನಿರಂತರ ಸಂತಸ ತರಲಿ ಎಂದು ಆಶಿಸುತ್ತೇನೆ. 2025ರ ಹೊಸ ವರ್ಷದ ಶುಭಾಶಯಗಳು. ಎಲ್ಲರಿಗೂ ಅದ್ಭುತ ಆರೋಗ್ಯ ಮತ್ತು ಸಮೃದ್ಧಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ ಎಂದು ತಿಳಿಸಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕೂಡ ಹೊಸ ವರ್ಷದ ಶುಭಾಶವನ್ನು ಕೋರಿದ್ದು, ಈ 2025ರ ವರ್ಷ ನಿಮ್ಮೆಲ್ಲರಿಗೆ ಖುಷಿ, ಸಾಮರಸ್ಯ ಮತ್ತು ಸಮೃದ್ಧಿಯನ್ನು ತರಲಿ. ಈ ಶುಭ ಸಂದರ್ಭದಲ್ಲಿ ಭಾರತ ಮತ್ತು ಜಗತ್ತಿನ ಸುಸ್ಥಿರ ಭವಿಷ್ಯಕ್ಕೆ ಒಟ್ಟಾಗಿ ಕೆಲಸ ಮಾಡುವ ಬದ್ಧತೆಯನ್ನು ತೋರೋಣ ಎಂದು ಹೇಳಿದ್ದಾರೆ.

# ಅಯ್ಯಪ್ಪ ಭಕ್ತರಿಗೆ ವಿಶೇಷ ಪಾಸ್ ತಾತ್ಕಾಲಿಕ ಸ್ಥಗಿತ



**ಕೇರಳ:** ಅರಣ್ಯ ಮಾರ್ಗದಲ್ಲಿ ಕಾಲ್ನಡಿಗೆಯಲ್ಲಿ ಬರುವ ಶಬರಿಮಲೆ ಅಯ್ಯಪ್ಪ ಭಕ್ತರಿಗೆ ನೀಡುವ ವಿಶೇಷ ಪಾಸ್‌ಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ ಎಂದು ತಿರುವಾಂಕೂರ್ ದೇವಸ್ವಂ ಮಂಡಳಿ (ಟಿಡಿಬಿ) ಘೋಷಿಸಿದೆ.

ಈ ಪಾಸ್ ವಿತರಣೆಯಿಂದಾಗಿ ವರ್ಚುವಲ್ ಸಾಲಿನ ವ್ಯವಸ್ಥೆ ಮತ್ತು ಅಲ್ಲಿಯೇ ಬುಕ್ಕಿಂಗ್ ಮಾಡಿ ಪಂಬಾದಿಂದ ಬರುತ್ತಿರುವ ಭಕ್ತರು ಅಯ್ಯಪ್ಪನ ದರ್ಶನಕ್ಕೆ ಗಂಟೆಗಟ್ಟಲೇ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆ ಈ ವಿಶೇಷ ಪಾಸ್ ಅನ್ನು ನಿಲ್ಲಿಸಲಾಗಿದೆ ಎಂದು ದೇವಸ್ವಂ ಬೋರ್ಡ್ ಸದಸ್ಯ ಎ ಅಜಿಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಮೊದಲು ಅರಣ್ಯ ಮಾರ್ಗದಿಂದ ನಡೆದುಕೊಂಡು ಬರುವ 5,000 ಭಕ್ತರಿಗೆ ದರ್ಶನ ಸುಲಭಗೊಳಿಸಲು ಈ ವಿಶೇಷ ಪಾಸ್ ವ್ಯವಸ್ಥೆ ಕಲ್ಪಿಸಲಾಗಿತ್ತು. ಅರಣ್ಯ ಮಾರ್ಗದ ಮೂಲಕ ಆಗಮಿಸುವ ಭಕ್ತರ ಸಂಖ್ಯೆ ಕೂಡ ಐದು ಪಟ್ಟು ಹೆಚ್ಚಾಗಿತ್ತು. ಈ ಹಿನ್ನೆಲೆ ವಿಶೇಷ ಪಾಸ್ ನೀಡುವಿಕೆ ಮೇಲೆ ನಿರ್ಬಂಧಗಳನ್ನು ವಿಧಿಸಲಾಯಿತು. ಇದೀಗ ಮುಂದಿನ ಪ್ರಕಟಣೆವರೆಗೆ ವಿಶೇಷ ದರ್ಶನದ ಪಾಸ್ ಅನ್ನು ನೀಡದಿರಲು ನಿರ್ಧರಿಸಲಾಗಿದೆ ಎಂದು ತಿಳಿಸಲಾಗಿದೆ.

ಸಾಂಪ್ರದಾಯಿಕ ಅರಣ್ಯ ಮಾರ್ಗದ ಮೂಲಕ ಕಾಲ್ನಡಿಗೆಯಲ್ಲಿ ಬರುವ ಯಾತ್ರಾರ್ಥಿಗಳಿಗೆ ಸುಲಭ ದರ್ಶನ ವ್ಯವಸ್ಥೆ ಮಾಡುವ ಸಲುವಾಗಿ ಕಳೆದ ತಿಂಗಳು ಈ ಪಾಸ್ ವ್ಯವಸ್ಥೆ ಮಾಡಲಾಗಿತ್ತು. ಅರಣ್ಯ ಇಲಾಖೆಯಿಂದ ಇವರಿಗೆ ವಿಶೇಷ ಟ್ಯಾಗ್ ನೀಡಿ, ವಿಶೇಷ ಮಾನ್ಯತೆ ನೀಡಿ, ದರ್ಶನಕ್ಕೆ ಪ್ರತ್ಯೇಕ ಸಾಲಿನ ವ್ಯವಸ್ಥೆಯನ್ನು ಮಾಡಲಾಗಿತ್ತು.

ವಾರ್ಷಿಕ ಮಕರವುಲಕ್ಕು ಹಬ್ಬದ ಅಂಗವಾಗಿ ಶಬರಿಮಲೆ ಅಯ್ಯಪ್ಪ ದೇಗುಲದ ಬಾಗಿಲನ್ನು ಡಿಸೆಂಬರ್ 30ರಂದು ತೆಗೆಯಲಾಗಿದ್ದು, ಜನವರಿ 14ರ ವರೆಗೆ ಈ ದರ್ಶನವನ್ನು ಅಯ್ಯಪ್ಪ ಭಕ್ತರು ನಡೆಸಬಹುದಾಗಿದೆ. ಡಿಸೆಂಬರ್ 23ರ ಹೊತ್ತಿಗೆ ಈ ಋತುವಿನಲ್ಲಿ ಒಟ್ಟು 30,87,049 ಯಾತ್ರಾರ್ಥಿಗಳು ಅಯ್ಯಪ್ಪ ದೇವಸ್ಥಾನಕ್ಕೆ ಭೇಟಿ ನೀಡಿದ್ದಾರೆ ಎಂದು ಅಲ್ಲಿನ ಆಡಳಿತ ಮಂಡಳಿ ತಿಳಿಸಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಸುಮಾರು 4.46 ಲಕ್ಷ ಭಕ್ತರು ಹೆಚ್ಚು ಭೇಟಿ ನೀಡಿದ್ದಾರೆ. ಮಕರವಿಳಕ್ಕು ಹಬ್ಬದ ಅಂಗವಾಗಿ ಜನವರಿ 13 ಮತ್ತು 14 ರಂದು ವರ್ಚುವಲ್ ಕ್ಯೂ ಬುಕ್ಕಿಂಗ್ ಸಂಖ್ಯೆಯನ್ನು 50,000 ಮತ್ತು 40,000 ಕ್ಕೆ ನಿಗದಿಪಡಿಸಲಾಗಿದೆ.



# ಸುದೀಪ್‌ಗೆ ನಡೆದಿತ್ತು ಎರಡನೇ ಮದುವೆ!

ಕಿಚ್ಚ ಸುದೀಪ್ ಅವರು ಪ್ರಿಯಾ ಅವರ ಜೊತೆ ಹಾಯಾಗಿ ಸಂಸಾರ ನಡೆಸುತ್ತಿದ್ದಾರೆ. ಇವರ ಮಧ್ಯೆ ಒಮ್ಮೆ ಮಸ್ತಾಪ ಬಂದಿದ್ದು ನಿಜ. ಆದರೆ, ಅದನ್ನು ಮರೆತು ಇವರು ಮತ್ತೆ ಒಂದಾಗಿದ್ದಾರೆ. ಇವರು ಹಾಯಾಗಿ ಸಂಸಾರ ನಡೆಸುತ್ತಾ ಇದ್ದಾರೆ.

ಒಮ್ಮೆ ಸುದೀಪ್ ಅವರು ಎರಡನೇ ಮದುವೆ ಆದ ಬಗ್ಗೆ ವರದಿ ಆಗಿತ್ತು. ಈ ವಿಚಾರದ ಬಗ್ಗೆ ಅವರು ಸ್ಪಷ್ಟನೆ ನೀಡಿದ್ದಾರೆ. ಹಲವು ವರ್ಷಗಳ ಬಳಿಕ ಸುದೀಪ್ ಈ ಬಗ್ಗೆ ಮಾತನಾಡಿದ್ದಾರೆ.

ಸೆಲೆಬ್ರಿಟಿ ಎಂದಾಕ್ಷಣ ವದಂತಿಗಳು ಸರ್ವೇ ಸಾಮಾನ್ಯ. ಇದಕ್ಕೆ ಕಿಚ್ಚ ಸುದೀಪ್ ಕೂಡ ಹೊರತಾಗಿಲ್ಲ. ಸಾಮಾನ್ಯವಾಗಿ, ಸಿನಿಮಾ ವಿಚಾರಗಳ ಬಗ್ಗೆ ವದಂತಿ ಹಬ್ಬಿದರೆ ಸೆಲೆಬ್ರಿಟಿಗಳು ಅಷ್ಟಾಗಿ ತಲೆಕೆಡಿಸಿಕೊಳ್ಳುವುದಿಲ್ಲ. ಅದೇ ವೈಯಕ್ತಿಕ ವಿಚಾರ ಎಂದಾಗ ಸೆಲೆಬ್ರಿಟಿಗಳಿಗೆ ಚಿಂತೆ ಉಂಟಾಗುತ್ತದೆ. ಸುದೀಪ್ ಅವರು ಈಗ ಆ ಬಗ್ಗೆ ಮಾತನಾಡಿದ್ದಾರೆ.

ಸುದೀಪ್ ಎರಡನೇ ಮದುವೆ ಆಗಿದ್ದಾರೆ ಎಂಬ ಸುದ್ದಿ ಈ ಮೊದಲು ಹುಟ್ಟಿಕೊಂಡಿತ್ತು. ನಟಿಯ ಜೊತೆ ಈ ವಿವಾಹ ನಡೆದಿತ್ತು ಎಂದು ಹೇಳಲಾಗಿತ್ತು. ಇದು ಹಳೆಯ ಸುದ್ದಿ. ಈ ಬಗ್ಗೆ ಸುದೀಪ್ ಅವರು ಈಗ ಮೌನಮುರಿದಿದ್ದಾರೆ. ಮಿರ್ಚಿ ಕನ್ನಡದಲ್ಲಿ ಮಾತನಾಡಿದ್ದರು.

'ನಟಿಯ ಜೊತೆ ಸುದೀಪ್‌ಗೆ ಅಫೇರ್ ಇತ್ತು, ದೇವಸ್ಥಾನದಲ್ಲಿ ಮದುವೆ ಆದರು ಎಂಬ ಸುದ್ದಿ ಇತ್ತಲ್ಲ' ಎನ್ನುವ ಪ್ರಶ್ನೆ ಎದುರಾಯಿತು. 'ಹೌದು ಮದುವೆ ಆಗಿದೆ. ಆದರೆ, ಅವರು (ಮದುವೆ ಆದ ಹುಡುಗಿ) ಮನೆಗೆ ಬಂದಿಲ್ಲ. ನಾನು ದೇವಸ್ಥಾನಕ್ಕೆ ಹೋಗಿಲ್ಲ, ತಾಳಿಯನ್ನೂ ಕಟ್ಟಿಲ್ಲ. ಆದರೂ ಮದುವೆ ಆಗಿದೆ. ವರ್ಚುವಲ್ ಮದುವೆ ಎಂದು ಹೇಳೋಕೆ ಆಗ ವರ್ಚುವಲ್ ಎನ್ನುವ ಕಾನ್ಸೆಪ್ಟ್ ಇರಲಿಲ್ಲ' ಎಂದಿದ್ದಾರೆ ಸುದೀಪ್.

'ಪೇಪರ್‌ನಲ್ಲಿ ಒಂದು ಆರ್ಟಿಕಲ್ ಬಂದಿತ್ತು. ಪ್ರಿಯಾ ಜೊತೆ ಕುಳಿತು ಓದುತ್ತಿದ್ದೆ. ಯಾವುದೋ ಹೀರೋ ಎರಡನೇ ಮದುವೆ ಆಗಿದ್ದಾನಂತೆ ಎಂಬ ಸುದ್ದಿ ಅದಾಗಿತ್ತು. ಓದುತ್ತಾ ಹೋದಂತೆ ಕೊನೆಯಲ್ಲಿ ಗೊತ್ತಾಗಿದ್ದು ಅದು ನಾನೇ ಅಂತ. ನಾನು ಹಾಗೂ ಪ್ರಿಯಾ ಇದನ್ನು ನೋಡಿ ನಕ್ಕಿದ್ದೆವು. ನಾನು ಮದುವೆ ಆದ ಹುಡುಗಿ ಇನ್ನು ಮನೆಗೆ ಬರಲೇ ಇಲ್ಲ' ಎಂದು ಸುದೀಪ್ ಫನ್ ಆಗಿ ಹಳೆಯ ಘಟನೆ ಹೇಳಿದ್ದಾರೆ.

ಸಿನಿಮಾ ವಿಚಾರಕ್ಕೆ ಸುದೀಪ್ ನಟನೆಯ 'ಮ್ಯಾಕ್ಸ್' ಭರ್ಜರಿ ಯಶಸ್ಸು ಕಂಡಿದೆ. ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಒಳ್ಳೆಯ ಗಳಿಕೆ ಮಾಡುತ್ತಿದೆ. ಈ ಬಾರಿಯ ಕ್ರಿಸ್‌ಮಸ್ ಸಂದರ್ಭದಲ್ಲಿ ರಿಲೀಸ್ ಆಗಿ ಗೆದ್ದ ಖ್ಯಾತಿ ಈ ಚಿತ್ರಕ್ಕೆ ಸಿಕ್ಕಿದೆ.

# ಮಾಧುರಿ ಮದುವೆ ಸುದ್ದಿ ಕೇಳಿ ಅತ್ತಿದ್ರು ನಟಿಯ ತಂದೆ

ಮುಂಬೈ: ಧಕ್ ಧಕ್ ಗರ್ಲ್ ಮಾಧುರಿ ದೀಕ್ಷಿತ್ ಯಾರಿಗೆ ಇಷ್ಟ ಇಲ್ಲ ಹೇಳಿ. 60ರ ಸನೀಹದಲ್ಲಿದ್ದರೂ ಮಾಧುರಿ ದೀಕ್ಷಿತ್, 20ರ ಯುವತಿಯೂ ನಾಚುವಂತಹ ಆಕರ್ಷಕ ಸೌಂದರ್ಯವನ್ನು ಹೊಂದಿದ್ದಾರೆ.



ಸಿನಿಮಾದ ಉತ್ತುಂಗದಲ್ಲಿರುವಾಗಲೇ ವೈವಾಹಿಕ ಜೀವನಕ್ಕೆ ಕಾಲಿಟ್ಟ ನಟಿ ಮಾಧುರಿ ದೀಕ್ಷಿತ್, ಗಂಡನ ಜೊತೆ ವಿದೇಶಕ್ಕೆ ತೆರಳಿದ್ದರು. ಮಾಧುರಿ ದೀಕ್ಷಿತ್ ಮದುವೆಯೂ ಆಪ್ತರ ಸಮ್ಮುಖದಲ್ಲಿಯೇ ನಡೆದಿತ್ತು. ಹಾಗಾಗಿ ಮದುವೆ ಬಳಿಕ ಈ ಸುದ್ದಿ ಬಹಿರಂಗವಾಗಿತ್ತು. ಕನಸಿನ ಕನ್ಯೆ, ಎಷ್ಟೋ ಯುವಕರ ಹೃದಯ ಕದ್ದ ಚೆಲುವೆ ಮಾಧುರಿ ದೀಕ್ಷಿತ್ ಮದುವೆ ಸುದ್ದಿ ಕೇಳಿ ಎಲ್ಲರೂ ಶಾಕ್ ಆಗಿದ್ದರು. ಶಾಕ್ ಆದವರ ಪೈಕಿ ಖ್ಯಾತ ನಟಿಯ ತಂದೆಯೂ ಸಹ ಒಬ್ಬರು.

ಮಾಧುರಿ ದೀಕ್ಷಿತ್ ಮದುವೆ ವಿಷಯ ತಿಳಿದು ನನ್ನ ತಂದೆ ಬಾತ್‌ರೂಮ್‌ಗೆ ಕಣ್ಣೀರು ಹಾಕಿದ್ದರು. ಹೊರಗೆ ಬಂದಾಗ ಅವರ ಕಣ್ಣಿನ ಅಂಚಿನಲ್ಲಿ ನೀರು ಇತ್ತು ಎಂದು ನಟಿ ಹೇಳಿದ್ದರು. ಈ ವಿಷಯ ಹೇಳುವಾಗ ಮಾಧುರಿ ದೀಕ್ಷಿತ್ ಸಲ ಅಲ್ಲಿಯೇ ಇದ್ದಿದ್ದರು. ಸದ್ಯ ಈ ಹಳೆ ಸಂದರ್ಶನದ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿದೆ.

ಮಾಧುರಿ ದೀಕ್ಷಿತ್ ಮದುವೆ ಸುದ್ದಿ ಕೇಳಿ ಕಣ್ಣೀರು ಹಾಕಿದ್ದು ಬಾಲಿವುಡ್ ಖ್ಯಾತ ನಟಿ ದೀಪಿಕಾ ಪಡುಕೋಣೆ ತಂದೆ ಪ್ರಕಾಶ್ ಪಡುಕೋಣೆ.

ತಾಯಿಯಾಗಿರುವ ಸಂತಸದಲ್ಲಿರುವ ದೀಪಿಕಾ ಪಡುಕೋಣೆ ಸಿನಿಮಾಗಳಿಂದ ಬ್ರೇಕ್ ತೆಗೆದುಕೊಂಡು ತಾಯ್ತನವನ್ನು ಆನಂದಿಸುತ್ತಿದ್ದಾರೆ. ಬಾಲಿವುಡ್‌ಗೂ ತೆರಳುವ ಮುನ್ನ ದೀಪಿಕಾ ಪಡುಕೋಣೆ, ಕನ್ನಡದ ಐಶ್ವರ್ಯಾ ಚಿತ್ರದಲ್ಲಿ ನಟ ಉಪೇಂದ್ರ ಅವರಿಗೆ ಜೊತೆಯಾಗಿ ನಟಿಸಿದ್ದರು. ಓಂ ಶಾಂತಿ ಓಂ ಸಿನಿಮಾದಲ್ಲಿ ಶಾರೂಖ್ ಖಾನ್ ಜೊತೆ ನಟಿಸುವ ಅವಕಾಶ ಗಿಟ್ಟಿಸಿಕೊಂಡಿದ್ದ ದೀಪಿಕಾ ಪಡುಕೋಣೆ ಹಿಂದಿರುಗಿಯೇ ನೋಡಿಲ್ಲ.

ವೈರಲ್ ವಿಡಿಯೋದಲ್ಲಿ ವೇದಿಕೆ ಮೇಲೆ ಮಾಧುರಿ ದೀಕ್ಷಿತ್ ಮತ್ತು ದೀಪಿಕಾ ಪಡುಕೋಣೆ ಕುಳಿತಿರುತ್ತಾರೆ. ಮಾಧುರಿ ದೀಕ್ಷಿತ್ ಅವರನ್ನು ಉದ್ದೇಶಿಸಿ ಮಾತನಾಡುತ್ತಿರುವ ಸಂದರ್ಭದಲ್ಲಿ ದೀಪಿಕಾ ಈ ವಿಷಯವನ್ನು ಹಂಚಿಕೊಂಡಿದ್ದಾರೆ. ನಿಮ್ಮ ಮದುವೆ ಸುದ್ದಿ ಪತ್ರಿಕೆಯಲ್ಲಿ ಬಂದಾಗ, ನನ್ನ ತಂದೆ ಪ್ರಕಾಶ್ ಪಡುಕೋಣೆ ಶಾಕ್ ಆಗಿದ್ದರು. ಬಾತ್‌ರೂಮ್‌ಗೆ ಹೋಗಿ ಕಣ್ಣೀರು ಹಾಕಿದ್ದರು. ಹೊರಗೆ ಬಂದಾಗ ಅವರ ಕಣ್ಣುಗಳು ಒದ್ದೆಯಾಗಿದ್ದವು. ಇಂದಿಗೂ ಮನೆಯಲ್ಲಿ ಈ ವಿಷಯವನ್ನಿಟ್ಟುಕೊಂಡು ತಂದೆಯವರನ್ನು ತಮಾಷೆ ಮಾಡುತ್ತಿರುತ್ತೇವೆ ಎಂದು ದೀಪಿಕಾ ಹೇಳಿದ್ದರು. ಕಣ್ಣೀರು ಹಾಕಿರುವ ವಿಷಯವನ್ನು ವೇದಿಕೆಯಲ್ಲಿ ರಿವೀಲ್ ಮಾಡೋದಾಗಿ ಹೇಳಿ ಬಂದಿದ್ದೇನೆ ಎಂದು ಹೇಳುತ್ತಾ ದೀಪಿಕಾ ನಕ್ಕರು. ನಮ್ಮ ತಂದೆ ಪ್ರಕಾಶ್ ಪಡುಕೋಣೆ ನಿಮ್ಮ ದೊಡ್ಡ ಅಭಿಮಾನಿ. ನಾನು ಸಹ ನಿಮ್ಮ ಅಭಿಮಾನಿ ಎಂದು ದೀಪಿಕಾ ಪಡುಕೋಣೆ ಹೇಳಿದ್ದರು.



# ಏಂಜೆಲಿನಾ ಜೋಲಿ–ಬ್ರಾಡ್ ಪಿಟ್ ವಿಚ್ಛೇದನ!

ತಮ್ಮ ವಿಚ್ಛೇದನದ ಬಗ್ಗೆ ಕಳೆದ ಎಂಟು ವರ್ಷಗಳಿಂದ ಕಾನೂನು ಹೋರಾಟದಲ್ಲಿ ತೊಡಗಿದ್ದ ಏಂಜಲೀನಾ ಜೋಲಿ ಹಾಗೂ ಬ್ರಾಡ್ ಪಿಟ್ ಕೊನೆಗೂ ಅಧಿಕೃತವಾಗಿ ಸಂಸಾರಕ್ಕೆ ವಿದಾಯ ಘೋಷಿಸಿದ್ದಾರೆ.

ಏಂಜಲೀನಾ ಜೋಲಿ ಅವರ ವಕೀಲರು ಇಬ್ಬರ ನಡುವೆ ವಿಚ್ಛೇದನ ಆಗಿರೋದನ್ನ ಖಚಿತಪಡಿಸಿದ್ದಾರೆ. ಡೈಲಿ ಮೇಲ್ ಜೊತೆ ಮಾತನಾಡಿರುವ ವಕೀಲರು ನಟಿ ದೀರ್ಘ ಕಾನೂನು ಹೋರಾಟದಿಂದ ತುಂಬಾ ದಣಿದಿದ್ದು, ಈಗ ಎಲ್ಲವೂ ಪರಿಹಾರವಾಗಿದೆ ಎಂದಿದ್ದಾರೆ. ಎಂಟು ವರ್ಷಗಳ ಹಿಂದೆ, ಏಂಜಲೀನಾ ಅವರು ಬ್ರಾಡ್ ಪಿಟ್ ಅವರಿಂದ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು.



ಆಕೆ ಮತ್ತು ಆಕೆಯ ಮಕ್ಕಳು ಬ್ರಾಡ್ ಪಿಟ್ ಅವರೊಂದಿಗೆ ಹಂಚಿಕೊಂಡಿದ್ದ ಎಲ್ಲಾ ಆಸ್ತಿಗಳನ್ನು ತೊರೆದಿದ್ದಾರೆ. ಅಂದಿನಿಂದಲೂ ಆಕೆ ಶಾಂತಿಯನ್ನು ಕಂಡುಕೊಳ್ಳಲು ಹಾಗೂ ಕುಟುಂಬದೊಂದಿಗೆ ಈ ನೋವಿನಿಂದ ಹೊರಬರಲು ಪ್ರಯತ್ನಪಟ್ಟಿದ್ದಳು ಎಂದು ವಕೀಲರು ತಿಳಿಸಿದ್ದಾರೆ. ಇಬ್ಬರ ನಡುಇನ ಎಲ್ಲಾ ವಿಚಾರಗಳು ಇತ್ಯರ್ಥವಾಗಿದ್ದರೂ, ಫ್ರಾನ್ಸ್‌ನಲ್ಲಿರುವ ಚಟೌ ಮಿರಾವಲ್ ವೈನ್‌ಯಾರ್ಡ್‌ನ ವಿವಾದ ಇನ್ನೂ ಮುಂದುವರಿದಿರುವ ಹಾಕೆ ಕಾಣುತ್ತಿದ್ದು, ಇದು ಇಬ್ಬರ ನಡುವೆ ಮತ್ತೊಂದು ಸುತ್ತಿನ ಕಾನೂನು ಸಮರಕ್ಕೆ ಕಾರಣವಾಗಬಹುದು.

ಈ ಹಿಂದಿನ ವರದಿಗಳ ಪ್ರಕಾರ, ನನ್ನ ಒಪ್ಪಿಗೆಯಿಲ್ಲದೆ ವೈನ್‌ಯಾರ್ಡ್‌ನಲ್ಲಿದ್ದ ನನ್ನ ಪಾಲನ್ನು ಮಾರಾಟ ಮಾಡಿದ್ದಾಳೆ ಎಂದು ಬ್ರಾಡ್ ಪಿಟ್, ಏಂಜೆಲೀನಾ ಜೋಲಿ ವಿರುದ್ಧ ದೂರಿದ್ದರು.ದಂಪತಿಗಳು ಮಧ್ಯಸ್ಥಿಕೆಯಿಂದ ಅಥವಾ ತೀರ್ಪುಗಾರರ ವಿಚಾರಣೆಯ ಮೂಲಕ ಪ್ರಕರಣವನ್ನು ಹೇಗೆ ಇತ್ಯರ್ಥಪಡಿಸಲು ಬಯಸುತ್ತಾರೆ ಅನ್ನೋದನ್ನೂ ತಿಳಿಸಿದ್ದರು.

ಆಕೆ ಎಂದೂ ಬ್ರಾಡ್ ಪಿಟ್ ವಿರುದ್ಧ ಕೆಟ್ಟದಾಗಿ ಸಾರ್ವಜನಿಕವಾಗಿಯಾಗಲಿ, ಖಾಸಗಿಯಾಗಲಿ ಮಾತನಾಡಿರಲಿಲ್ಲ. ಆಕೆಯ ಮಕ್ಕಳು ಈಗಾಗಲೇ ದೊಡ್ಡದಾಗಿದ್ದಾರೆ. ಶಕ್ತಿ ಹಾಗೂ ಶ್ರೀಮಂತಿಕೆ ಹೊಂದಿರುವವರ ಎದುರು ನಮ್ಮ ದನಿಗೆ ಬೆಲೆ ಇರೋದಿಲ್ಲ ಎಂದು ಅವರಿಗೂ ಗೊತ್ತಾಗಿದೆ. ಈ ನೋವು ಲೆಕ್ಕಕ್ಕೆ ಬರೋದಿಲ್ಲ ಎಂದು ವಕೀಲರ ಎದುರು ಜೋಲಿ ಹೇಳಿದ್ದಾರೆ ಎನ್ನಲಾಗಿದೆ.

ಏಂಜಲೀನಾ ಮತ್ತು ಬ್ರಾಡ್‌ಗೆ ಆರು ಮಕ್ಕಳಿದ್ದಾರೆ – ಮ್ಯಾಡಾಕ್ಸ್, ಪ್ಯಾಕ್ಸ್, ಜಹರಾ, ಶಿಲೋ, ವಿವಿಯೆನ್ ಮತ್ತು ನಾಕ್ಸ್. ಅವರು ತಮ್ಮ ಪರವಾಗಿ ಮಾತನಾಡಲು ಪ್ರೋತ್ಸಾಹಿಸಿದ್ದಾರೆ, ಆದರೆ ನಟಿ ಕಾನೂನನ್ನು ಬದಲಾಯಿಸಲು ಮತ್ತು ಸಾರ್ವಜನಿಕ ಕಥೆಗಳನ್ನು ಮಾರಾಟ ಮಾಡದಂತೆ ಬಲವಾಗಿ ಒತ್ತಿಹೇಳಿದ್ದಾರೆ.

2016ರ ಸೆಪ್ಟೆಂಬರ್‌ನಲ್ಲಿ ವಿಚ್ಛೇದನ ಕೋರಿ ಅರ್ಜಿಯನ್ನು ದಾಖಲು ಮಾಡಲಾಗಿತ್ತು. ಎರಡು ವರ್ಷದ ಮದುವೆ ಹಾಗೂ ದಶಕಗಳ ಕಾಲದ ರಿಲೇಷನ್‌ಷಿಪ್ ಬಳಿಕ ಈ ನಿರ್ಧಾರ ಮಾಡಲಾಗಿತ್ತು. 2019ರಲ್ಲಿ ತಾವಿಬ್ಬರೂ ಸಿಂಗಲ್ ಆಗಿರುವುದಾಗಿ ಕಾನೂನಾತ್ಮಕವಾಗಿ ತಿಳಿಸಿದ್ದರು.

ಇದು ಬ್ರಾಡ್ ಪಿಟ್ ಅವರ ಎರಡನೇ ಮದುವೆ ಮತ್ತು ಏಂಜಲೀನಾ ಜೋಲೀ ಅವರ ಮೂರನೇ ವಿವಾಹವಾಗಿತ್ತು. ಹಾಲಿವುಡ್ ನಟಿ ಜೆನ್ನಿಫರ್ ಅನಿಸ್ಟನ್ ಅವರೊಂದಿಗಿನ ಸಂಬಂಧದ ನಂತರ ಬ್ರಾಡ್ ಏಂಜಲೀನಾಗೆ ಹತ್ತಿರವಾದರು. ನಟರಾದ ಬಿಲ್ಲಿ ಬಾಬ್ ಥಾರ್ನ್ಟನ್ ಮತ್ತು ಜಾನಿ ಲೀ ಮಿಲ್ಲರ್ ಅವರೊಂದಿಗೆ ಏಂಜಲೀನಾ ಮೊದಲು ಸಂಬಂಧ ಹೊಂದಿದ್ದರು.



# 'ಕರಾವಳಿ' ಸಿನಿಮಾದ ಟೀಸರ್ ಬಿಡುಗಡೆ

ಪ್ರಜ್ವಲ್ ದೇವರಾಜ್ ನಟನೆಯ 'ಕರಾವಳಿ' ಸಿನಿಮಾ ಒಂದಷ್ಟು ಕಾರಣಗಳಿಂದ ನಿರೀಕ್ಷೆ ಮೂಡಿಸಿದ್ದು, ಸಿನಿಮಾದ ಕೆಲಸಗಳು ಬಿರುಸಿನಿಂದ ಸಾಗುತ್ತಿವೆ.

2025ರ ಹೊಸ ವರ್ಷದ ಸಲುವಾಗಿ 'ಕರಾವಳಿ' ಚಿತ್ರತಂಡದಿಂದ ಹೊಸ ಟೀಸರ್ ಬಿಡುಗಡೆ ಮಾಡಲಾಗಿದ್ದು, 'ಡೈನಾಮಿಕ್ ಪ್ರಿನ್ಸ್' ಪ್ರಜ್ವಲ್ ದೇವರಾಜ್ ಅವರು ಈ ಸಿನಿಮಾದಲ್ಲಿ ಬೇರೆ ಬೇರೆ ಗೆಟಪ್‌ಗಳ ಮೂಲಕ ಕಾಣಿಸಿಕೊಳ್ಳಲಿದ್ದಾರೆ.

'ಕರಾವಳಿ' ಟೀಸರ್‌ನಲ್ಲಿ ನಾಯಕಿ, ನಾಯಕಿ, ವಿಲನ್ ಅಥವಾ ಯಾವುದೇ ಒಂದು ಪಾತ್ರ ಹೈಲೈಟ್ ಆಗಿಲ್ಲ. ಬದಲಿಗೆ, ಒಂದು ಕುರ್ಚಿಯೇ ಕೇಂದ್ರ ಸ್ಥಾನ ಪಡೆದುಕೊಂಡಿದೆ.

'ಕರಾವಳಿ' ಟೀಸರ್‌ನಲ್ಲಿ ಪ್ರತಿಷ್ಠೆಯ ಒಂದು ಕುರ್ಚಿ ಹೈಲೆಟ್ ಆಗಿದೆ. 'ಅದು ಬರೀ ಕುರ್ಚಿಯಲ್ಲ.. ಪ್ರತಿಷ್ಠೆಯ ಪಿಚಾಚಿ' ಎಂಬ ಡೈಲಾಗ್ ಮೂಲಕ ಟೀಸರ್ ಆರಂಭ ಆಗುತ್ತದೆ. ಹಾಗಾದರೆ ಆ ಖುರ್ಚಿಯ ಹಿಂದೆ ಇರುವ ಕಥೆ ಏನು ಎಂಬ ಕೌತುಕ ಮೂಡಿಸುವ ರೀತಿಯಲ್ಲಿ ಟೀಸರ್ ಸಿದ್ಧವಾಗಿದೆ. 'ಕರಾವಳಿ' ಚಿತ್ರಕ್ಕೆ ಈಗಾಗಲೇ ಶೇಕಡ 80ರಷ್ಟು ಶೂಟಿಂಗ್ ಮುಕ್ತಾಯ ಆಗಿದೆ. ಈ ಚಿತ್ರದಲ್ಲಿ ಪ್ರಜ್ವಲ್ ದೇವರಾಜ್‌ಗೆ ಜೋಡಿಯಾಗಿ ಸಂಪದಾ ನಟಿಸಿದ್ದಾರೆ.

'ಕರಾವಳಿ' ಸಿನಿಮಾದಲ್ಲಿ ಇರುವುದು ಕಂಬಳ ಕುರಿತ ಕಥೆ. ಈ ಮೊದಲು ಬಿಡುಗಡೆ ಆಗಿದ್ದ ಟೀಸರ್‌ನಲ್ಲಿ ಒಂದು ಮಗು ಜನಿಸುತ್ತದೆ,

ಅದೇ ಸಮಯದಲ್ಲಿ ಕೊಟ್ಟಿಗೆಯಲ್ಲಿ ಒಂದು ಕರುವಿನ ಜನನ ಕೂಡ ಆಗುತ್ತದೆ. ಈಗ ಬಂದಿರುವ ಹೊಸ ಟೀಸರ್ ಆ ಕಥೆಯ ಮುಂದುವರಿದ ಭಾಗದಂತಿದೆ. ಆ ಮಗು ಹುಟ್ಟಿದಾಗಿನಿಂದ ಪ್ರತಿಷ್ಠೆಯ ಕುರ್ಚಿಯನ್ನು ನೋಡುತ್ತ ಬೆಳೆಯುತ್ತದೆ.

ಕುರ್ಚಿಯ ಮೇಲೆ ಕಣ್ಣಿಟ್ಟವರಿಗೆ ಏನಾಗುತ್ತದೆ ಎಂಬುದನ್ನು ಸಹ ಟೀಸರ್‌ನಲ್ಲಿ ಹೇಳಲಾಗಿದೆ.

ಟೀಸರ್‌ನಲ್ಲಿ ಮಿತ್ರ, ರಮೇಶ್ ಇಂದಿರ, ಎಂ.ಕೆ. ಮಠ, ಪ್ರಜ್ವಲ್ ದೇವರಾಜ್ ಅವರ ಪಾತ್ರಗಳು ಕುತೂಹಲ ಹುಟ್ಟಿಸಿವೆ. ಈ ಚಿತ್ರದಲ್ಲಿ ಪ್ರಜ್ವಲ್ ದೇವರಾಜ್ ಅವರ 3 ರೀತಿಯ ಲುಕ್ ಬಹಿರಂಗವಾಗಿದೆ.

ಯಕ್ಷಗಾನ, ಕಂಬಳ, ಮಹಿಷಾಸುರ ಹೀಗೆ 3 ಬೇರೆ ಬೇರೆ ಗೆಟಪ್‌ನಲ್ಲಿ ಅವರ ಪೋಸ್ಟರ್‌ಗಳು ಬಂದಿವೆ. ಈ ಎಲ್ಲ ಕಾರಣಗಳಿಂದಾಗಿ ಅವರ ಅಭಿಮಾನಿಗಳಿಗೆ ಈ ಸಿನಿಮಾ ಮೇಲೆ ನಿರೀಕ್ಷೆ ಜಾಸ್ತಿ ಇದೆ.

ಸಚಿನ್ ಬಸ್ರೂರು ಅವರು ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ಅಭಿಮನ್ಯು ಸದಾನಂದನ್ ಅವರು ಛಾಯಾಗ್ರಹಣ ಮಾಡಿದ್ದಾರೆ. ಚಿತ್ರದ ಶೀರ್ಷಿಕೆಯೇ ಸೂಚಿಸುವಂತೆ ಕರಾವಳಿ ಸುತ್ತಮುತ್ತನೇ ಚಿತ್ರೀಕರಣ ಮಾಡಲಾಗಿದೆ.

ಗುರುದತ್ ಗಾಣಿಗ ಅವರ ನಿರ್ದೇಶನದ ಜತೆಗೆ 'ಗುರುದತ್ ಗಾಣಿಗ ಫಿಲ್ಮ್ಸ್' ಹಾಗೂ 'ವಿಕೆ ಫಿಲ್ಮ್ಸ್' ಸಹಯೋಗದಲ್ಲಿ ಸಿನಿಮಾ ನಿರ್ಮಾಣ ಆಗುತ್ತಿದೆ. ಮನುಷ್ಯ ಮತ್ತು ಪ್ರಾಣಿ ನಡುವಿನ ಸಂಘರ್ಷದ ಕಥೆ ಈ ಚಿತ್ರದಲ್ಲಿ ಇರಲಿದೆ.



# ಲವ್ ಫೆಯ್ಲ್ಯೂರ್

ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಮತ್ತು ಅಕ್ಷಯ್ ಕುಮಾರ್ ಅವರ ಪ್ರೇಮ ಮತ್ತು ವಂಚನೆಯ ಕಥೆ ಮತ್ತೆ ಮುನ್ನೆಲೆಗೆ ಬಂದಿದೆ. ಶಿಲ್ಪಾ ಶೆಟ್ಟಿ ಅವರು ಸಂದರ್ಶನದಲ್ಲಿ ಅಕ್ಷಯ್ ನನ್ನನ್ನು ಬಳಸಿಕೊಂಡು ಬಿಸಾಡಿದ ಎಂಬ ಆರೋಪ ಮಾಡಿದ್ದಾರೆ.


ಪ್ರೀತಿ–ಪ್ರೇಮದ ಕಥೆಗಳು ಬಾಲಿವುಡ್‌ನಲ್ಲಿ ಸಾಮಾನ್ಯ. ಸಿನಿಮಾಗಳಲ್ಲಿ ಒಟ್ಟಿಗೆ ಕೆಲಸ ಮಾಡುವಾಗ ಹೀರೋ–ಹೀರೋಯಿನ್‌ಗಳ ನಡುವೆ ಪ್ರೀತಿ ಮೂಡುವುದು ಸಾಮಾನ್ಯವಾಗಿ ಕೇಳಿಬರುತ್ತದೆ. ಕೆಲವು ವರ್ಷಗಳ ಡೇಟಿಂಗ್ ನಂತರ ಬ್ರೇಕಪ್ ಆಗಿದೆ ಎಂಬ ಸುದ್ದಿ ಕೂಡ ಕೇಳಿಬರುತ್ತದೆ.

ಶಿಲ್ಪಾ ಶೆಟ್ಟಿ ಅವರ ಕಥೆಯೂ ಹೀಗೆಯೇ ಇದೆ. ಅಕ್ಷಯ್ ಕುಮಾರ್ ಜೊತೆ ಶಿಲ್ಪಾ ಶೆಟ್ಟಿ ಅವರ ಪ್ರೇಮ ಪ್ರಸಂಗವು ಬಾಲಿವುಡ್‌ನ ಗಾಸಿಪ್‌ಗಳಲ್ಲಿ ದೀರ್ಘಕಾಲದವರೆಗೆ ಸುದ್ದಿಯಾಗಿತ್ತು.

ಇಬ್ಬರೂ ಮದುವೆಯಾಗಲು ಯೋಜನೆ ರೂಪಿಸುತ್ತಿದ್ದಾರೆ ಎಂದು ಹೇಳಲಾಗಿತ್ತು. ನಂತರ ಏನಾಯಿತೆಂದರೆ ಶಿಲ್ಪಾ ಅವರ ಬಣ್ಣದ ಜಗತ್ತೇ ನಾಶವಾಯಿತು.

ಅಕ್ಷಯ್ ಅವರ ನಿಜವಾದ ಮುಖ ಅವರ ಮುಂದೆ ಬಯಲಾದಾಗ ಅವರು ಸಂಪೂರ್ಣವಾಗಿ ಕುಗ್ಗಿ ಹೋಗಿದ್ದರು. ಶಿಲ್ಪಾ–ಅಕ್ಷಯ್ ಅವರ ಪ್ರೇಮ ಪ್ರಸಂಗ ಮತ್ತು ಬ್ರೇಕಪ್ ಕಥೆಯನ್ನು ತಿಳಿದುಕೊಳ್ಳೋಣ, ಇದರಲ್ಲಿ ಶಿಲ್ಪಾ ಅವರು ಅಕ್ಷಯ್ ತಮ್ಮನ್ನು ಬಳಸಿಕೊಂಡು ಬಿಸಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ಶಿಲ್ಪಾ ಶೆಟ್ಟಿ ಅವರು ಶಾರುಖ್ ಖಾನ್ ಅವರ ಸಸ್ಪೆನ್ಸ್ ಥ್ರಿಲ್ಲರ್ ಚಿತ್ರ 'ಬಾಜಿಗರ್' ಮೂಲಕ ಬಾಲಿವುಡ್‌ಗೆ ಪಾದಾರ್ಪಣೆ ಮಾಡಿದರು.



ಶೀಘ್ರದಲ್ಲೇ ಅವರಿಗೆ ಅಕ್ಷಯ್ ಕುಮಾರ್ ಜೊತೆ ಕೆಲಸ ಮಾಡುವ ಅವಕಾಶ ಸಿಕ್ಕಿತು. ಇಬ್ಬರೂ ಒಟ್ಟಿಗೆ ನಟಿಸಿದ ಮೊದಲ ಚಿತ್ರ 'ಮೈ ಖಿಲಾಡಿ ತೂ ಅನಾಡಿ'. ಚಿತ್ರ ಹಿಟ್ ಆಯಿತು, ಜೊತೆಗೆ ಅಕ್ಷಯ್–ಶಿಲ್ಪಾ ಜೋಡಿಯನ್ನು ಪ್ರೇಕ್ಷಕರು ಮೆಚ್ಚಿಕೊಂಡರು.

'ಮೈ ಖಿಲಾಡಿ ತೂ ಅನಾಡಿ' ಚಿತ್ರದ ಚಿತ್ರೀಕರಣದ ಸಮಯದಲ್ಲಿ ಇಬ್ಬರೂ ಹತ್ತಿರವಾದರು. ಚಿತ್ರ ಬಿಡುಗಡೆಯಾಗುವ ಮೊದಲೇ ಇಬ್ಬರ ಪ್ರೇಮ ಪ್ರಸಂಗದ ಬಗ್ಗೆ ಚರ್ಚೆಗಳು ಆರಂಭವಾದವು. ಆದರೆ, ಈ ಸಮಯದಲ್ಲಿ ಅಕ್ಷಯ್ ರವೀನಾ ಟಂಡನ್ ಅವರನ್ನೂ ಡೇಟ್ ಮಾಡುತ್ತಿದ್ದರು. ನಂತರ 1999 ರಲ್ಲಿ ಅವರು ಟ್ವಿಂಕಲ್ ಖನ್ನಾ ಜೊತೆ 'ಇಂಟರ್ನ್ಯಾಷನಲ್ ಖಿಲಾಡಿ'ಯಲ್ಲಿ ಕೆಲಸ ಮಾಡಿದರು. ಅಕ್ಷಯ್–ಟ್ವಿಂಕಲ್ ಅವರ ಪ್ರೇಮಕಥೆ ಶಿಲ್ಪಾ ಅವರ ಕಿವಿಗೆ ಬಿತ್ತು. ಇದನ್ನು ಕೇಳಿ ಅವರು ತುಂಬಾ ಬೇಸರಗೊಂಡರು. ಅವರು ಅಕ್ಷಯ್ ಜೊತೆಗಿನ ಸಂಬಂಧವನ್ನು ಕಡಿದುಕೊಂಡರು ಮತ್ತು ಸ್ವಲ್ಪ ಸಮಯದ ನಂತರ ಅಕ್ಷಯ್ ಟ್ವಿಂಕಲ್ ಅವರನ್ನು ವಿವಾಹವಾದರು.

2000 ರಲ್ಲಿ ಶಿಲ್ಪಾ ಶೆಟ್ಟಿ ಅವರು ನೀಡಿದ ಸಂದರ್ಶನ ವೊಂದರಲ್ಲಿ ಅಕ್ಷಯ್ ಕುಮಾರ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದರು. ಸಂದರ್ಶನದ ಸಮಯದಲ್ಲಿ ಶಿಲ್ಪಾ ಭಾವುಕರಾದರು. ಅಕ್ಷಯ್ ತಮ್ಮನ್ನು ಮೋಸ ಮಾಡಿದ್ದಾರೆ ಮತ್ತು ವಂಚಿಸಿದ್ದಾರೆ ಎಂದು ಹೇಳಿದರು. ಅಕ್ಷಯ್ ಅವರ ವಂಚನೆಯ ಬಗ್ಗೆ ತಿಳಿದಾಗ ತಾನು ಎಲ್ಲಾ ಸಂಬಂಧಗಳನ್ನು ಕಡಿದುಕೊಂಡಿದ್ದಾಗಿ, ಅಷ್ಟೇ ಅಲ್ಲ ವೃತ್ತಿಪರವಾಗಿಯೂ ಅಕ್ಷಯ್ ಜೊತೆ ಕೆಲಸ ಮಾಡುವುದನ್ನು ನಿಲ್ಲಿಸಿದ್ದಾಗಿ ಶಿಲ್ಪಾ ಹೇಳಿದ್ದರು.

ಶಿಲ್ಪಾ ಏನು ಹೇಳಿದ್ದಾರೆಂದರೆ 'ಅಕ್ಷಯ್ ನನ್ನನ್ನು ಬಳಸಿಕೊಂಡು ನಂತರ ಬೇರೆಯವರು ಸಿಕ್ಕಾಗ ನನ್ನನ್ನು ಬಿಟ್ಟು ಹೋದರು. ನಾನು ಅವರ ಮೇಲೆ ತುಂಬಾ ಕೋಪಗೊಂಡಿದ್ದೇನೆ. ಆದರೆ ಯಾರು ಏನು ಮಾಡುತ್ತಾರೋ ಅದನ್ನು ಅನುಭವಿಸಬೇಕಾಗುತ್ತದೆ ಎಂಬುದು ಸತ್ಯ. ಟ್ವಿಂಕಲ್ ಬಗ್ಗೆ ನನಗೆ ಯಾವುದೇ ದೂರುಗಳಿಲ್ಲ' ಎಂದು ಹೇಳಿದ್ದರು.

ಶಿಲ್ಪಾ ಶೆಟ್ಟಿ ಅವರು 'ಬಾಜಿಗರ್' ಚಿತ್ರದ ಮೂಲಕ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. ನಂತರ ಅವರು 'ಆಗ್', 'ಮೈ ಖಿಲಾಡಿ ತೂ ಅನಾಡಿ', 'ಆವೊ ಪ್ಯಾರ್ ಕರೆ', 'ಹಥ್‌ಕಡಿ', 'ಹಿಮ್ಮತ್', 'ಪೃಥ್ವಿ', 'ಇನ್ಸಾಫ್', 'ಜಾನ್‌ವರ್', 'ಧಡ್ಕನ್', 'ಇಂಡಿಯನ್', 'ಕರ್ಜ್', 'ರಿಶ್ತೆ', 'ದಸ್', 'ಫರೆಬ್', 'ಅಪ್ನೆ' ಸೇರಿದಂತೆ ಹಲವು ಚಿತ್ರಗಳಲ್ಲಿ ನಟಿಸಿದ್ದಾರೆ. ಆದರೆ, ಅವರು ಸ್ವಂತವಾಗಿ ಯಾವುದೇ ಹಿಟ್ ಚಿತ್ರಗಳನ್ನು ನೀಡಲಿಲ್ಲ. ನಂತರ ಅವರು ಚಿತ್ರರಂಗದಿಂದ ದೂರ ಉಳಿದರು.

14 ವರ್ಷಗಳ ನಂತರ ಮತ್ತೆ 'ಹಂಗಾಮ 2', 'ನಿಕ್ಕಮ್ಮ' ಮುಂತಾದ ಚಿತ್ರಗಳಲ್ಲಿ ಕಾಣಿಸಿಕೊಂಡರು. ಆದರೆ, ಅವರು ಮತ್ತೆ ಹಿಟ್ ಚಿತ್ರಗಳನ್ನು ನೀಡಲು ಸಾಧ್ಯವಾಗಲಿಲ್ಲ. ಶಿಲ್ಪಾ ಕೊನೆಯದಾಗಿ 'ಸುಖೀ' ಚಿತ್ರದಲ್ಲಿ ಕಾಣಿಸಿಕೊಂಡಿದ್ದರು. 2025 ರಲ್ಲಿ ಅವರು ದಕ್ಷಿಣ ಭಾರತದ ಚಿತ್ರ 'ಕೆಡಿ..ದಿ ಡೆವಿಲ್' ನಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಪ್ರಕಾಶಕ– ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು–560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು–562123 ಇಲ್ಲಿ ಮುದ್ರಿಸಲ್ಪಟ್ಟಿದೆ. RNI.KAR/KAN/2009/31934, ದೂರವಾಣಿ: 9448074878
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
RNI.KAR/KAN/2009/31934.VOLUME-16/ISSUE-39 Email-mussanje2010@gmail.com, Phone: 9448074878